ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 29 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 164 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಇಂದು 'ಕರ್ನಾಟಕ ಬಂದ್'

● ಕಾವೇರಿಗಾಗಿ ಕರುನಾಡ ಜನರ ಒಕ್ಕೊರಲ ಹೋರಾಟ ● ಬಂದ್‌ಗೆ ಪ್ರಚೋದನೆ ನೀಡುವವರ ವಿರುದ್ಧ ಕಾನೂನು ಕ್ರಮದ ಎಚ್ಚರಿಕೆ



ಬೆಂಗಳೂರು, ಸೆ.28(ಕೆಎಂಶಿ)– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ನಿರ್ಧಾರದ ವಿರುದ್ಧ ನಾಳೆ(ಶುಕ್ರವಾರ) 'ಕರ್ನಾಟಕ ಬಂದ್'ಗೆ ಕರೆ ನೀಡಲಾಗಿದ್ದು, ಈ ಬಂದ್‌ಗೆ ನೂರಾರು ಸಂಘಟನೆಗಳು ಬೆಂಬಲ ನೀಡಿವೆ.

ಸಂಘಟನೆಗಳು ಬೃಹತ್ ಪ್ರತಿಭಟನೆ ಮೂಲಕ ರಾಜ್ಯ ಕಾಂಗ್ರೆಸ್ ಸರ್ಕಾರ ಹಾಗೂ ಸುಪ್ರೀಂಕೋರ್ಟ್ ಗಮನ ಸೆಳೆಯುವ ಪಯತ್ನಕ್ಕೆ ಮುಂದಾಗಿವೆ. 'ಕರ್ನಾಟಕ ಬಂದ್'ಗೆ ಯಾರಾದರೂ ಪ್ರಚೋದನೆ ಮಾಡಿದರೆ ಅಂಥವರ ವಿರುದ್ಧ ಕಾನೂನು ಕ್ರಮ ಜರುಗಿಸುವುದಾಗಿ ರಾಜ್ಯ ಸರ್ಕಾರ ಎಚ್ಚರಿಕೆ ನೀಡಿದೆ.

ಬಂದ್‌ಗೆ ಸುಪ್ರೀಂಕೋರ್ಟ್ ಹಾಗೂ ಹೈಕೋರ್ಟ್ ಆದೇಶದ ಪ್ರಕಾರ ಅವಕಾಶವಿಲ್ಲ. ಇದನ್ನು ಮೀರಿ ಯಾರಾದರೂ ಬಂದ್‌ಗೆ ಪ್ರಚೋದನೆ ಇಲ್ಲವೇ ಬಲವಂತವಾಗಿ ಅಂಗಡಿ, ಮುಂಗಟ್ಟು ಮುಚ್ಚಿಸುವ ಪ್ರಯತ್ನ ಹಾಗೂ ಸಾರ್ವಜನಿಕ ಆಸ್ತಿ–ಪಾಸ್ತಿಗೆ ಹಾನಿ ಮಾಡಿದರೆ ಬಂಧಿಸುವುದಾಗಿ ಹೇಳಿದೆ. ಕನ್ನಡಪರ ಸಂಘಟನೆ, ಚಲನಚಿತ್ರೋದ್ಯಮ ಸೇರಿದಂತೆ ಹಲವಾರು ಸಂಘಟನೆಗಳು ಬಂದ್‌ಗೆ ಬೆಂಬಲ ಸೂಚಿಸಿವೆ. ಬಂದ್ ಕುರಿತಂತೆ ಪ್ರತಿಕ್ರಿಯಿಸಿರುವ ಗೃಹ ಸಚಿವ ಡಾ. ಜಿ.ಪರಮೇಶ್ವರ್, ಮತ್ತೆ ಕರ್ನಾಟಕ ಬಂದ್ ಮಾಡಲು ಅವಕಾಶವೇ ಇಲ್ಲ. ಒಂದು ವೇಳೆ ಯಾರಾದರೂ ಪ್ರಚೋದನೆ ಮಾಡಿದರೆ ಅಂಥವರನ್ನು ದಸ್ತಗಿರಿ ಮಾಡುವುದಾಗಿ ಎಚ್ಚರಿಸಿದ್ದಾರೆ. ಮೊನ್ನೆ ನಡೆದ ಬಂದ್‌ನಿಂದ 1500–2000 ಕೋಟಿ ರೂ. ನಷ್ಟ ಉಂಟಾಗಿದೆ. ಮತ್ತೆ ಬಂದ್ ಮಾಡಿದರೆ ಜನ ಜೀವನದ ಮೇಲೆ ಭಾರೀ ಪರಿಣಾಮ ಬೀರುತ್ತದೆ. ಪ್ರತಿಭಟನೆ ಮಾಡಿಕೊಳ್ಳಿ, ಅದಕ್ಕೆ ನಮ್ಮ ವಿರೋಧವಿಲ್ಲ. ಆದರೆ, ಬಂದ್ ಮಾಡಿದರೆ, ರಾಜ್ಯದ ಬೊಕ್ಕಸದ ಮೇಲೂ ಹಾಗೂ ದಿನನಿತ್ಯ ದುಡಿದು ತಿನ್ನುವವರಿಗೂ ತೊಂದರೆ ಆಗಲಿದೆ. ● 9ನೇ ಪುಟಕ್ಕೆ

ಕಾವೇರಿ ಬಿಕ್ಕಟ್ಟು: ಇಂದು ಸಿಎಂ ನೇತೃತ್ವದಲ್ಲಿ ತಜ್ಞರ ಸಭೆ



ಬೆಂಗಳೂರು: ಕಾವೇರಿ ನದಿ ನೀರು ಹಂಚಿಕೆ ಸಂಬಂಧ ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ ತಜ್ಞರ ಸಭೆ ಕರೆದಿದ್ದಾರೆ. ಸುಪ್ರೀಂ ಕೋರ್ಟ್, ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿಗಳಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವವರು, ಕಾನೂನು ಮತ್ತು ನೀರಾವರಿ ತಜ್ಞರನ್ನು ಸಭೆಗೆ ಆಹ್ವಾನಿಸಲಾಗಿದೆ. ಕಾವೇರಿ ನದಿ ನೀರು ಸಂಗ್ರಹ ಕಡಿಮೆಯಾಗಿದ್ದು, ● 9ನೇ ಪುಟಕ್ಕೆ

ಬಂದ್‌ಗೆ ಅವಕಾಶವಿಲ್ಲ; ಪ್ರತಿಭಟನೆ ತಡೆಯಲ್ಲ: ಡಿಕೆಶಿ



ಬೆಂಗಳೂರು: ಪ್ರತಿಭಟನೆ ಮಾಡಲು ಯಾರಿಗೂ ನಾವು ಅಡ್ಡಿ ಮಾಡುವುದಿಲ್ಲ ಆದರೆ ಬಂದ್ ಮಾಡಲು ಅವಕಾಶವಿಲ್ಲ ಎಂದು ಜಲ ಸಂಪನ್ಮೂಲ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಳೆ ಸಾರ್ವಜನಿಕರಿಗೆ ರಕ್ಷಣೆ ಕೊಟ್ಟೇ ಕೊಡುತ್ತೇವೆ. ಸುಪ್ರೀಂಕೋರ್ಟ್, ● 9ನೇ ಪುಟಕ್ಕೆ

ಇಂದು ಎಕ್ಸ್‌ಪ್ರೆಸ್ ವೇನಲ್ಲಿ ನಿಷೇಧಾಜ್ಞೆ ಜಾರಿ

ಮಂಡ್ಯ ಜಿಲ್ಲೆಯ ಶಾಲಾ ಕಾಲೇಜಿಗೆ ರಜೆ



ಮಂಡ್ಯ, ಸೆ.28(ಮೋಹನ್‌ರಾಜ್)– ಕರ್ನಾಟಕ ಬಂದ್ ವೇಳೆ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಬಂದ್‌ಗೆ ರೈತ ಸಂಘಟನೆಗಳು ಕರೆ ನೀಡಿರುವ ಹಿನ್ನೆಲೆಯಲ್ಲಿ ಶುಕ್ರವಾರ ಮಂಡ್ಯ ಜಿಲ್ಲಾ ವ್ಯಾಪ್ತಿಯ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ 144 ಸೆಕ್ಷನ್‌ನಡಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಮಂಡ್ಯ ಜಿಲ್ಲಾದ್ಯಂತ ರೈಲು ಸಂಚಾರ ವ್ಯಾಪ್ತಿಯಲ್ಲೂ 144 ಸೆಕ್ಷನ್ ಜಾರಿ ಮಾಡಿದ್ದು, ಬೆಳಗ್ಗೆ 6 ರಿಂದ ಸಂಜೆ 6ರವರೆಗೆ ಜಾರಿಯಲ್ಲಿರುತ್ತದೆ. ಹೀಗಾಗಿ ಹೆದ್ದಾರಿ ಹಾಗೂ ರೈಲ್ವೆ ಸಂಚಾರ ವ್ಯಾಪ್ತಿಯಲ್ಲಿ ಪ್ರತಿಭಟನೆ ಮಾಡುವಂತಿಲ್ಲ. ಹಾಗೊಂದು ವೇಳೆ ಮಾಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಮಂಡ್ಯ ಎಸಿ ಎಂ.ಶಿವಮೂರ್ತಿ ಆದೇಶಿಸಿದ್ದಾರೆ.

ಹಿತರಕ್ಷಣಾ ಸಮಿತಿಯಿಂದ ಬಂದ್‌ಗೆ ಕರೆ: ಕರ್ನಾಟಕ ಬಂದ್ ಬೆಂಬಲಿಸಿ ಮಂಡ್ಯ ಬಂದ್ ಮಾಡಲು ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಿರ್ಧರಿಸಿದೆ. ಬಂದ್‌ಗೆ ಎಲ್ಲಾ ಪ್ರಮುಖ ಸಂಘಟನೆಗಳು ಬೆಂಬಲ ಘೋಷಣೆ ಮಾಡಿದ್ದು, ಬೆಳಗ್ಗೆ 8 ರಿಂದ ಸಂಜೆ 6ರವರೆಗೆ ಬಂದ್ ನಡೆಯಲಿದೆ.

ಮಂಡ್ಯದ ಎಲ್ಲಾ ಅಂಗಡಿ ಮುಂಗಟ್ಟುಗಳು, ಹೋಟೆಲ್‌ಗಳು, ಚಿತ್ರಮಂದಿರಗಳು, ಆಟೋ ಸಂಚಾರ, ಖಾಸಗಿ ಬಸ್ ಸಂಚಾರ ಬಂದ್ ಆಗಲಿದ್ದು, ಶಾಲಾ–ಕಾಲೇಜುಗಳಿಗೆ ರಜೆ ನೀಡಲಾಗಿದೆ. ತುರ್ತು ಸೇವೆಗಳಾದ ಮೆಡಿಕಲ್, ಆಸ್ಪತ್ರೆ, ಹಾಲಿನ ಬೂತ್ ಮಾತ್ರ ತೆರೆದಿರಲಿದ್ದು, ಬೆಳಗ್ಗೆ 9ಗಂಟೆಗೆ ಮಂಡ್ಯದಲ್ಲಿ ಮಾನವ ಸರಪಳಿ ಹಾಗೂ ಬೃಹತ್ ಪ್ರತಿ ಭಟನಾ ಮೆರವಣಿಗೆ ● 9ನೇ ಪುಟಕ್ಕೆ

ಮೈಸೂರು, ಮಂಡ್ಯ, ಚಾ.ನಗರ, ಹಾಸನದಲ್ಲಿ ವ್ಯಾಪಕ ಬೆಂಬಲ

● ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಕೈಗಾರಿಕೆಗಳು, ಅಂಗಡಿ–ಮುಂಗಟ್ಟು ಬಂದ್
● ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ, ರೈಲು ತಡೆ; ಮೈಸೂರು ಮಾರುಕಟ್ಟೆಗಳು ಸ್ತಬ್ಧ
● ಮೈಸೂರಿನಲ್ಲಿ ಭಾರೀ ಬಂದೋಬಸ್ತ್‌ಗಾಗಿ ಎರಡು ಸಾವಿರ ಪೊಲೀಸರ ನಿಯೋಜನೆ

ಆಸ್ಪತ್ರೆ, ಮೆಡಿಕಲ್ ಸ್ಟೋರ್, ಹಾಲು ಮಾರಾಟಕ್ಕಿಲ್ಲ ಅಡ್ಡಿ



ಮೈಸೂರು, ಸೆ.28(ಬಿಎಲ್‌ಯು)–ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ವಿರೋಧಿಸಿ ರೈತರು ಹಾಗೂ ಕನ್ನಡಪರ ಸಂಘಟನೆಗಳು ಕರೆ ನೀಡಿರುವ ಕರ್ನಾಟಕ ಬಂದ್‌ಗೆ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನದ ಹಲವು ಸಂಘ–ಸಂಸ್ಥೆಗಳು ಸಂಪೂರ್ಣ ಬೆಂಬಲ ನೀಡಿವೆ. ಮೈಸೂರು ಸೇರಿದಂತೆ ಇಡೀ ಕರ್ನಾಟಕ ಶುಕ್ರವಾರ ಸ್ತಬ್ಧಗೊಳ್ಳುವ ಸಾಧ್ಯತೆ ಇದೆ. ಕಾವೇರಿ ಜಲಾಯನ ಪ್ರದೇಶದ ಅಣೆಕಟ್ಟುಗಳಲ್ಲಿ ನೀರಿನ ಪ್ರಮಾಣ ಕುಸಿದಿದೆ. ಕೆಆರ್‌ಎಸ್‌ನಲ್ಲಿ ಡೆಡ್ ಸ್ಟೋರೇಜ್ ಬಿಟ್ಟು ಕೇವಲ 22 ಟಿಎಂಸಿ ನೀರು ಮಾತ್ರ ಇದೆ. ಜಲಾಶಯ ಬರಿದಾಗುತ್ತಿರುವ ಕಾರಣ ಬೆಳೆಗೆ ಇರಲಿ, ಕುಡಿಯುವ ನೀರಿಗೂ ಹಾಹಾಕಾರ ಉಂಟಾಗುವ ಸಾಧ್ಯತೆ ಇದೆ. ವಾಸ್ತವ ಸ್ಥಿತಿ ತಿಳಿಯದ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ನೀರು ಬಿಡುವಂತೆ ಕರ್ನಾಟಕಕ್ಕೆ ಸರಣಿ ಆದೇಶ ನೀಡುತ್ತಿದೆ. ಪ್ರಾಧಿಕಾರದ ಆದೇಶವನ್ನು ಕರ್ನಾಟಕ ಸರ್ಕಾರ ಚಾಚೂ ತಪ್ಪದೆ ಪಾಲಿಸುತ್ತಿದೆ. ● 7ನೇ ಪುಟಕ್ಕೆ

[ಸಂಗ್ರಹ ಚಿತ್ರ]



ಕಾರ್ಮಿಕರಿಗೆ ಇಂದು ರಜಾ; ಭಾನುವಾರ ಕರ್ತವ್ಯ

ನಾಳೆ ಕರೆ ನೀಡಿರುವ ಕರ್ನಾಟಕ ಬಂದ್‌ಗೆ ಮೈಸೂರು, ಮಂಡ್ಯ, ಚಾಮರಾಜನಗರ ಕೈಗಾರಿಕೋದ್ಯಮಿಗಳ ಸಂಘ ಸಂಪೂರ್ಣ ಬೆಂಬಲ ನೀಡಿದೆ. ಎಲ್ಲಾ ರೀತಿಯ ಕೈಗಾರಿಕೆಗಳಿಗೆ ಶುಕ್ರವಾರ ರಜೆ ನೀಡಲಾಗಿದ್ದು, ಕಾವೇರಿ ಹೋರಾಟದಲ್ಲಿ ಭಾಗವಹಿಸುವಂತೆ ಕಾರ್ಮಿಕರಿಗೆ ಕರೆ ನೀಡಲಾಗಿದೆ. ಕೈಗಾರಿಕೆಗಳಲ್ಲಿ ಭಾನುವಾರ ಕರ್ತವ್ಯ ನಿರ್ವಹಿಸುವಂತೆ ಸೂಚಿಸಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್ ತಿಳಿಸಿದ್ದಾರೆ.

ಹೋಟೆಲ್‌ಗಳು ಸಂಪೂರ್ಣ ಬಂದ್

ಕನ್ನಡಪರ ಸಂಘಟನೆಗಳು ಕರೆ ನೀಡಿರುವ 'ಕರ್ನಾಟಕ ಬಂದ್'ಗೆ ಮೈಸೂರಿನ ಹೋಟೆಲ್ ಮಾಲೀಕರ ಸಂಘ ಕೂಡ ಬೆಂಬಲ ನೀಡಿದೆ. ಮೈಸೂರಿನಲ್ಲಿರುವ ಸುಮಾರು ಒಂದೂವರೆ ಸಾವಿರ ಹೋಟೆಲ್‌ಗಳನ್ನು ಬೆಳಗ್ಗೆ 6 ರಿಂದ ಸಂಜೆ 6 ಗಂಟೆ ತನಕ ಮುಚ್ಚಲಾಗುವುದು. ಈ ಮೂಲಕ ಕಾವೇರಿ ಹೋರಾಟಕ್ಕೆ ಕೈಜೋಡಿಸಲಾಗುವುದು ಎಂದು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ತಿಳಿಸಿದ್ದಾರೆ.

ಇಂದು ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಶಾಲಾ–ಕಾಲೇಜುಗಳಿಗೆ ರಜೆ

ಮೈಸೂರು, ಸೆ.28(ಬಿಎಲ್‌ಯು)– ಕರ್ನಾಟಕ ಬಂದ್ ಹಿನ್ನೆಲೆ ನಾಳೆ ಅಂದರೆ ಸೆ.29 ರಂದು ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಮೈಸೂರು ಜಿಲ್ಲೆಯಲ್ಲಿ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಖಾಸಗಿ ವಿದ್ಯಾಸಂಸ್ಥೆಗಳಿಗೆ ರಜೆ ಘೋಷಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಹೇಳಿದ್ದಾರೆ.

ಆಸ್ತಿ–ಪಾಸ್ತಿಗೆ ನಷ್ಟವಾದರೆ ಸಂಘಟಕರೇ ಹೊಣೆ



ಶುಕ್ರವಾರ ಕರೆ ನೀಡಿರುವ 'ಕರ್ನಾಟಕ ಬಂದ್' ಕಾನೂನು ಬಾಹಿರ ಹಾಗೂ ಜನ ಸಾಮಾನ್ಯರ ಮೂಲಭೂತ ಹಕ್ಕಿಗೆ ಚ್ಯುತಿ ಆಗುವ ಕಾರಣ ಯಾವುದೇ ರೀತಿಯ ಬಂದ್‌ಗೆ ಅವಕಾಶವಿಲ್ಲ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಎಚ್ಚರಿಸಿದ್ದಾರೆ. ಯಾವುದೇ ಬಂದ್‌ಗೆ ಕರೆ ನೀಡುವುದು ಕಾನೂನು ಬಾಹಿರ, ಸಂವಿಧಾನ ವಿರೋಧಿ ● 7ನೇ ಪುಟಕ್ಕೆ

ತಮಿಳ್ನಾಡಿಗೆ ಬಸ್ ಸ್ಥಗಿತ; ಪರಿಸ್ಥಿತಿ ಆಧರಿಸಿ ಇತರೆ ನಿರ್ಧಾರ



ಮೈಸೂರಿನಿಂದ ತಮಿಳುನಾಡಿಗೆ ಹೋಗುವ ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚಾರವನ್ನು ಗುರುವಾರ ರಾತ್ರಿಯಿಂದ ಶುಕ್ರವಾರ ರಾತ್ರಿ ತನಕ ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ತಿಳಿಸಿದ್ದಾರೆ. ತಮಿಳುನಾಡಿನ ಹಲವು ಸ್ಥಳಗಳಿಗೆ ಮೈಸೂರಿನಿಂದ 48 ಬಸ್‌ಗಳು ● 7ನೇ ಪುಟಕ್ಕೆ

ಕಾವೇರಿ ವಿಷಯದಲ್ಲಿ ರಾಜ್ಯ ಸರ್ಕಾರದ ನಿರ್ಲಕ್ಷ್ಯತೆ ಖಂಡಿಸಿ

ಇಂದು ಹೆದ್ದಾರಿ ತಡೆ; ಸಿಎಂ ನಿವಾಸಕ್ಕೆ ಮುತ್ತಿಗೆ

● ಕರ್ನಾಟಕ ಜಲ ಸಂರಕ್ಷಣಾ ಸಮಿತಿ ನಿರ್ಧಾರ ● ಮುಂದಿನ ಲೋಕಸಭಾ ಚುನಾವಣೆಗೆ 'ನೀರಿನ ರಾಜಕೀಯ'



ಮೈಸೂರು, ಸೆ.28(ಎಸ್‌ಬಿಡಿ)–ಕಾವೇರಿ ನದಿ ನೀರು ವಿಚಾರವಾಗಿ ರಾಜ್ಯ ಸರ್ಕಾರ ನಿರ್ಲಕ್ಷ್ಯ ಧೋರಣೆ ತಾಳಿರುವ ಹಿನ್ನೆಲೆಯಲ್ಲಿ ಶುಕ್ರವಾರ ಕೆಲ ಗಂಟೆಗಳ ಕಾಲ ರಾಜ್ಯಾದ್ಯಂತ ಹೆದ್ದಾರಿ ತಡೆ ಜೊತೆಗೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ನಿವಾಸಕ್ಕೆ ಮುತ್ತಿಗೆ ಹಾಕಲು ಕರ್ನಾಟಕ ಜಲಸಂರಕ್ಷಣಾ ಸಮಿತಿ ನಿರ್ಧರಿಸಿದೆ ಎಂದು ಸಮಿತಿ ಸಂಚಾಲಕ ಕುರುಬೂರು ಶಾಂತಕುಮಾರ್ ತಿಳಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಶುಕ್ರವಾರ ಬೆಳಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ರಾಜ್ಯಾದ್ಯಂತ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳನ್ನು ಬಂದ್ ಮಾಡಲಾಗುವುದು. ಆದರೆ ಬೆಂಗಳೂರಿನಲ್ಲಿ ಮೊನ್ನೆ ಬಂದ್ ಆಚರಿಸಿದ್ದರಿಂದ ಹೆದ್ದಾರಿ ಬಂದ್ ಮಾಡದೆ ಮುಖ್ಯಮಂತ್ರಿಗಳ ನಿವಾಸಕ್ಕೆ ಮುತ್ತಿಗೆ ಹಾಕಲಾಗುವುದು ಎಂದರು. ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ತಕ್ಷಣ ನಿಲ್ಲಿಸಬೇಕೆಂದು ಒತ್ತಾಯಿಸಿ, ಸೆ.26ರಂದು ಬೆಂಗಳೂರು ಬಂದ್ ಮಾಡಲಾಗಿತ್ತು. ಅಂದಿನ ಶಾಂತಿಯುತ ಬಂದ್‌ಗೆ ಹಲವು ಸಂಘಟನೆಗಳು ಹಾಗೂ ಬೆಂಗಳೂರಿನ ಜನತೆ ಸಹಕಾರ ನೀಡಿ, ಯಶಸ್ವಿಗೊಳಿಸಿದರು. ಪ್ರತಿಭಟನಾ ಸ್ಥಳಕ್ಕೆ ಸರ್ಕಾರದ ಪ್ರತಿನಿಧಿಯಾಗಿ ಭೇಟಿ ನೀಡಿದ್ದ ಸಚಿವ ರಾಮಲಿಂಗ ರೆಡ್ಡಿ ಅವರು, ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಮೂರು ದಿನಗಳಲ್ಲಿ ಸಮಿತಿ ಪದಾಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸಿ, ಚರ್ಚಿಸುವುದಾಗಿ ಭರವಸೆ ನೀಡಿದ್ದರು. ಆದರೆ ಈ ನಿಟ್ಟಿನಲ್ಲಿ ಈವರೆಗೆ ಯಾವುದೇ ಕ್ರಮ ವಹಿಸಿಲ್ಲ ಎಂದು ಆರೋಪಿಸಿದರು. ತಮಿಳುನಾಡು ಸರ್ಕಾರ 12,500 ಕ್ಯುಸೆಕ್ ನೀರಿಗೆ ಬೇಡಿಕೆಯಿಟ್ಟಿತ್ತು. ಆದರೆ ಬೆಂಗಳೂರು ಬಂದ್ ಪರಿಣಾಮ ಕಾವೇರಿ ನೀರು ನಿಯಂತ್ರಣಾ ಸಮಿತಿ ತಮಿಳುನಾಡಿಗೆ ಹರಿಸುವ ನೀರಿನ ಪ್ರಮಾಣವನ್ನು 5 ರಿಂದ 3 ಸಾವಿರ ಕ್ಯುಸೆಕ್‌ಗೆ ಇಳಿಕೆ ಮಾಡಿತು. ಈ ಆದೇಶ ತೃಪ್ತಿದಾಯಕವಲ್ಲ. ಸಂಪೂರ್ಣವಾಗಿ ನೀರು ಬಂದ್ ಮಾಡಬೇಕೆಂಬುದು ನಮ್ಮ ಒತ್ತಾಯ. ಅಲ್ಲದೆ ಕರ್ನಾಟಕದಲ್ಲಿ ವಾಡಿಕೆಗಿಂತ ಶೇ.53ರಷ್ಟು ಕಡಿಮೆ ಮಳೆಯಾಗಿದ್ದು, ಜಲಾಶಯಗಳ ನೀರಿನ ಪ್ರಮಾಣವೂ ಕುಸಿದಿದೆ ಎಂದು ಕಾವೇರಿ ನೀರು ನಿಯಂತ್ರಣಾ ಸಮಿತಿಯೂ ಹೇಳಿದೆ. ಆದರೂ ರಾಜ್ಯದ ಮೇಲೆ ಗದಾಪ್ರಹಾರ ಮುಂದುವರೆದಿದೆ ಈ ಗಂಭೀರ ವಿಚಾರವನ್ನು ಸರ್ಕಾರವೂ ಲಘುವಾಗಿ ಪರಿಗಣಿಸಿದೆ. ಈ ಹಿನ್ನೆಲೆಯಲ್ಲಿ ರೈತ ಸಂಘಟನೆಗಳು ಹಾಗೂ ಕರ್ನಾಟಕ ಜಲ ಸಂರಕ್ಷಣಾ ಸಮಿತಿಯ 200ಕ್ಕೂ ಹೆಚ್ಚು ಸಂಘಟನೆಗಳೊಂದಿಗೆ ಚರ್ಚೆ ಮಾಡಿ, ಹೆದ್ದಾರಿ ತಡೆದು ಸರ್ಕಾರಕ್ಕೆ ಬಿಸಿ ಮುಟ್ಟಿಸಲು ನಿರ್ಣಯ ಕೈಗೊಳ್ಳಲಾಗಿದೆ ಎಂದರು.

ರಾಜಕೀಯ ಹಿತಾಸಕ್ತಿ: ಇದೇ ವೇಳೆ ಖಾಸಗಿ ವಾಹಿನಿಗಳೊಂದಿಗೆ ಮಾತನಾಡಿ, ಕಾವೇರಿ ನದಿ ನೀರು ವಿಚಾರದಲ್ಲಿ ಮೂರೂ ಪಕ್ಷಗಳು ಮುಂದಿನ ಲೋಕಸಭಾ ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ರಾಜಕೀಯ ಮಾಡುತ್ತಿದ್ದಾರೆ. ಆದರೆ ನಾವು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದವರಲ್ಲ. ರಾಜ್ಯದ ರೈತರು ಹಾಗೂ ಜನತೆ ದೃಷ್ಟಿಯಿಂದ ಹೋರಾಟ ಮಾಡುತ್ತಿದ್ದೇವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನಮ್ಮ ವಕೀಲರು, ಹಿಂದೆ ಅವರೂ ಕಾವೇರಿ ಹೋರಾಟದಲ್ಲಿ ಭಾಗಿಯಾಗಿದ್ದವರು. ಅವರಿಗೆ ತಿಳಿಯದ ವಿಚಾರವೇನಿಲ್ಲ. ಅವರು ರಾಜಕೀಯ ಸುಳಿಯಲ್ಲಿ ಸಿಲುಕಿದ್ದಾರೆ. ರಾಜ್ಯದಲ್ಲಿ ಶೇ.65ರಷ್ಟು ಮಳೆ ಕೊರತೆಯಾಗಿದ್ದು, 250 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 195 ತಾಲೂಕುಗಳಲ್ಲಿ ಬರ ಘೋಷಣೆ ಮಾಡಿದ್ದರೂ ನೀರು ಬಿಡುತ್ತಲೇ ಇದ್ದಾರೆ. ಹೀಗೆ ಜನ ಸಾಮಾನ್ಯರ ಬದುಕನ್ನು ಹಾಳು ಮಾಡುವ ಸರ್ಕಾರ ಆಯ್ಕೆ ಮಾಡಿದ ಮೇಲೆ ಎಚ್ಚರಿಸುವ ನಿಟ್ಟಿನಲ್ಲಿ ಹೋರಾಟ ಅನಿವಾರ್ಯ. ಬಂಗಾರಪ್ಪನವರಂತೆ ದಿಟ್ಟ ನಿರ್ಧಾರ ಕೈಗೊಳ್ಳಲು ಇವರಿಗೇಕೆ ಸಾಧ್ಯವಾಗುತ್ತಿಲ್ಲ ಎಂದು ಪ್ರಶ್ನಿಸಿದರು.

ಮುಕ್ತ ವಿವಿ ಪ್ರಶ್ನೆ ಪತ್ರಿಕೆ ಮಾರಾಟ ಪ್ರಕರಣ

ಸಿಸಿಬಿ ಪೊಲೀಸರಿಂದ ಆರು ಮಂದಿ ಬಂಧನ

● ಕೆಲಸಕ್ಕೆ ಸೇರಲು ರಾಜಕಾರಣಿಗೆ ನೀಡಲು ಮಾಡಿದ್ದ ಸಾಲ ತೀರಿಸಲು ಪ್ರಶ್ನೆ ಪತ್ರಿಕೆ ಮಾರಾಟ ದಂಧೆ!? ● ಬಂಧಿತರೆಲ್ಲರೂ ಹಂಗಾಮಿ ನೌಕರರು



ಮೈಸೂರು, ಸೆ.28(ಆರ್‌ಕೆ)–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪರೀಕ್ಷಾ ಪ್ರಶ್ನೆ ಪತ್ರಿಕೆ ಮಾರಾಟ ಪ್ರಕರಣ ಸಂಬಂಧ ಸಿಸಿಬಿ ಪೊಲೀಸರು ಒಟ್ಟು ಆರು ಮಂದಿಯನ್ನು ಬಂಧಿಸಿದ್ದಾರೆ. ಚಾಮರಾಜನಗರ ಪ್ರಾದೇಶಿಕ ಕೇಂದ್ರದ ದ್ವಿತೀಯ ದರ್ಜೆ ಸಹಾಯಕ, ಓರ್ವ 'ಡಿ' ಗ್ರೂಪ್ ನೌಕರ, ಮಂಗಳೂರು ಪ್ರಾದೇಶಿಕ ಕೇಂದ್ರದ ಇಬ್ಬರು ಹಾಗೂ ಮೈಸೂರಿನ ಇಬ್ಬರು ಹಂಗಾಮಿ ನೌಕರರನ್ನು ಬಂಧಿಸಿರುವ ಪೊಲೀಸರು, ● 9ನೇ ಪುಟಕ್ಕೆ

ಕೇಂದ್ರ ಸರ್ಕಾರದ ಜಾಣ ಕುರುಡುತನ



ಮೈಸೂರು,ಸೆ.28–ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಉಭಯ ರಾಜ್ಯಗಳ ನಡುವೆ ಉಂಟಾಗಿರುವ ಬಿಕ್ಕಟ್ಟು ಶಮನಕ್ಕೆ ಕೇಂದ್ರ ಸರ್ಕಾರ ಮುಂದಾಗಬೇಕು ಎಂದು ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಆಗ್ರಹಿಸಿದ್ದಾರೆ.

ಶತಮಾನಗಳ ಕಾಲದಿಂದಲೂ ಕಗ್ಗಂಟಾಗಿಯೇ ಉಳಿದಿರುವ, ಉಳಿಯುವಂತೆ ಮಾಡಿರುವುದರ ಹಿಂದೆ ರಾಜಕೀಯ ಹಿತಾಸಕ್ತಿ ಅಡಗಿರುವ ಕಟುಸತ್ಯ ನಾಡಿನ ಜನತೆಗೆ ತಿಳಿದೇ ಇದೆ ಎಂದು ತಮ್ಮ ಪ್ರಕಟಣೆ ಹೇಳಿಕೆಯಲ್ಲಿ ಕುಟುಕಿದ್ದಾರೆ.

ನೀರು ಪ್ರಾಕೃತಿಕ ಸಂಪನ್ಮೂಲವಾದರೂ, ಆ ವಿಚಾರವನ್ನಿಟ್ಟುಕೊಂಡು ಎರಡು ರಾಜ್ಯಗಳ ನಡುವೆ ಕಂದಕ ಸೃಷ್ಟಿಸುತ್ತಿರುವುದರ ಹಿಂದೆ ಭಾಷಾವಾರು ಹಾಗೂ ಪ್ರಾದೇಶಿಕವಾರು ಇರುವ ತಾರತಮ್ಯ ಕಾರಣವಾಗಿದೆ. ಈವರೆಗೆ ದೇಶವನ್ನಾಳಿದ ಹಾಗೂ ಆಳುತ್ತಿರುವ ಪ್ರಮುಖ ಎರಡು ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳೇ ಉಭಯ ರಾಜ್ಯಗಳ ನಡುವಿನ ಇಂದಿನ ಈ ಬಿಕ್ಕಟ್ಟಿಗೆ ಕಾರಣವಾಗಿವೆ. ನೀರಿನ ವಿಚಾರದಲ್ಲಿ ಎರಡೂ ರಾಜ್ಯಗಳ ನಡುವೆ ಸಮನ್ವಯ ಸಾಧಿಸಿ ಸಮಾಧಾನಕರ ಒಪ್ಪಂದ ಮಾಡುವ ಸಾಧ್ಯತೆ ಸಾಕಷ್ಟು ಇದ್ದರೂ ಈವರೆಗೆ ದೇಶವನ್ನಾಳಿದ ಕೇಂದ್ರ ಸರ್ಕಾರಗಳು ತನ್ನ ಜಾಣ ಕುರುಡುತನ ಪ್ರದರ್ಶಿಸಿರುವುದು ಕಟುಸತ್ಯ.

ಪ್ರಸ್ತುತ ಸಮಸ್ಯೆ ಜಟಿಲವಾಗಿದ್ದರೂ, ಕೇಂದ್ರದಲ್ಲಿರುವ ಬಿಜೆಪಿ ನೇತೃತ್ವದ ಸರ್ಕಾರ ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಸಲುವಾಗಿ ಮೌನ ವಹಿಸುವುದು ಅಕ್ಷಮ್ಯ.

ಕೇಂದ್ರ ಸರ್ಕಾರದ ಈ ಮೌನದ ಹಿಂದೆ ಮುಂಬರುವ ಲೋಕಸಭಾ ಚುನಾವಣೆ ಲೆಕ್ಕಾಚಾರ ಇದೆ ಎಂಬ ಮಾತುಗಳು ಕೇಳಿ ಬರುತ್ತಿರುವುದು ಸುಳ್ಳಲ್ಲ. ಏಕೆಂದರೆ, ರಾಜ್ಯದಿಂದ ಎರಡು ಡಜನ್ ಸಂಸದರು ಬಿಜೆಪಿಯಿಂದ ಆಯ್ಕೆಯಾಗಿದ್ದಾರೆ. ಆ ಪೈಕಿ ಕೆಲವರು ಸಚಿವ ಸ್ಥಾನವನ್ನೂ ಅಲಂಕರಿಸಿದ್ದಾರೆ. ಆದರೆ, ಅವರಿಗೆ ರಾಜ್ಯದ ಬಗೆಗಿನ ಕಾಳಜಿ ಮಾತ್ರ ಶೂನ್ಯ. ಇದು ಅವರ ರಾಜಕೀಯ ಲೆಕ್ಕಾಚಾರಕ್ಕೆ ಸಾಕ್ಷಿಯಾಗುತ್ತಿದೆ.

ಒಕ್ಕೂಟ ವ್ಯವಸ್ಥೆಯ ಮೇಲೆ ಪ್ರಬಲ ನಂಬಿಕೆ ಇಟ್ಟಿರುವ ಹಾಗೂ ಪ್ರಪಂಚದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳ ಪೈಕಿ ಮುಂಚೂಣಿಯಲ್ಲಿರುವ ಭಾರತದಂತಹ ರಾಷ್ಟ್ರದಲ್ಲಿ ಸಣ್ಣ ಸಮಸ್ಯೆಯೊಂದು ಎರಡು ಶತಮಾನ ಕಳೆದರೂ ಸಮಸ್ಯೆಯಾಗಿಯೇ ಉಳಿದಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿ ಎಂದು ತಿಳಿಸಿದ್ದಾರೆ.

ಬಿಜೆಪಿ, ಜೆಡಿಎಸ್‌ಗೆ ಸ್ವಂತ ಶಕ್ತಿ ಇಲ್ಲ



ಮೈಸೂರು, ಸೆ.28–ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್, ತಮ್ಮ ಸ್ವಂತ ಶಕ್ತಿಯಿಂದ ಹೋರಾಟ ರೂಪಿಸದೇ, ಮೂರನೇ ವ್ಯಕ್ತಿಗಳು ಕರೆ ನೀಡಿರುವ ಬಂದ್‌ಗೆ ಬೆಂಬಲ ನೀಡುತ್ತಿರುವುದು ರಾಜಕೀಯ ದಿವಾಳಿತನದ ಸಂಕೇತ ಎಂದು ಕೆಪಿಸಿಸಿ ವಕ್ತಾರ ಎಚ್.ಎ.ವೆಂಕಟೇಶ್ ತಿಳಿಸಿದ್ದಾರೆ.

ರಾಜ್ಯದ ಹಕ್ಕು ದೊರಕಿಸಿಕೊಳ್ಳಲು ಎಲ್ಲಾ ನ್ಯಾಯ ಮಾರ್ಗಗಳ ಮೂಲಕ ಕಾಂಗ್ರೆಸ್ ಸರ್ಕಾರ ಹೋರಾಟ ನಡೆಸುತ್ತಿದೆ. ಆದರೂ ಜನರನ್ನು ದಾರಿ ತಪ್ಪಿಸುವ ಬಂದ್ ಕರೆ ಮೂಲಕ ಇಕ್ಕಟ್ಟಿನ ಸನ್ನಿವೇಶ ಸೃಷ್ಟಿಸಲು ಕೆಲವು ಸಂಘಟನೆಗಳು ಮುಂದಾಗಿರುವುದು ಸಲ್ಲದ ಬೆಳವಣಿಗೆ. ಅದರಲ್ಲೂ ವಿರೋಧಪಕ್ಷಗಳಾಗಿರುವ ಬಿಜೆಪಿ ಮತ್ತು ಜೆಡಿಎಸ್, ತಮ್ಮ ಸ್ವಂತ ಶಕ್ತಿಯಿಂದ ಹೋರಾಟ ರೂಪಿಸದೇ, ಮೂರನೇ ವ್ಯಕ್ತಿಗಳು ಕರೆ ನೀಡಿರುವ ಬಂದ್‌ಗೆ ಬೆಂಬಲ ನೀಡುತ್ತಿರುವುದು ರಾಜಕೀಯ ದಿವಾಳಿತನ. ಹೀಗಾಗಿ ಕಾವೇರಿ ವಿಷಯದಲ್ಲಿ ಯಾವುದೇ ಹೊಸ ಸಲಹೆ ನೀಡಿ, ರಾಜ್ಯದ ಹಿತ ಕಾಪಾಡಲು ಸರ್ಕಾರದೊಂದಿಗೆ ಕೈಜೋಡಿಸಲು ಈ ವಿಪಕ್ಷಗಳಿಗೆ ಮನಸ್ಸಿಲ್ಲ ಎನ್ನುವುದು ಸಾಬೀತಾಗಿದೆ ಎಂದು ಟೀಕಿಸಿದ್ದಾರೆ.

ಪಕ್ಷಗಳು ಕೇವಲ ಮೊಸಳೆ ಕಣ್ಣೀರು ಸುರಿಸುತ್ತಾ, ಕಾವೇರಿ ವಿವಾದ ಕುರಿತು ತಪ್ಪು ಮಾಹಿತಿಗಳನ್ನು ಮುಂದಿಡುತ್ತಾ ತಮ್ಮ ಬೇಳೆ ಬೇಯಿಸಿಕೊಳ್ಳಲು ಯತ್ನಿಸುತ್ತಿರುವುದು ಖಂಡನೀಯವಾಗಿದೆ. ಇಷ್ಟಕ್ಕೂ ಸುಪ್ರೀಂಕೋರ್ಟ್ ಬಂದ್ ನಂತಹ ಪ್ರಕ್ರಿಯೆಗಳನ್ನು ನಿಷೇಧಿಸಿದೆ. ಬೆಂಗಳೂರೊಂದರಲ್ಲಿ ಒಂದು ದಿನದ ಬಂದ್‌ನಿಂದ 4ಸಾವಿರ ಕೋಟಿ ರೂ ನಷ್ಟವಾಗಲಿದೆ. ದುಡಿದು ತಿನ್ನುವ ಬಡ ಜನರನ್ನು ಈ ಬಂದ್ ಇನ್ನಷ್ಟು ಹಣಿಯುತ್ತದೆ. ಹೀಗಾಗಿ ಇಂತಹ ಯಾವುದೇ ಕಾನೂನುಬಾಹಿರ ಚಟುವಟಿಕೆಗೆ ರಾಜ್ಯ ಹಿತದ ನೆಪವೊಡ್ಡಿ ಬೆಂಬಲ ನೀಡುವುದು ಸರಿಯಲ್ಲ ಎಂದು ಹೇಳಿದ್ದಾರೆ.

ಕಾವೇರಿ, ನಮ್ಮ ಅನ್ನ ಮತ್ತು ನೀರಿನ ಪ್ರಶ್ನೆ. ಇದು ಯಾರದೋ ಪ್ರತಿಷ್ಠೆ ಹಾಗೂ ಸ್ವಹಿತಾಸಕ್ತಿಗಾಗಿ ಬಳಕೆಯಾಗಬಾರದು. ರಾಜ್ಯ ಸರ್ಕಾರ ತನ್ನ ಮುಂದಿರುವ ಎಲ್ಲಾ ಕಾನೂನು ಮತ್ತು ಮಾತುಕತೆಯ ಹಾದಿ ಹಾಗೂ ಹೊಸ ಅಣೆಕಟ್ಟೆಗಳ ನಿರ್ಮಾಣ ಪ್ರಸ್ತಾಪದ ಮೂಲಕ ವಿವಾದವನ್ನು ಬಗೆಹರಿಸಿ ರಾಜ್ಯದ ರೈತರು ಮತ್ತು ಜನತೆಗೆ ಅನುಕೂಲ ಒದಗಿಸಿ ಕೊಡಬೇಕು ಎಂದು ಹೆಚ್.ಎ.ವೆಂಕಟೇಶ್ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಭಗತ್‌ಸಿಂಗ್‌ರ 116ನೇ ಜನ್ಮದಿನ ಆಚರಣೆ



ಮೈಸೂರು,ಸೆ.28–ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಯುವ ಭಾರತ್ ಸಂಘಟನೆ ವತಿಯಿಂದ ಕ್ರಾಂತಿಕಾರಿ ಮಹಾನ್ ದೇಶಭಕ್ತ ಭಗತ್‌ಸಿಂಗ್‌ರವರ 116ನೇ ಜನ್ಮದಿನವನ್ನು ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಲಾಯಿತು.

ಈ ವೇಳೆ ನಗರಪಾಲಿಕೆ ಸದಸ್ಯರಾದ ಪ್ರಮೀಳಾ ಭರತ್, ಯಶಸ್ವಿ ಸೋಮಶೇಖರ್, ಮಾಜಿ ಸದಸ್ಯ ಜಗದೀಶ್, ಯುವ ಭಾರತ್ ಸಂಘಟನೆಯ ಸಂಚಾಲಕರಾದ ಅಜಯ್ ಶಾಸ್ತ್ರಿ, ಬೈರತಿ ಲಿಂಗರಾಜು, ಸವಿತಾ ಘಾಟ್ಕೆ, ನಂದೀಶ್ ನಾಯಕ್, ಶ್ರೀನಿವಾಸ್, ವಿಘ್ನೇಶ್ವರ ಭಟ್, ಸುದರ್ಶನ್, ಚರಣ್, ಗೋಪಿನಾಥ್, ಸುಚಿಂದ್ರ, ಪಾಪಣ್ಣ, ನಾಗೇಶ್, ರಾಮು, ವಿನೋದ್, ರಚನಾ ಇನ್ನಿತರರಿದ್ದರು.



ಅಪ್ರತಿಮ ದೇಶಭಕ್ತ ಕ್ರಾಂತಿಕಾರಿ ಭಗತ್‌ಸಿಂಗ್‌ರವರ 116ನೇ ಜಯಂತಿಯನ್ನು ಪಡುವಾರಹಳ್ಳಿ ಸ್ನೇಹ ಬಳಗದ ವತಿಯಿಂದ ಆಚರಿಸಲಾಯಿತು. ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಸಿ.ಸಂತೋಷ್, ನಿರ್ದೇಶಕ ಕೃಷ್ಣಕುಮಾರ್, ಕೇಬಲ್ ಕಿಟ್ಟಿ, ಫಾಲ್ಕನ್ ಮಾದೇಗೌಡ, ವಿಜಿಲಿನ್ಸ್ ಕಮಿಟಿ ಸದಸ್ಯ ಶಿವಪ್ರಕಾಶ್, ಸುರೇಂದ್ರ, ಜಿತೇಂದ್ರ ಇತರರು ಹಾಜರಿದ್ದರು.

ಕರಾಟೆಯಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆ



ಮೈಸೂರು,ಸೆ.28–ದಟ್ಟಗಳ್ಳಿ ಬಡಾವಣೆಯಲ್ಲಿರುವ ಎಸ್‌ವಿಜಿ ಸೆಂಟರ್ ಆಫ್ ಎಕ್ಸಲೆನ್ಸ್ ಪದವಿಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಶ್ರೀಲೋಕ್ಯ ಹಾಗೂ ಆರ್. ಅಪೂರ್ವ ಇತ್ತೀಚೆಗೆ ನಡೆದ ಜಿಲ್ಲಾ ಹಂತದ ಕರಾಟೆ ಸ್ಪರ್ಧೆಯಲ್ಲಿ ಜಯ ಗಳಿಸುವ ಮೂಲಕ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಅಲ್ಲದೆ ದ್ವಿತೀಯ ಪಿಯುಸಿಯ ಮಾಸ್ಟರ್ ಚಿರಾಗ್ ದೇವ್ ದ್ವಿತೀಯ ಹಾಗೂ ಪ್ರಥಮ ಪಿಯುಸಿಯ ಕುಮಾರಿ ಅಮೃತ ಎಂ.ತೃತೀಯ ಬಹುಮಾನವನ್ನು ಪಡೆದಿದ್ದಾರೆ.

ನಿಧನ

ಆರೋಗ್ಯಮ್ಮ



ಮೈಸೂರು,ಸೆ.28–ಮೈಸೂರಿನ ರಾಮಾನುಜ ರಸ್ತೆ, 14ನೇ ಕ್ರಾಸ್ ನಿವಾಸಿ ವಿ.ಶ್ರೀನಿವಾಸನ್ ಅವರ ಪತ್ನಿ ಆರೋಗ್ಯಮ್ಮ (75) ಗುರುವಾರ ಬೆಳಗ್ಗೆ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಸ್ತುಪ್ರದರ್ಶನ ಮೈದಾನದಲ್ಲಿ ನಿರ್ಮಾಣಗೊಳ್ಳಲಿದೆ ಯೂನಿಟಿ ಮಾಲ್

ಮೈಸೂರಿನ ಕಲೆ, ಕರಕುಶಲ, ಭೌಗೋಳಿಕ ವಿಶೇಷತೆಗಳನ್ನು ಸಾರಲು 6.5 ಎಕರೆಯಲ್ಲಿ ಕೇಂದ್ರ ಸರ್ಕಾರದ 193 ಕೋಟಿ ಯೋಜನೆ ಅನುಷ್ಠಾನಕ್ಕೆ ಸಿದ್ಧತೆ





ಮೈಸೂರು, ಸೆ.28(ಆರ್‌ಕೆ)–ಮೈಸೂರಿನ ಕಲೆ, ಸಂಸ್ಕೃತಿ, ಕರಕುಶಲ, ಗುಡಿ ಕೈಗಾರಿಕೆ, ಭೌಗೋಳಿಕ ವಿಶೇಷತೆ ಟ್ಯಾಗ್ ಆಗಿರುವ ವಸ್ತುಗಳನ್ನು ಸಾರುವ 'ಯೂನಿಟಿ ಮಾಲ್' ಸಾಂಸ್ಕೃತಿಕ ನಗರಿಯಲ್ಲಿ ತಲೆ ಎತ್ತಲಿದೆ.

ಮೈಸೂರಿನ ದೊಡ್ಡಕೆರೆ ಮೈದಾನದ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ (ಕೆಇಎ)ದ ಆವರಣದಲ್ಲಿ 'ಯೂನಿಟಿ ಮಾಲ್' ನಿರ್ಮಿಸಲು ಜಾಗ ಗುರುತಿಸಲಾಗಿದೆ. ಕೇಂದ್ರ ಸರ್ಕಾರವು ದೇಶದ ಎಲ್ಲಾ 36 ರಾಜ್ಯಗಳ ರಾಜಧಾನಿಗಳಲ್ಲಿ ಒಂದೊಂದು 'ಯೂನಿಟಿ ಮಾಲ್'ಗಳನ್ನು ನಿರ್ಮಿಸಲುದ್ದೇಶಿಸಿದ್ದು, ಕರ್ನಾಟಕದ ರಾಜಧಾನಿ ಬೆಂಗಳೂರಿನ ಹೃದಯಭಾಗದಲ್ಲಿ ಜಾಗದ ಕೊರತೆ ಇರುವುದರಿಂದ ಅದಕ್ಕೆ ಸಮಾನಾಂತರವಾಗಿ ಬೆಳೆಯುತ್ತಿರುವ ಮೈಸೂರನ್ನು ಈ ಯೋಜನೆಗೆ ಆಯ್ಕೆ ಮಾಡಲಾಗಿದೆ.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಯೋಜನೆಯನ್ನು ಪಿಪಿಪಿ ಮಾದರಿಯಲ್ಲಿ ಅನುಷ್ಠಾನಗೊಳಿಸಲು ಮುಂದಾಗಿದ್ದು, ಕೇಂದ್ರ ಸರ್ಕಾರವು 193 ಕೋಟಿ ರೂ.ಗಳ ಅನುದಾನ ನೀಡಲಿದೆ. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರ ಸಲಹೆ ಮೇರೆಗೆ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಮೈದಾನದಲ್ಲಿ ಮಹಾತ್ಮಗಾಂಧಿ ರಸ್ತೆಗೆ ಅಭಿಮುಖವಾಗಿ ಯೂನಿಟಿ ಮಾಲ್ ನಿರ್ಮಿಸಲು ತಯಾರಿ ನಡೆಯುತ್ತಿದೆ.

ಯೋಜನೆಗೆ 6.5 ಎಕರೆ ಜಾಗ ನೀಡಲು ವಸ್ತುಪ್ರದರ್ಶನ ಪ್ರಾಧಿಕಾರ ಮುಂದಾಗಿರುವುದರಿಂದ ನಿನ್ನೆ (ಸೆ.27) ಸಂಸದ ಪ್ರತಾಪ್ ಸಿಂಹ ಮೈಕ್ರೋ, ಸ್ಮಾಲ್ ಅಂಡ್ ಮೀಡಿಯಂ ಎಂಟರ್ ಪ್ರೈಸಸ್ (MSME) ನಿರ್ದೇಶಕ ವಿಜಯ್ ಮಹಂತೇಶ್, ವಸ್ತುಪ್ರದರ್ಶನ ಪ್ರಾಧಿಕಾರದ ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಜಿ.ಗೌಡ, ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ (KSSIDC) ವ್ಯವಸ್ಥಾಪಕ ನಿರ್ದೇಶಕ ಕುಮಾರ್ ಹಾಗೂ ಇನ್ನಿತರ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಸುದೀರ್ಘ ಚರ್ಚೆ ನಡೆಸಿದರು.

ಕೇಂದ್ರ ಪುರಸ್ಕೃತ ಸ್ವದೇಶ ದರ್ಶನ ಯೋಜನೆ (80 ಕೋಟಿ ರೂ.) ಹಾಗೂ ಯೂನಿಟಿ ಮಾಲ್ (139 ಕೋಟಿ ರೂ.) ಯೋಜನೆಯನ್ನು ಕರ್ನಾಟಕದಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಪೂರ್ವಭಾವಿಯಾಗಿ ಚರ್ಚಿಸಿದ ಅವರು, ಅದಕ್ಕೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಒದಗಿಸುವಂತೆ ಅಧಿಕಾರಿಗಳಿಗೆ ಸಂಸದ ಪ್ರತಾಪ್ ಸಿಂಹ ಸೂಚನೆ ನೀಡಿದರು.

ನಂತರ ಅಧಿಕಾರಿಗಳು ಯೋಜನೆಗೆ ಗುರ್ತಿಸಲಾಗಿರುವ ವಸ್ತುಪ್ರದರ್ಶನ ಪ್ರಾಧಿಕಾರದ ಜಾಗಕ್ಕೆ ತೆರಳಿ ಸ್ಥಳ ಪರಿಶೀಲನೆ ನಡೆಸಿದರು. ಮೈಸೂರಿನಲ್ಲಿ ನಿರ್ಮಾಣವಾಗಲಿರುವ ಯೂನಿಟಿ ಮಾಲ್‌ನಲ್ಲಿ ರಾಜ್ಯದ ಎಲ್ಲಾ 31 ಜಿಲ್ಲೆಗಳ ವಿಶಿಷ್ಟ ಕೈಗಾರಿಕಾ ಉತ್ಪನ್ನಗಳನ್ನು ಅಲ್ಲಿ ಪ್ರದರ್ಶಿಸಿ ಮಾರಾಟ ಮಾಡಲು ಅವಕಾಶ ನೀಡಲಾಗುವುದು. ಓಪನ್ ಕಂಟ್ರಿಯಾರ್ಡ್, ವಾಹನ ನಿಲುಗಡೆ, ಪಾದಚಾರಿ ರಸ್ತೆ ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿಪಡಿಸಿ, ಒಂದೇ ಸೂರಿನಡಿ ಅಖಂಡ ಕರ್ನಾಟಕದ ಕೈಗಾರಿಕಾ ಉತ್ಪನ್ನಗಳನ್ನು ವರ್ಷದ 365 ದಿನವೂ ಪ್ರದರ್ಶಿಸಲು ವ್ಯವಸ್ಥೆ ಮಾಡಲಾಗುವುದು.

ದಸರಾ ನಂತರ ಯೋಜನೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲುದ್ದೇಶಿಸಿರುವ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಅಧಿಕಾರಿಗಳು ಡಿಪಿಆರ್ ತಯಾರಿಸಿ ರಾಜ್ಯ ಸರ್ಕಾರದ ಮೂಲಕ ಕೇಂದ್ರ ಕೈಗಾರಿಕಾ ಇಲಾಖೆಗೆ ಸಲ್ಲಿಸಿ ಯೋಜನೆಗೆ ಅನುಮೋದನೆ ಪಡೆಯಲು ಪ್ರಕ್ರಿಯೆಯನ್ನು ತೀವ್ರಗೊಳಿಸಿದ್ದಾರೆ 2023–24ರ ಬಜೆಟ್‌ನಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಪ್ರತೀ ರಾಜ್ಯದಲ್ಲೊಂದರಂತೆ ಯೂನಿಟಿ ಮಾಲ್ ನಿರ್ಮಿಸುವ ಮಹತ್ವದ ಯೋಜನೆಯನ್ನು ಘೋಷಿಸಿದ್ದರು. 'ಒಂದು ಜಿಲ್ಲೆ–ಒಂದು ಉತ್ಪನ್ನ' (One District-One Product) ಹಾಗೂ ಜಿಯಾಗ್ರಫಿಕಲ್ ಇಂಡಿಕೇಷನ್ ಟ್ಯಾಗ್ ಹೊಂದಿರುವ ಮೈಸೂರು ಪೇಟ, ಮೈಸೂರು ಪಾಕ್, ನಂಜನಗೂಡು ರಸಬಾಳೆ, ಮೈಸೂರು ಶ್ರೀಗಂಧ, ಮೈಸೂರು ವೀಳ್ಯದೆಲೆಯಂತಹ ಸಾಂಪ್ರದಾಯಿಕ, ಸಾಂಸ್ಕೃತಿಕ ಹಾಗೂ ಪಾರಂಪರಿಕ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೂ ಸ್ಥಳಾವಕಾಶ ನೀಡಲಾಗುವುದು. ಮೈಸೂರಲ್ಲಿ ನಿರ್ಮಾಣವಾಗುವ ಯೂನಿಟಿ ಮಾಲ್‌ನಲ್ಲಿ ದೇಶದ ಎಲ್ಲಾ ರಾಜ್ಯಗಳಿಗೂ ಒಂದೊಂದು ಮಳಿಗೆಯನ್ನು ನೀಡಿ ಅಲ್ಲಿನ ವಿಶೇಷ ಕೈಗಾರಿಕಾ ಉತ್ಪನ್ನಗಳ ಮಾರಾಟಕ್ಕೆ ಅವಕಾಶ ಕಲ್ಪಿಸಲಾಗುವುದು. ಅದೇ ರೀತಿ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಒಂದೊಂದು ಸ್ಟಾಲ್‌ಗಳನ್ನು ಒದಗಿಸಿ ನಮ್ಮ ಕಲೆ, ಸಂಸ್ಕೃತಿ, ಸಂಪ್ರದಾಯ, ಪರಂಪರೆ ಬಿಂಬಿಸುವ ವಸ್ತುಗಳಿಗೆ ಉತ್ತೇಜನ ನೀಡಲಾಗುವುದು.

ಯೂನಿಟಿ ಮಾಲ್ ನಿರ್ಮಿಸಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರಕ್ಕೆ ಹಸ್ತಾಂತರಿಸುವುದಲ್ಲದೆ, ಅದರ ಬಾಡಿಗೆಯನ್ನು ಪಾವತಿಸುವುದರಿಂದ ಪ್ರಾಧಿಕಾರಕ್ಕೆ ಆದಾಯ ವೃದ್ಧಿಯಾಗುತ್ತದೆ.

ಉತ್ತಮ ಕುಟುಂಬ ವ್ಯವಸ್ಥೆ ಸುವ್ಯವಸ್ಥಿತ ಸಮಾಜದ ಭದ್ರ ಬುನಾದಿ

ಸೇವನವಾರಂ ಅಂಗವಾಗಿ ಆಹಾರದ ಕಿಟ್ ವಿತರಿಸಿದ ಮೇಯರ್ ಶಿವಕುಮಾರ್ ಅಭಿಮತ



ಮೈಸೂರು,ಸೆ.28–ಉತ್ತಮ ಸಮಾಜಕ್ಕೆ ಕುಟುಂಬ ವ್ಯವಸ್ಥೆ ತುಂಬಾ ಮುಖ್ಯ. ಮೊದಲೆಲ್ಲ ಇದ್ದ ಅವಿಭಕ್ತ ಕುಟುಂಬಗಳು ಸುವ್ಯವಸ್ಥಿತ ಸಮಾಜದ ಭದ್ರ ಬುನಾದಿಯಾಗಿದ್ದವು. ಆದರೆ ಈಗ ಅವಿಭಕ್ತ ಕುಟುಂಬಗಳು ಮರೆಯಾಗುತ್ತಿವೆ. ಇದರ ಜೊತೆಗೆ ಎಲ್ಲೋ ಒಂದು ರೀತಿ ಸಾಮಾಜಿಕ ಭದ್ರತೆಯೂ ಕಡಿಮೆಯಾಗುತ್ತಿದೆ ಎಂದು ಮೇಯರ್ ಶಿವಕುಮಾರ್ ವಿಷಾದಿಸಿದರು.

ಮಾತಾ ಅಮೃತಾನಂದಮಯಿಯವರ 70ನೇ ಜನ್ಮದಿನದ ಪ್ರಯುಕ್ತ ಅಮೃತ ವಿಶ್ವವಿದ್ಯಾಪೀಠಂ ಮೈಸೂರು ಕ್ಯಾಂಪಸ್, ಅಮೃತ ಕೃಪಾ ಆಸ್ಪತ್ರೆ ಹಾಗೂ ಮಾತಾ ಅಮೃತಾನಂದಮಯಿ ಮಠ ಮೈಸೂರು ಇದರ ಸಹಯೋಗದಲ್ಲಿ ನಡೆಯುತ್ತಿರುವ ಸೇವನವಾರಂ ಕಾರ್ಯಕ್ರಮದಲ್ಲಿ ಉಚಿತ ಆಹಾರದ ಕಿಟ್ ವಿತರಿಸಿ ಅವರು ಮಾತನಾಡಿದರು.

ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬದ ಪಾತ್ರವನ್ನು ವಿವರಿಸಿದ ಅವರು, ಅವಿಭಕ್ತ ಕುಟುಂಬಗಳು ಒಬ್ಬ ವ್ಯಕ್ತಿಯ ಸೋಲು, ಗೆಲುವಿನಲ್ಲಿ ಬೆನ್ನೆಲುಬಾಗಿ ನಿಲ್ಲುತ್ತವೆ. ವ್ಯಕ್ತಿಗೆ ಮಾನಸಿಕ ಬೆಂಬಲವಾಗಿ ಈ ಕುಟುಂಬಗಳು ಇರುತ್ತವೆ. ತಾಯಿಯ ಜವಾಬ್ದಾರಿಯ ಬಗ್ಗೆ ಮಾತನಾಡಿದ ಶಿವಕುಮಾರ್ ಅವರು, ಈಗಂತೂ ಮಕ್ಕಳು ಏನು ಮಾಡುತ್ತಿದ್ದಾರೆ ಹಾಗೂ ಹೇಗೆ ವರ್ತಿಸುತ್ತಿದ್ದಾರೆ ಎಂಬುದರ ಬಗ್ಗೆ ತಾಯಂದಿರು ತುಂಬಾ ಎಚ್ಚರಿಕೆ ವಹಿಸಬೇಕು. ಯಾಕೆಂದರೆ ಇಂದಿನ ಮಕ್ಕಳಿಗೆ ಸಾಕಷ್ಟು ಆಕರ್ಷಣೆಗಳಿದ್ದು ಕೆಲವು ಸಲ ಅವರು ಹಾದಿ ತಪ್ಪುವ ಸಾಧ್ಯತೆಗಳಿರುತ್ತವೆ. ಹೀಗಾಗಿ ಮಕ್ಕಳ ವರ್ತನೆಗಳ ಬಗ್ಗೆ ತಾಯಂದಿರು ಗಮನ ಕೊಡಲೇಬೇಕಾದ ಅವಶ್ಯಕತೆ ಹೆಚ್ಚಾಗಿದೆ ಎಂದು ಎಚ್ಚರಿಕೆಯ ನುಡಿಗಳನ್ನು ಹೇಳಿದರು.

ಸೇವನವಾರಂ ಭಾಗವಾಗಿ ಅರ್ಹ ಫಲಾನುಭವಿಗಳಿಗೆ ಆಹಾರದ ಕಿಟ್ ವಿತರಿಸಲಾಯಿತು. ಹಾಗೆಯೇ ಮಹಿಳಾ ಸಬಲೀಕರಣದ ಭಾಗವಾಗಿ ಮಾತಾ ಅಮೃತಾನಂದಮಯಿಯವರು ನಡೆಸುತ್ತಿರುವ ಕೌಶಲ್ಯ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿದ ವಿದ್ಯಾರ್ಥಿನಿಯರಿಗೆ ಪ್ರಮಾಣಪತ್ರವನ್ನು ನೀಡಲಾಯಿತು. ಇದರ ಜೊತೆಗೆ ಲೋಕಕಲ್ಯಾಣಾರ್ಥ ವಾಗಿ ಬ್ರಹ್ಮಸ್ಥಾನಂ ದೇವಸ್ಥಾನದಲ್ಲಿ ಮಹಾಮೃತ್ಯುಂಜಯ ಹೋಮವನ್ನು ಮಾಡಲಾಯಿತು. ಕಾರ್ಯಕ್ರಮದಲ್ಲಿ ಸ್ವಸ್ವರೂಪಾನಂದ ಪುರಿ ಯತಿಗಳು, ಮಾತಾ ಅಮೃತಾನಂದಮಯಿ ಮಠದ ಮುಖ್ಯಸ್ಥ ಬ್ರಹ್ಮಚಾರಿ ಪ್ರಸಾದಾಮೃತಾನಂದ ಚೈತನ್ಯ, ಅಮೃತ ವಿಶ್ವವಿದ್ಯಾಪೀಠಂ ಮೈಸೂರು ಕ್ಯಾಂಪಸ್‌ನ ಸಂಚಾಲಕ ಮುಕ್ತಿದಾಮೃತ ಚೈತನ್ಯ, ಅಮೃತ ವಿಶ್ವವಿದ್ಯಾಪೀಠಂ ಮೈಸೂರು ಕ್ಯಾಂಪಸ್‌ನ ಪ್ರಾಂಶುಪಾಲ ಡಾ.ಜಿ.ರವೀಂದ್ರನಾಥ್, ಅಮೃತ ಕೃಪಾ ಆಸ್ಪತ್ರೆಯ ಡಾ.ವಿಕಾಸ್ ಮೋದಿ ಉಪಸ್ಥಿತರಿದ್ದರು.


ಅ.1, ಇಪಿಎಫ್‌ಓನಿಂದ ಬೃಹತ್ ಸ್ವಚ್ಛತಾ ಅಭಿಯಾನ

ಮೈಸೂರು,ಸೆ.28–ಮೈಸೂರಿನ ನೌಕರರ ಭವಿಷ್ಯ ನಿಧಿ ಪ್ರಾದೇಶಿಕ ಕಚೇರಿ ವತಿಯಿಂದ ಸ್ವಚ್ಛತಾ ಹಿ ಸೇವಾ ಅಭಿಯಾನದ 3.0 ಅಡಿಯಲ್ಲಿ ಅ.1ರಂದು ಬೆಳಗ್ಗೆ 10ರಿಂದ ಚಾಮುಂಡಿಬೆಟ್ಟದಲ್ಲಿ ಬೃಹತ್ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–2599250 ಅನ್ನು ಸಂಪರ್ಕಿಸಬಹುದು.

ನೀರಿನ ಮಟ್ಟ

ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2,284.00 ಅಡಿ	ಗರಿಷ್ಠ ಮಟ್ಟ 2,859.00 ಅಡಿ
ಇಂದಿನ ಮಟ್ಟ 97.28 ಅಡಿ	ಇಂದಿನ ಮಟ್ಟ 2,273.45 ಅಡಿ	ಇಂದಿನ ಮಟ್ಟ 2,854.08 ಅಡಿ
ಹಿಂದಿನ ವರ್ಷದ ಮಟ್ಟ 123.86 ಅಡಿ	ಹಿಂದಿನ ವರ್ಷದ ಮಟ್ಟ 2,282.71 ಅಡಿ	ಹಿಂದಿನ ವರ್ಷದ ಮಟ್ಟ 2,856.84 ಅಡಿ
ನಿನ್ನೆಯ ಮಟ್ಟ 97.00 ಅಡಿ	ನಿನ್ನೆಯ ಮಟ್ಟ 2,273.59 ಅಡಿ	ನಿನ್ನೆಯ ಮಟ್ಟ 2,854.41 ಅಡಿ
ಇಂದಿನ ಒಳಹರಿವು 5,183 ಕ್ಯುಸೆಕ್	ಇಂದಿನ ಒಳಹರಿವು 1,236 ಕ್ಯುಸೆಕ್	ಇಂದಿನ ಒಳಹರಿವು 940 ಕ್ಯುಸೆಕ್
ಇಂದಿನ ಹೊರಹರಿವು 2,696 ಕ್ಯುಸೆಕ್	ಇಂದಿನ ಹೊರಹರಿವು 2,000 ಕ್ಯುಸೆಕ್	ಇಂದಿನ ಹೊರಹರಿವು 2,200 ಕ್ಯುಸೆಕ್

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.9.2023 ಶುಕ್ರವಾರ, ಮಳೆ ನಕ್ಷತ್ರ: ಹಸ್ತ, 28.09.2023ರಿಂದ 10.10.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ,
ಶುಕ್ಲ ಪಕ್ಷ, ತಿಥಿ: ಹುಣ್ಣಿಮೆ, ನಕ್ಷತ್ರ: ಉಭಾ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯ, ಡಿಆರ್‌ಡಿಓ (ರಕ್ಷಣಾ ಸಚಿವಾಲಯ):** ಮಿಲಿಟರಿ ಪಡಿತರ ಮತ್ತು ನಿರ್ದಿಷ್ಟ ಪೌಷ್ಟಿಕಾಂಶದ ಅವಶ್ಯಕತೆಗಳಿಗಾಗಿ ಸಿರಿಧಾನ್ಯಗಳು ಕುರಿತು ರಾಷ್ಟ್ರೀಯ ಸಮ್ಮೇಳನ, ಉದ್ಘಾಟನೆ: ಕೇಂದ್ರ ರಕ್ಷಣಾ ಮತ್ತು ಪ್ರವಾಸೋದ್ಯಮ ಇಲಾಖೆ ರಾಜ್ಯ ಸಚಿವ ಅಜಯ್ ಭಟ್, ವಿಶೇಷ ಅತಿಥಿಗಳು: ರಕ್ಷಣಾ ಇಲಾಖೆ ಕಾರ್ಯದರ್ಶಿ ಮತ್ತು ಡಿಆರ್‌ಡಿಓ ಅಧ್ಯಕ್ಷ ಡಾ. ಸಮೀರ್ ವಿ.ಕಾಮತ್, ಗೌರವ ಅತಿಥಿಗಳು: ಮಿಲೆಟ್ ಮ್ಯಾನ್ ಆಫ್ ಇಂಡಿಯಾ ಪದ್ಮಶ್ರೀ ಪ್ರೊ. ಖಾದರ್ ವಲ್ಲಿ ದುದೇಕುಲ, ಡಿಆರ್‌ಡಿಓ (ಜೀವ ವಿಜ್ಞಾನ) ಮಹಾನಿರ್ದೇಶಕ ಡಾ.ಯು.ಕೆ.ಸಿಂಗ್, ಎಡಿಜಿಎಸ್‌ಟಿ (ಎಸ್‌ಎಂ) ಸೇನಾ ಪ್ರಧಾನ ಕಚೇರಿ ಮೇಜರ್ ಜನರಲ್ ಎಸ್.ಎಸ್.ಅಹ್ಲಾವತ್, ಸ್ಥಳ: ಎಸ್‌ಡಿಎಂ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್, ಚಾಮುಂಡಿಬೆಟ್ಟದ ರಸ್ತೆ, ಬೆಳಗ್ಗೆ 9.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ:** ಡಾ.ಶ್ರೀ ರಾಜೇಂದ್ರ ಸ್ವಾಮಿಗಳ 108ನೇ ಜಯಂತಿ ಆಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ನುಡಿನಮನ: ಸಾಹಿತಿ ನಂದೀಶ್ ಹಂಚೆ, ಅಧ್ಯಕ್ಷತೆ: ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಶ್ರೀ ರಾಜೇಂದ್ರ ಸಭಾ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಅಭಿವೃದ್ಧಿ ಆಯುಕ್ತರು (ಕೈಮಗ್ಗ), ಜವಳಿ ಮಂತ್ರಾಲಯ, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್** : ವಿಶೇಷ ಕೈಮಗ್ಗ ಮೇಳ, ಸಂಸ್ಕೃತಿ–ಹತ್‌ಕರ್ಗ–2023, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ರಿಂಗ್ ರೋಡ್, ಬೆಳಗ್ಗೆ 10ರಿಂದ.

■ **ಸುಯೋಗ್ ಆಸ್ಪತ್ರೆ:** ಮೂತ್ರಪಿಂಡ ರೋಗ ತಪಾಸಣಾ ಶಿಬಿರ, ಮೂತ್ರಪಿಂಡ ತಜ್ಞ ಡಾ. ಅರುಣ್ ಕೆ.ಜಿ. ಅವರ ನೇತೃತ್ವ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆಯಿಂದ.

■ **ನಾದವಿದ್ಯಾಲಯ ಸಂಗೀತ ಮತ್ತು ನೃತ್ಯ ಅಕಾಡೆಮಿ:** ನಾದ ನೃತ್ಯೋತ್ಸವ, ನೃತ್ಯರೂಪಕ–ಸಪ್ತ ತಾಂಡವ, ವಿದ್ವಾನ್ ಮಿತ್ರ ನವೀನ್–ನಟುವಾಂಗ, ವಿದ್ವಾನ್ ನವೀನ್ ಅವರಿಂದ ಗಾಯನ, ವಿದ್ವಾನ್ ನಾಗರಾಜ್–ಮೃದಂಗ, ವಿದ್ವಾನ್ ನಿತೀಶ್ ಅಮ್ಮನಯ್ಯ–ಕೊಳಲು, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5.30ಕ್ಕೆ.

■ **ತನುಮನ ಸಂಸ್ಥೆ:** ಜಗ ನಡೆಯಲಿ ಬುದ್ಧನಕಡೆ ಸಂಗೀತ ಕಾರ್ಯಕ್ರಮ, ಉದ್ಘಾಟನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಅಧ್ಯಕ್ಷತೆ: ಮಾಜಿ ಮೇಯರ್ ಪುರುಷೋತ್ತಮ್, ಮುಖ್ಯ ಅತಿಥಿಗಳು: ಎಪಿಎಂಸಿ ಮಾಜಿ ಉಪಾಧ್ಯಕ್ಷ ಅಹಿಂದ ಚಿಕ್ಕಜವರಪ್ಪ, ರಾಜ್ಯ ಲೆಕ್ಕಪತ್ರ ಇಲಾಖೆ ಜಂಟಿ ನಿಯಂತ್ರಕ ಕೆ.ಮಹದೇವನಾಯಕ, ದೇವದತ್ತ, ಮಹೇಶ್, ಮಂಜುನಾಥ್, ವಿಜಯಕುಮಾರ್, ಬೃಂದಾಮಣಿ, ವಿ.ಕೋಮಲಾ, ಸ್ಥಳ: ವಿಶ್ವಮೈತ್ರಿ ಬುದ್ಧ ವಿಹಾರ, ಅಶೋಕ ವೃತ್ತ, ಸಂಜೆ 5.30ಕ್ಕೆ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** 62ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30ರಿಂದ ಜನಾರ್ಧನ್ (ಜೆನ್ನಿ) ಮತ್ತು ತಂಡದವರಿಂದ ರಂಗಗೀತೆಗಳು, ಸಂಜೆ 6.45ಕ್ಕೆ ವಿದ್ವಾನ್ ಭರತ್ ಸುಂದರ್ ಅವರಿಂದ ಗಾಯನ, ವಿದ್ವಾನ್ ಎಚ್.ಎನ್. ಭಾಸ್ಕರ್–ವಯೋಲಿನ್, ವಿದ್ವಾನ್ ಉಮಾಳಪುರಂ ಕೆ. ಶಿವರಾಮನ್–ಮೃದಂಗ, ವಿದ್ವಾನ್ ಕಾರ್ತಿಕ್–ಘಟಂ, ಸ್ಥಳ: 8ನೇ ಕ್ರಾಸ್, ವಿವಿ.ಮೊಹಲ್ಲಾ.

■ **ಆಯುರ್ವೇದ ಪಂಚಕರ್ಮ ಆಸ್ಪತ್ರೆ ದೀಕ್ಷಿತ್ ಆರೋಗ್ಯ ಧಾಮ :** ಆನಂದ ಆರೋಗ್ಯ ಕಾರ್ಯಕ್ರಮ, ಗಮಕ ವಾಚಕರು : ವಿದುಷಿ ಎಸ್.ಎಸ್. ಮಂಗಳಾ ರಾಮಮೂರ್ತಿ, ವ್ಯಾಖ್ಯಾನ : ಶ್ರೀಮತಿ ಎ.ಎಸ್. ವಾಣಿ ಸುಬ್ಬಯ್ಯ, ಡಾ. ಸಿ.ಎಸ್. ಅನಿಲ್ ಕುಮಾರ್ ಅವರಿಂದ ನಿಮ್ಮ ನಕ್ಷತ್ರಕ್ಕೆ ಒಂದು ವೃಕ್ಷ ಕುರಿತು ಉಪನ್ಯಾಸ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ವಿಜಯನಗರ 3ನೇ ಹಂತ, ಸಂಜೆ 6ಕ್ಕೆ.

■ **ಆಯಾಮ, ಅಕಾಡೆಮಿ ಆಫ್ ಫೈನ್ ಆರ್ಟ್ಸ್ :** ಆಯಾಮೋತ್ಸವ ನೃತ್ಯ ನಾಟಕಗಳ ಉತ್ಸವ, ವಿಚಾರ ಸಂಕಿರಣ–ಸಂವಾದ, ಪುಸ್ತಕ ಪ್ರದರ್ಶನ, ಚಿತ್ರಕಲಾ ಪ್ರದರ್ಶನ–ನೃತ್ಯ ನಾಟಕ, ಸಂಜೆ 5ಕ್ಕೆ ಪುಸ್ತಕ ಪ್ರದರ್ಶನ, ಉದ್ಘಾಟನೆ : ರಂಗ ನಿರ್ದೇಶಕ ಕೆ. ಶಿವಲಿಂಗಯ್ಯ, ಸಂಜೆ 5.30ಕ್ಕೆ ದಾವಣಗೆರೆ ಚಿತ್ರ ಕಲಾವಿದ ರವೀಂದ್ರ ಹೆಚ್. ಅರಳಗುಪ್ಪಿ ಅವರ ಚಿತ್ರಕಲಾ ಪ್ರದರ್ಶನ, ಉದ್ಘಾಟನೆ : ರಂಗಾಯಣ ಜಂಟಿ ನಿರ್ದೇಶಕರಾದ ಶ್ರೀಮತಿ ನಿರ್ಮಲ ಮಠಪತಿ, ಸಂಜೆ 6ಕ್ಕೆ ಆಯಾಮೋತ್ಸವ ಉದ್ಘಾಟನೆ, ಉಪಸ್ಥಿತರು : ಡಾ. ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯ ಉಪಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಹಿರಿಯ ನೃತ್ಯ ಗುರು ಡಾ. ವಸುಂಧರಾ ದೊರೆಸ್ವಾಮಿ, ಚಲನಚಿತ್ರ ಸಂಗೀತ ನಿರ್ದೇಶಕ ಎಸ್.ವಿ. ಪೂರ್ಣಚಂದ್ರ ತೇಜಸ್ವಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ್, ಬೆಂಗಳೂರಿನ ಭರತಾಂಜಲಿ ನಾಟ್ಯಶಾಲೆ ಅವರಿಂದ ಪುಲಿಂದ–ಕೊರವಿ ನಾಟಕ ಪ್ರದರ್ಶನ, ನಿರ್ದೇಶನ : ನೃತ್ಯ ಸಂಯೋಜನೆ, ವಿದುಷಿ ಶ್ರೀಮತಿ ಸೀತಾ ಗುರುಪ್ರಸಾದ್, ಸ್ಥಳ: ಕಲಾಮಂದಿರ.

■ **ಮೈಸೂರು ಶ್ರೀ ಸುತ್ತೂರು ಮಠ:** ಬೆಳದಿಂಗಳ ಸಂಗೀತ, ಸಾನ್ನಿಧ್ಯ : ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದ್ವಾನ್ ಅಭಿರಾಮ್ ಬೋಡೆ ಅವರಿಂದ ಗಾಯನ, ವಿದುಷಿ ಸಿ.ವಿ. ಶ್ರುತಿ–ವಯೋಲಿನ್, ವಿದ್ವಾನ್ ಬಿ.ಎಸ್.ಪ್ರಶಾಂತ್–ಮೃದಂಗ, ಸ್ಥಳ: ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ–ಡಾ.ಎಸ್.ವಿ.ನರಸಿಂಹನ್, ಪ್ರಸ್ತುತಿ– ಜಿ.ಶಾಂತಕುಮಾರ್, 6.40 ಪದಸಂಸ್ಕೃತಿ–ಕೆ.ಎಲ್.ಪದ್ಮಿನಿ ಹೆಗಡೆ, 7.15 ಭಾವಗೀತೆಗಳು–ಡಾ.ರಾಜ್‌ಕುಮಾರ್, ರತ್ನಮಾಲಾ ಪ್ರಕಾಶ್, 9.05 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಅಕ್ಕರೆ ಸುಬ್ಬಲಕ್ಷ್ಮೀ ಮತ್ತು ಅಕ್ಕರೆ ಸ್ವರ್ಣಲತಾ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಆರತಿ ಆನಂದ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಓ.ಎಸ್. ಅರುಣ್–ಹಾಡುಗಾರಿಕೆ, 4.00 ಮಹಿಳಾರಂಗ–ಕ್ರಿಯಾ ಜಾನಪದ ಮಹಿಳಾ ತಂಡದವರಿಂದ ಜಾನಪದ ವಿಶೇಷ ಕಾರ್ಯಕ್ರಮ. ಪ್ರಸ್ತುತಿ– ಸುಮಾ ಪ್ರಶಾಂತ್ ಮತ್ತು ತಂಡ, 4.30 ವೃತ್ತಿ ಮಾರ್ಗದರ್ಶನ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಕುಲಪತಿಗಳಾದ ಪ್ರೊ. ಶರಣಪ್ಪ ವೈಜನಾಥ ಹಲಸೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ದಿವಾಕರ ಹೆಗಡೆ, 6.50 ಕೃಷಿರಂಗ–ಮಳೆ ಆಧಾರಿತ ರೇಷ್ಮೆ ಕೃಷಿ ಕುರಿತು ಸಂವಾದದಲ್ಲಿ ಭಾಗವಹಿಸುವವರು ಡಾ.ಎಸ್.ಸರಿತಾಕುಮಾರಿ ಹಾಗೂ ಡಾ.ಚಂದ್ರಶೇಖರ್ ಎಸ್.ಕಳ್ಳೀಮನಿ, 9.30 ಅರುಣಾ ಸಾಯಿರಾಂ–ಹಾಡುಗಾರಿಕೆ, 10.00 ತತ್ವ ಸಂಚಾರ–ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.30 ಸವಿನೆನಪು

305ನೇ ಶಿವಾನುಭವ ದಾಸೋಹ ಉಪನ್ಯಾಸ

ಮೈಸೂರು, ಸೆ.28–ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ಆಶ್ರಯದಲ್ಲಿ ಪ್ರತಿ ತಿಂಗಳ ಕೊನೆಯ ಶನಿವಾರದಂದು ನಿವೃತ್ತ ಪ್ರಾಂಶುಪಾಲ ಪ್ರೊ.ಎ.ಎಸ್. ಜಯರಾಮ್ ಅವರು ಸೆ.30ರಂದು ಸಂಜೆ 6ಕ್ಕೆ ಕೆ.ಆರ್.ಮೊಹಲ್ಲಾದ ಶ್ರೀ ಶಿವಶ್ರೀ ವಿದ್ಯಾರ್ಥಿನಿಯರ ನಿಲಯದಲ್ಲಿ 'ಮಾತೃಹೃದಯಿ ಪೂಜ್ಯ ರಾಜೇಂದ್ರ ಶ್ರೀಗಳು' ವಿಷಯ ಕುರಿತು ಉಪನ್ಯಾಸ ನೀಡಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಹುಣಸೂರು ತಾಲೂಕು ಗಾವಡಗೆರೆ ಗುರುಲಿಂಗ ಜಂಗಮದೇವರ ಮಠದ ಶ್ರೀ ನಟರಾಜ ಸ್ವಾಮಿಗಳು ವಹಿಸಲಿದ್ದಾರೆ. ಶ್ರೀಮತಿ ಎಂ.ಎ. ನೀಲಾಂಬಿಕಾ, ನಿವೃತ್ತ ಉಪನ್ಯಾಸಕರು, # 242, ಉತ್ತರಾದಿ ಮಠದ ರಸ್ತೆ, ಖಿಲ್ಲೆ ಮೊಹಲ್ಲಾ, ಇವರು ಕಾರ್ಯಕ್ರಮದ ಪ್ರಾಯೋಜಕತ್ವ ವಹಿಸಿಕೊಂಡಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ಶ್ರೀ ಶಂಕರೇಶ್ವರ ಸ್ವಾಮಿಗೆ ವಿಶೇಷ ಪೂಜೆ

ಮೈಸೂರು, ಸೆ.28 (ಆರ್‌ಕೆ)– ಮೈಸೂರು ತಾಲೂಕು, ಕೆ.ಹೆಮ್ಮನಹಳ್ಳಿಯ ಶ್ರೀ ಶಂಕರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಾಳೆ(ಸೆ.29) ವಿಶೇಷ ಪೂಜಾ ಕೈಂಕರ್ಯ ನಡೆಯಲಿದೆ ಎಂದು ಪ್ರಧಾನ ಅರ್ಚಕ ಬಿ.ವಿ.ರಾಜೇಂದ್ರ ಪ್ರಸಾದ್ ತಿಳಿಸಿದ್ದಾರೆ.

ಶುಕ್ರವಾರ ಬೆಳಗ್ಗೆ ದೇವರಿಗೆ ಫಲ ಪಂಚಾಮೃತಾಭಿಷೇಕ, ರುದ್ರಾಭಿಷೇಕ, ಕಲಶಾರಾಧನೆ, ಶ್ರೀ ನವಚಂಡಿಕಾ ಯಾಗ ಸುವಾಸಿನೀ ಪೂಜೆ, ಮೂಲ ಮಂತ್ರ ಹೋಮ, ಬೆಳಗ್ಗೆ 11.30 ಗಂಟೆಗೆ ಮಹಾಕುಂಭಾಭಿಷೇಕ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ಮಾಡಲಾಗುವುದು. ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ ಏರ್ಪಡಿಸಿದ್ದು, ಭಕ್ತರು ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಧಾರ್ಮಿಕ ಪವಿತ್ರೋತ್ಸವ



ಮೈಸೂರು, ಸೆ.28–ಮೈಸೂರಿನ ವಿಜಯನಗರದ ಶ್ರೀ ಯೋಗ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಅ.1ರವರೆಗೆ ಧಾರ್ಮಿಕ ಪವಿತ್ರೋತ್ಸವ (ರೇಷ್ಮೆಯ ದಾರದ ಮಾಲೆಗಳನ್ನು ಧರಿಸಿರುವ ಮುಖ್ಯ ದೇವರು) ಕಾರ್ಯಕ್ರಮ ನಡೆಯಲಿದೆ ಎಂದು ದೇವಸ್ಥಾನದ ಮುಖ್ಯ ಕಾರ್ಯದರ್ಶಿ ಎನ್.ಶ್ರೀನಿವಾಸ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈದ್ ಮಿಲಾದ್: ಹಿಂದೂ–ಮುಸ್ಲಿಂ ಬಾಂಧವರಿಂದ ಸಹಬಾಳ್ವೆ ಸಂದೇಶ



ಮೈಸೂರು,ಸೆ.28–ಅಹಿಂದ ಸಂಘಟನೆ ಹಾಗೂ ಹೊಯ್ಸಳ ಟ್ರಸ್ಟ್ ವತಿಯಿಂದ ಈದ್ ಮಿಲಾದ್ ಅಂಗವಾಗಿ ಹಿಂದೂ–ಮುಸ್ಲಿಂ ಬಾಂಧವರು ಜತೆಗೂಡಿ ಸಸಿ ನೆಡುವ ಮೂಲಕ ಸಹಬಾಳ್ವೆ ಕಾರ್ಯಕ್ರಮವನ್ನು ಜೆಎಲ್‌ಬಿ ರಸ್ತೆಯಲ್ಲಿರುವ ಕಂಸಾಳೆ ಮಹದೇವಯ್ಯ ವೃತ್ತದಲ್ಲಿ ಆಯೋಜಿಸಲಾಗಿತ್ತು.

ಈ ವೇಳೆ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್ ಮಾತನಾಡಿ, ಮಹಾಮಾರಿ ಕೊರೊನಾ ಸಂದರ್ಭದಲ್ಲಿ ದೇಶವೇ ಲಾಕ್‌ಡೌನ್ ಆದಾಗ ನಿರ್ಗತಿಕರಿಗೆ ಹಿಂದು ಮತ್ತು ಮುಸಲ್ಮಾನ್ ಬಾಂಧವರು ಜತೆಗೂಡಿ ಅಸಹಾಯಕರಿಗೆ ಆಹಾರವೂ ಸೇರಿದಂತೆ ದಿನನಿತ್ಯದ ಪದಾರ್ಥಗಳನ್ನು ನೀಡುವ ಮೂಲಕ ಸಹಾಯ ಹಸ್ತ ನೀಡಿದ್ದರು. ಈದ್–ಮಿಲಾದ್ ಹಬ್ಬ ಭಾವೈಕ್ಯತೆಯ ಹಬ್ಬವಾಗಿರುವುದರಿಂದ ಎಲ್ಲರೂ ಸಹೋದರತೆಯಿಂದ ಆಚರಣೆ ಮಾಡುತ್ತಿದ್ದು, ಸಹಬಾಳ್ವೆ ಎಲ್ಲ ಧರ್ಮಗಳ ತಿರುಳಾಗಿದೆ. ಮಾನವೀಯ ಮೌಲ್ಯಗಳ ಪಾಲನೆ ಇಂದಿನ ಅವಶ್ಯಕತೆಯಾಗಿದೆ ಎಂದರು.

ಈ ಸಂದರ್ಭದಲ್ಲಿ ಹೊಯ್ಸಳ ಟ್ರಸ್ಟ್ ಅಧ್ಯಕ್ಷ ಎಂ.ಪಿ.ರಾಜೇಶ್, ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಸಗೀರ್. ಫಾರ್ಖಿಲ್, ಖಾಲಿದ್, ಯುನೆಸ್, ಅಬ್ದುಲ್, ಕಲೀಮ್ ಪಾಷಾ, ವಕೀಲರಾದ ನಾಗರಾಜ್, ಬಸವಣ್ಣ, ಚನ್ನರಾಜನಾಯಕ್, ಕಾಳಪ್ಪ, ಪೂಣಚಿ ಮತ್ತಿತರರು ಉಪಸ್ಥಿತರಿದ್ದರು.

ಯೂನಸ್ ಅಲಿ ಕೌಸರ್‌ಗೆ ಪಿಹೆಚ್.ಡಿ ಪದವಿ



ಮೈಸೂರು, ಸೆ.28– ಪ್ರಾಣಿಶಾಸ್ತ್ರ ವಿಷಯದಲ್ಲಿ ಯೂನಸ್ ಅಲಿ ಕೌಸರ್ ಅವರು ಸಂಶೋಧನೆ ನಡೆಸಿ, ಮಂಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಹೆಚ್.ಡಿಗೆ ಅಂಗೀಕರಿಸಿದೆ. ಡಾ.ಎಂ.ಎಸ್.ಕೃಷ್ಣ ಅವರ ಮಾರ್ಗದರ್ಶನದಲ್ಲಿ ಯೂನಸ್ ಅಲಿ ಕೌಸರ್ ಈ ಸಂಶೋಧನೆ ನಡೆಸಿ ಪ್ರಬಂಧ ಮಂಡಿಸಿದ್ದರು. ಇವರು ಬೆಂಗಳೂರು ಅಗ್ನಿ ನಿಯಂತ್ರಣ ಕಚೇರಿಯಲ್ಲಿ ಉಪನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಆರ್ಯವೈಶ್ಯ ಸಮುದಾಯದಿಂದ ಇಂದು ಮೊಂಬತ್ತಿ ಮೆರವಣಿಗೆ

ಮೈಸೂರು, ಸೆ.28–'ಕಾವೇರಿ ನಮ್ಮದು' ಶೀರ್ಷಿಕೆಯಡಿ ಮೈಸೂರಿನ ಆರ್ಯವೈಶ್ಯ ಸಮುದಾಯದವರು ಶುಕ್ರವಾರ ಸಂಜೆ 6 ಗಂಟೆಗೆ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿಯಿಂದ ಗಾಂಧಿ ವೃತ್ತದವರೆಗೆ ಶಾಂತಿಯುತ ಮೊಂಬತ್ತಿ ಮೆರವಣಿಗೆ ಹಮ್ಮಿಕೊಳ್ಳಲಾಗಿದ್ದು, ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ಕೋರಲಾಗಿದೆ.

ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿಯವರ 36ನೇ ಚಾತುರ್ಮಾಸ್ಯ ವ್ರತಗಳ ಸಮಾರೋಪ

ಸರಿಯಾಗಿ ಅರ್ಥೈಸಿಕೊಂಡವರು ಸನಾತನ ಧರ್ಮ ಟೀಕೆ ಮಾಡಲಾರರು

ಕೃಷ್ಣಧಾಮದಲ್ಲಿ ಗುರುವಂದನಾ ಕಾರ್ಯಕ್ರಮ ಉದ್ಘಾಟಿಸಿದ ಗೋವಾ ರಾಜ್ಯಪಾಲ ಪಿ.ಎಸ್.ಶ್ರೀಧರನ್ ಪಿಳ್ಳೈ ಅಭಿಮತ





ಮೈಸೂರಿನ ಶ್ರೀಕೃಷ್ಣಧಾಮದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿಯವರ 36ನೇ ಚಾತುರ್ಮಾಸ್ಯ ವ್ರತ ಸಮಾರಂಭಗಳ ಸಮಾರೋಪ ಹಾಗೂ ಗುರುವಂದನಾ ಕಾರ್ಯಕ್ರಮವನ್ನು ಗೋವಾ ರಾಜ್ಯಪಾಲ ಪಿ.ಎಸ್.ಶ್ರೀಧರನ್ ಪಿಳ್ಳೈ ಉದ್ಘಾಟಿಸಿದರು. ಮತ್ತೊಂದು ಚಿತ್ರದಲ್ಲಿ ಪೇಜಾವರ ಶ್ರೀಗಳಿಗೆ ಗುರುವಂದನೆ ಸಲ್ಲಿಸುತ್ತಿರುವುದನ್ನು ಕಾಣಬಹುದು.

ಮೈಸೂರು,ಸೆ.28(ಪಿಎಂ)–ಸರಿಯಾಗಿ ಅರ್ಥೈಸಿಕೊಂಡ ಯಾರೂ ಸನಾತನ ಧರ್ಮದ ಬಗ್ಗೆ ಟೀಕೆ ಮಾಡಲಾರರು ಎಂದು ಗೋವಾ ರಾಜ್ಯಪಾಲ ಪಿ.ಎಸ್.ಶ್ರೀಧರನ್ ಪಿಳ್ಳೈ ಅಭಿಪ್ರಾಯಪಟ್ಟರು.

ಮೈಸೂರಿನ ಸರಸ್ವತಿಪುರಂನ ಶ್ರೀಕೃಷ್ಣಧಾಮದ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳ ಸ್ವಾಮೀಜಿಯವರ 36ನೇ ಚಾತುರ್ಮಾಸ್ಯ ವ್ರತ ಸಮಾರಂಭಗಳ (ಮೈಸೂರಿನಲ್ಲಿ ನಡೆದ 90 ದಿನಗಳ ವ್ರತ) ಸಮಾರೋಪ ಹಾಗೂ ಗುರುವಂದನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸನಾತನ ಧರ್ಮ ಟೀಕೆ ಮಾಡುವವರು ಮೊದಲು ಈ ಧರ್ಮ ತಿರುಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಅಧ್ಯಯನ ನಡೆಸಿ ಅರ್ಥ ಮಾಡಿಕೊಂಡಿರುವ ಯಾರೂ ಸನಾತನ ಧರ್ಮವನ್ನು ಟೀಕಿಸುವುದಿಲ್ಲ. ಸನಾತನ ಧರ್ಮದಲ್ಲಿ ಆಧ್ಯಾತ್ಮಕ್ಕೆ ಹೆಚ್ಚಿನ ಪ್ರಾಮುಖ್ಯ ಇದ್ದು, ಹೀಗಾಗಿ ಸನಾತನ ಧರ್ಮವು ಪ್ರಪಂಚದ ಇತರ ಭಾಗಗಳಲ್ಲಿ ಹರಡುತ್ತಿದೆ. ಆಧ್ಯಾತ್ಮವು ಸಾಮಾಜಿಕ ಸುಧಾರಣೆಯ ಸಾಧನವೂ ಆಗಿದೆ. ಆಧ್ಯಾತ್ಮವು ಜಗತ್ತಿಗೆ ಭಾರತದ ಶ್ರೇಷ್ಠ ಕೊಡುಗೆಗಳಲ್ಲಿ ಒಂದಾಗಿದೆ. ರಾಷ್ಟ್ರಪತಿಯಾಗಿದ್ದ ಸರ್ವಪಲ್ಲಿ ರಾಧಾಕೃಷ್ಣನ್ ಅವರು ಇದನ್ನು ಒತ್ತು ಹೇಳಿದ್ದಾರೆ ಎಂದರು.

ಆಧ್ಯಾತ್ಮ ಸಮಾಜದ ಯಾವುದೇ ರೀತಿಯ ಬದಲಾವಣೆಗೆ ಆಧಾರವಾಗಿದೆ. ಕೇರಳದಲ್ಲಿ ನಾರಾಯಣ ಗುರುಗಳು ಆಧ್ಯಾತ್ಮದ ಮೂಲಕ ಸಮಾಜ ಸುಧಾರಣೆ ತಂದರು. ಪ್ರತಿ ಗುರುವು ವೇದಾಂತ ಹೇಳುವ ರೀತಿ ಬೇರೆ ಬೇರೆಯಾದರೂ ಅದರ ಉದ್ದೇಶ ಒಂದೇ ಆಗಿರುತ್ತದೆ. ಅವರು ರಚಿಸಿರುವ 64 ಕವನಗಳು ವೇದಾಂತವನ್ನು ಆಧರಿಸಿವೆ ಎಂದು ತಿಳಿಸಿದರು.

> ಈ ಬಾರಿಯ ಚಾತುರ್ಮಾಸ್ಯ ವ್ರತ ಮೂರು ತಿಂಗಳು ಕಾಲ ಸುದೀರ್ಘವಾಗಿ ನಡೆದು ಇಂದು ಸಂಪನ್ನಗೊಂಡಿದೆ. ಈ ಕಾರ್ಯವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟ ಎಲ್ಲರಿಗೂ ಆಶೀರ್ವದಿಸುತ್ತೇವೆ. ಗೋವಾ ರಾಜ್ಯಪಾಲರು, ಇಬ್ಬರು ಶ್ರೀಗಳು ಇದೀಗ ಸನಾತನ ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆಯ ಮಹತ್ವ ತಿಳಿಸಿದ್ದಾರೆ. ಹಿತ್ತಲ ಗಿಡ ಮದ್ದಲ್ಲ ಎಂಬಂತೆ ನಮ್ಮ ಸಂಸ್ಕೃತಿ ಮಹತ್ವದ ಬಗ್ಗೆ ನಾವು ತಿಳಿದುಕೊಳ್ಳುತ್ತಿಲ್ಲ. ಆದರೆ ಇಂದು ಜಗತ್ತು ಈ ಸಂಸ್ಕೃತಿ ನಮಗೆ ಬೇಕೆಂದು ಸ್ವೀಕರಿಸುತ್ತಿದೆ. ನಮ್ಮಲ್ಲಿ ಅದಕ್ಕೆ ವ್ಯತಿರಿಕ್ತವಾದ ವಾತಾವರಣ ನಿರ್ಮಾಣವಾಗುತ್ತಿದೆ. ನಮ್ಮ ಸಂಸ್ಕೃತಿ ಬಗ್ಗೆ ಹೆಚ್ಚು ಗೌರವ, ವಿಶ್ವಾಸ ಮತ್ತು ಹಿರಿಮೆ ಹೊಂದಬೇಕು. –ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ

ಅಂತೆಯೇ ಬಸವಣ್ಣನವರಿಂದ ಕರ್ನಾಟಕದಲ್ಲಿಯೂ ಸಾಮಾಜಿಕ ಸುಧಾರಣೆಯಾಗಿದೆ. ಹಾಗಾಗಿ ಈ ಎರಡು ರಾಜ್ಯಗಳಲ್ಲಿ ಅಸ್ಪೃಶ್ಯತೆಯೂ ಕಡಿಮೆಯಾಗಿದೆ. ಆದರೆ ಇತರ ದಕ್ಷಿಣ ಭಾರತದ ರಾಜ್ಯಗಳಲ್ಲಿ ಆಧ್ಯಾತ್ಮದ ಕೊರತೆಯಿಂದ ಸಾಮಾಜಿಕ ಅಸಮತೋಲನ ಹಾಗೆಯೇ ಉಳಿದಿದೆ ಇಲ್ಲಿ ಬ್ರಾಹ್ಮಣ ವಿರೋಧಿ ಗುಂಪುಗಳಿದ್ದು, ಕಡಿಮೆ ಸಂಖ್ಯೆಯಲ್ಲಿರುವ ಬ್ರಾಹ್ಮಣರ ಮೇಲೆ ದಾಳಿಯೂ ನಡೆದಿದೆ ಎಂದು ಹೇಳಿದರು.

ಅನೇಕ ಪಾಶ್ಚಿಮಾತ್ಯ ದೇಶಗಳು ನಾಸ್ತಿಕತೆಯ ಮನೋಭಾವ ಹೆಚ್ಚುತ್ತಿರುವ ಅಪಾಯಕಾರಿ ಸನ್ನಿವೇಶ ಎದುರಿಸುತ್ತಿವೆ. ಅಧ್ಯಯನದ ಪ್ರಕಾರ ಇಲ್ಲಿ ಶೇ.24ರಷ್ಟು ಜನರು ತಮ್ಮನ್ನು ನಾಸ್ತಿಕರು ಎಂದು ಘೋಷಿಸಿಕೊಂಡಿದ್ದಾರೆ. ಈ ಪ್ರಮಾಣವು ಯುಕೆಯಲ್ಲಿ ಶೇ.52, ಫ್ರಾನ್ಸ್‌ನಲ್ಲಿ ಶೇ.27 ಇದ್ದರೆ, ಭಾರತದಲ್ಲಿ ಶೇ.1ಕ್ಕೂ ಕಡಿಮೆ ಇದೆ. ಹಾಗಾಗಿಯೇ ನಮ್ಮ ದೇಶವು ಪ್ರಗತಿಪಥದಲ್ಲಿ ಸಾಗುತ್ತಿದೆ ಎಂದರು.

ಅಭಿವಂದನಾ ಭಾಷಣ ಮಾಡಿದ ಬೆಂಗಳೂರು ಶ್ರೀ ಪೂರ್ಣಪ್ರಜ್ಞ ಸಂಶೋಧನಾ ಮಂದಿರದ ನಿರ್ದೇಶಕ ಡಾ.ಆನಂದತೀರ್ಥಾಚಾರ್ಯ ನಾಗಸಂಪಿಗೆ, ಸಮಸ್ತ ಹಿಂದೂ ಸಮಾಜದ ಉತ್ಸವವಾಗಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ತಮ್ಮ 36ನೇ ಚಾತುರ್ಮಾಸ್ಯ ವ್ರತ ನಡೆಸಿದ್ದಾರೆ. ಅವರು 3 ಸಾವಿರಕ್ಕೂ ಹೆಚ್ಚು ಗೋವುಗಳನ್ನು ಸಾಕುತ್ತಿದ್ದಾರೆ. ಆ ಮೂಲಕ ಗೋ ಸಂರಕ್ಷಣೆಯ ಮಹತ್ಕಾರ್ಯದಲ್ಲಿ ನಿರತವಾಗಿದ್ದಾರೆ. ಪ್ರಕೃತಿ ಕಾಳಜಿ, ಪ್ರಾಣಿ ಪ್ರೀತಿಯನ್ನು ಅವರಲ್ಲಿ ಕಾಣಬಹುದು ಎಂದು ಹೇಳಿದರು.

50ಕ್ಕೂ ಹೆಚ್ಚು ಸಂಸ್ಥೆಗಳ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ. ಅನ್ಯಾಯ–ಅಧರ್ಮದ ವಿರುದ್ಧ ನಿರಂತರವಾಗಿ ಧ್ವನಿ ಎತ್ತಿದ್ದು, ಸನಾತನ ಧರ್ಮದ ವಿರುದ್ಧದ ಹೇಳಿಕೆಗಳನ್ನು ಖಂಡಿಸಿ ಹಿಂದೂ ಧರ್ಮದ ರಕ್ಷಣೆಗೆ ನಿರಂತರವಾಗಿ ಕ್ರಿಯಾಶೀಲವಾಗಿದ್ದಾರೆ. ಯೋಗ ಸಿದ್ಧಿಗಳೂ ಆದ ಶ್ರೀಗಳು ಕೇವಲ ಬ್ರಾಹ್ಮಣ ಸಮುದಾಯಕ್ಕೆ ಮಾತ್ರ ಸ್ವಾಮೀಜಿಯಾಗದೇ ಇಡೀ ಹಿಂದೂ ಸಮಾಜದ ಶ್ರೀಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು.

ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಸಿಂಧೂ ನಾಗರಿಕತೆ ಸಂದರ್ಭದಲ್ಲೇ ಚಾತುರ್ಮಾಸ್ಯ ವ್ರತ ರೂಢಿಯಲ್ಲಿತ್ತು. ಸನಾತನ ಧರ್ಮವನ್ನು ಸಾಯಿಸಬೇಕು ಎಂದರೆ ಅದು ಮಾನವನನ್ನು ಸಾಯಿಸಬೇಕೆಂಬ ಅರ್ಥ ಬರುತ್ತದೆ. ದೇವರ ಸ್ಮರಣೆಗೂ ಸಮಯವಿಲ್ಲ ಎನ್ನುವ ಸನ್ನಿವೇಶ ಇಂದು ನಿರ್ಮಾಣವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.



ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿಯವರ 36ನೇ ಚಾತುರ್ಮಾಸ್ಯ ವ್ರತ ಮೈಸೂರಿನಲ್ಲಿ ನಡೆದಿರುವುದು ಇಲ್ಲಿನ ನಾಗರಿಕರ ಪುಣ್ಯವೇ ಸರಿ. ಧರ್ಮ ಮತ್ತು ನಂಬಿಕೆಗಳಲ್ಲಿ ವಿಶ್ವಾಸ ಕಳೆದುಕೊಳ್ಳಬಾರದು. ಧರ್ಮ ನಿಷ್ಠೆ ಇದ್ದರೆ ಜೀವನದಲ್ಲಿ ಮೇಲೆ ಬರಲು ಸಾಧ್ಯವಾಗುತ್ತದೆ. ಹಾಗಾಗಿ ಭಗವಂತನಲ್ಲಿ ನಂಬಿಕೆ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿಯವರಿಗೆ ಗುರುವಂದನೆ ಸಲ್ಲಿಸಿ, ನಿಧಿ ಸಮರ್ಪಣೆ ಮಾಡಲಾಯಿತು. ಚಾತುರ್ಮಾಸ್ಯ ವ್ರತ ಸಮಿತಿ ಗೌರವಾಧ್ಯಕ್ಷ ಆರ್.ವಾಸುದೇವ ಭಟ್, ಅಧ್ಯಕ್ಷ ಎಂ.ಕೃಷ್ಣದಾಸ್ ಪುರಾಣಿಕ್, ಕಾರ್ಯಾಧ್ಯಕ್ಷ ರವಿಶಾಸ್ತ್ರಿ, ಶ್ರೀಕೃಷ್ಣಮಿತ್ರ ಮಂಡಳಿ ಅಧ್ಯಕ್ಷ ಪಿ.ಎಸ್.ರಮೇಶ್, ಉಪಾಧ್ಯಕ್ಷ ಎಸ್.ಪುಟ್ಟಣ್ಣ ಭಟ್, ಪಿ.ಜಯರಾಮ್ ಭಟ್, ಸಿ.ಜೆ.ಮೋಹನ್, ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ ಆರ್.ತಂತ್ರಿ ವೇದಿಕೆಯಲ್ಲಿದ್ದರು. ಅಪಾರ ಭಕ್ತ ಸಮೂಹ ಕಾರ್ಯಕ್ರಮದಲ್ಲಿ ಪಾಲ್ಗೊಂಡಿತ್ತು.

ಮೊಂಬತ್ತಿ ಬೆಳಗಿ ಕಾವೇರಿ ನೀರಿನ ಅನ್ಯಾಯಕ್ಕೆ ಖಂಡನೆ



ಮೈಸೂರು,ಸೆ.28(ಎಸ್‌ಬಿಡಿ)– ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ವತಿಯಿಂದ ಮೈಸೂರಿನಲ್ಲಿ ಮೊಂಬತ್ತಿ ಬೆಳಗುವ ಮೂಲಕ ಕಾವೇರಿ ನದಿ ನೀರು ವಿಚಾರದಲ್ಲಿ ರಾಜ್ಯಕ್ಕಾಗುತ್ತಿರುವ ಅನ್ಯಾಯವನ್ನು ಖಂಡಿಸಲಾಯಿತು.

ಮೈಸೂರಿನ ಜಿಲ್ಲಾ ಪಂಚಾಯಿತ್ತಿ ಮುಂಭಾಗ ಗುರುವಾರ ರಾತ್ರಿ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ನೇತೃತ್ವದಲ್ಲಿ 50ಕ್ಕೂ ಹೆಚ್ಚು ಮಂದಿ ಕಾವೇರಿ ಮಾತೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಸರ್.ಎಂ.ವಿಶ್ವೇಶ್ವರಯ್ಯನವರ ಫೋಟೋ ಹಿಡಿದು, ಮೊಂಬತ್ತಿ ಬೆಳಗಿ 'ನಮ್ಮ ಜೀವ ನದಿ ಕಾವೇರಿ ಉಳಿಸಿ ಅನ್ನದಾತರನ್ನ ರಕ್ಷಿಸಿ' ಎಂದು ಒತ್ತಾಯಿಸಿದರು.

ಕಾವೇರಿ ಹೋರಾಟದ ಬಿಸಿ: ತಮಿಳು ನಟ ಸಿದ್ಧಾರ್ಥ್ ಪತ್ರಿಕಾಗೋಷ್ಠಿಗೆ ಅಡ್ಡಿ



ಬೆಂಗಳೂರು, ಸೆ.28– ತಮ್ಮ 'ಚಿಕ್ಕು' ಸಿನಿಮಾದ ಪ್ರಚಾರಕ್ಕಾಗಿ ನಗರಕ್ಕೆ ಬಂದಿದ್ದ ತಮಿಳು ನಟ ಸಿದ್ಧಾರ್ಥ್ ಅವರಿಗೆ ಕಾವೇರಿ ಹೋರಾಟದ ಬಿಸಿ ತಟ್ಟಿತು. ಸಿನಿಮಾ ಪ್ರಚಾರ ನಡೆಸದಂತೆ ಕರವೇ ಸ್ವಾಭಿಮಾನಿ ಸೇನೆ ಸಂಘಟನೆ ಕಾರ್ಯಕರ್ತರು ಗುರುವಾರ ಅವರನ್ನು ತಡೆದರು.

ಸಿದ್ಧಾರ್ಥ್ ನಟನೆಯ 'ಚಿಕ್ಕು' ಸಿನಿಮಾ ತಮಿಳು, ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ಗುರುವಾರ ಬಿಡುಗಡೆಗೊಂಡಿದೆ. ಇದರ ಕನ್ನಡ ಅವತರಣಿಕೆಯ ಮಾಧ್ಯಮ ಪ್ರದರ್ಶನ ಮತ್ತು ಪತ್ರಿಕಾಗೋಷ್ಠಿಯನ್ನು ಮಲ್ಲೇಶ್ವರದ ಎಸ್‌ಆರ್‌ವಿಯಲ್ಲಿ ಸಿನಿಮಾ ತಂಡ ಹಮ್ಮಿಕೊಂಡಿತ್ತು. ಸುದ್ದಿಗೋಷ್ಠಿ ವೇಳೆ ಏಕಾಏಕಿ ನುಗ್ಗಿದ ಕರವೇ ಕಾರ್ಯಕರ್ತರು ಸಿನಿಮಾವನ್ನು ರಾಜ್ಯದಲ್ಲಿ ಬಿಡುಗಡೆ ಮಾಡದಂತೆ ಆಕ್ರೋಶ ವ್ಯಕ್ತಪಡಿಸಿದರು. ಜೊತೆಗೆ ನಟನ ಪತ್ರಿಕಾಗೋಷ್ಠಿಗೂ ಅಡ್ಡಿಪಡಿಸಿದರು.

ವೇದಿಕೆ ಮೇಲೆ ನಟ ಸಿದ್ಧಾರ್ಥ್ ಮಾತನಾಡುತ್ತಿರುವ ಸಂದರ್ಭದಲ್ಲಿ ನುಗ್ಗಿದ ಕಾರ್ಯಕರ್ತರು, 'ಕಾವೇರಿ ವಿವಾದ ಕಾವೇರಿರುವ ಸಂದರ್ಭದಲ್ಲಿ ತಮಿಳು ಸಿನಿಮಾದ ಪ್ರಚಾರ ಮಾಡುವುದು ಸರಿಯಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು. ನಟ ಸಿದ್ಧಾರ್ಥ್, ಕನ್ನಡದಲ್ಲಿಯೇ ಸಿನಿಮಾದ ಕುರಿತು ಮಾತನಾಡಲು ಪ್ರಯತ್ನಿಸಿದರು. ಆದರೆ ಕರವೇ ಕಾರ್ಯಕರ್ತರು ಅದಕ್ಕೆ ಅವಕಾಶ ನೀಡಲಿಲ್ಲ.

ಕಾರ್ಯಕರ್ತರ ಮಾತಿಗೆ ಮಣಿದ ನಟ ಪತ್ರಿಕಾಗೋಷ್ಠಿ ಮೊಟಕುಗೊಳಿಸಿ ಹೊರಟರು. ಮಾಧ್ಯಮ ಪ್ರತಿನಿಧಿಗಳ ಸಂಧಾನದ ಫಲವಾಗಿ ಬಳಿಕ ಯೋಜನೆಯಂತೆ ಚಿತ್ರಪ್ರದರ್ಶನ ನಡೆಯಿತು.

ನಿವೇಶನ ಕೊಡಿಸುವುದಾಗಿ ನಂಬಿಸಿ ಬೀದಿಬದಿ ವ್ಯಾಪಾರಿಗೆ 12 ಲಕ್ಷ ರೂ. ವಂಚನೆ

ಮಾಜಿ ಕಾರ್ಪೋರೇಟರ್ ಆರ್.ಸೋಮಸುಂದರ್ ಬಂಧನ

ತಲೆಮರೆಸಿಕೊಂಡಿರುವ ನಿವೃತ್ತ ಡಿವೈಎಸ್‌ಪಿ ವಿಜಯಕುಮಾರ್‌ಗೆ ಪೊಲೀಸರ ಶೋಧ



ಸೋಮಸುಂದರ್

ಮೈಸೂರು, ಸೆ.28(ಆರ್‌ಕೆ)–ನಕಲಿ ದಾಖಲೆ ಸೃಷ್ಟಿಸಿ ಮುಡಾ ನಿವೇಶನ ಕೊಡಿಸುವ ಭರವಸೆ ನೀಡಿ ಬೀದಿಬದಿ ವ್ಯಾಪಾರಿಯಿಂದ 12 ಲಕ್ಷ ರೂ. ಹಣ ಪಡೆದು ವಂಚಿಸಿರುವ ಆರೋಪದ ಮೇಲೆ ಮಾಜಿ ಕಾರ್ಪೊರೇಟರ್ ಆರ್.ಸೋಮಸುಂದರ್ ಅವರನ್ನು ಲಕ್ಷ್ಮೀಪುರಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅವರೊಂದಿಗೆ ವಂಚನೆಯಲ್ಲಿ ಭಾಗಿಯಾಗಿದ್ದಾರೆನ್ನಲಾದ ನಿವೃತ್ತ ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ಡಿವೈಎಸ್ಪಿ) ವಿಜಯಕುಮಾರ್ ತಲೆಮರೆಸಿಕೊಂಡಿದ್ದು, ಅವರಿಗಾಗಿ ಪೊಲೀಸರು ಬಲೆ ಬೀಸಿದ್ದಾರೆ. ಮೈಸೂರಿನ ಬೋಗಾದಿಯ ಬ್ಯಾಂಕ್ ಕಾಲೋನಿ ನಿವಾಸಿ ಪುಟ್ಟರಾಜೇಗೌಡರ ಮಗ ವೆಂಕಟರಾಜು ಎಂಬುವರು ನೀಡಿದ ಲಿಖಿತ ದೂರಿನ ಮೇರೆಗೆ ಆರ್.ಸೋಮಸುಂದರ ಮತ್ತು ವಿಜಯಕುಮಾರ ವಿರುದ್ಧ ಐಪಿಸಿ ಸೆಕ್ಷನ್ 323, 406, 420, 468, 471, 504, 506 ರೆಡ್‌ವಿತ್ 34 ರೀತ್ಯಾ ಲಕ್ಷ್ಮೀಪುರಂ ಠಾಣೆ ಎಎಸ್‌ಐ ಜಿ.ದೊರೆಸ್ವಾಮಿ ಅವರು ಸೆಪ್ಟೆಂಬರ್ 25ರಂದು ಎಫ್‌ಐಆರ್ ದಾಖಲಿಸಿದ್ದಾರೆ.

ಫಾಸ್ಟ್ ಫುಡ್ ನಡೆಸುತ್ತಿರುವ ವೆಂಕಟರಾಜು ಅವರಿಗೆ ಸ್ನೇಹಿತ ಪರೋಟ ವ್ಯಾಪಾರಿ ದಿನೇಶ್ ಎಂಬುವರ ಮೂಲಕ 2019ರಲ್ಲಿ ಪರಿಚಯವಾದ ಸೋಮಸುಂದರ, ದಿನೇಶ್ ಜೊತೆಯಲ್ಲಿ ಶಾರದಾದೇವಿನಗರದ ಬಳಿಯ ಆನಂದನಗರಕ್ಕೆ ಕರೆದೊಯ್ದು, ಯಾರದೋ ಖಾಲಿ ನಿವೇಶನ (ಸಂಖ್ಯೆ 135–20X30 ಅಡಿ) ತೋರಿಸಿ 12 ಲಕ್ಷ ರೂ.ಗಳಿಗೆ ಕೊಡಿಸುವುದಾಗಿ ನಂಬಿಸಿದ್ದರು ಎಂದು ವೆಂಕಟರಾಜು ದೂರಿನಲ್ಲಿ ತಿಳಿಸಿದ್ದಾರೆ.

2019ರ ಜೂನ್ 14ರಂದು ಏರ್‌ಲೈನ್ಸ್ ಹೋಟೆಲ್‌ಗೆ ತನ್ನನ್ನು ಕರೆಸಿಕೊಂಡು 2 ಲಕ್ಷ ರೂ. ಹಣ ಪಡೆದುಕೊಂಡ ಸೋಮಸುಂದರ್, 2019ರ ಆಗಸ್ಟ್ 8ರಂದು 2 ಲಕ್ಷ ರೂ., 2019ರ ನವೆಂಬರ್ 4ರಂದು 4 ಲಕ್ಷ ರೂ., 2020ರ ನವೆಂಬರ್ 23ರಂದು 2 ಲಕ್ಷ ರೂ. ಹಾಗೂ 2020ರ ನವೆಂಬರ್ 24ರಂದು 2 ಲಕ್ಷ ರೂ.ಗಳಂತೆ ಒಟ್ಟು 12 ಲಕ್ಷ ರೂ. ಹಣ ಪಡೆದುಕೊಂಡರು ಎಂದು ತಿಳಿಸಿದ್ದಾರೆ.

ಅಲ್ಲದೆ ಮೈಸೂರು ಮಹಾನಗರ ಪಾಲಿಕೆಯಲ್ಲಿ ನನ್ನ ಹೆಸರಿನ ಸ್ವಯಂ ಆಸ್ತಿ ತೆರಿಗೆ ಘೋಷಣೆ ವಿವರ ಪಟ್ಟಿ, ಚಲನ್, ಮುಡಾ ಕಚೇರಿಯಲ್ಲಿ ನನ್ನ ಹೆಸರಿನಲ್ಲಿ ಹಣ ಪಾವತಿಸಿರುವ ಚಲನ್ ಹಾಗೂ ಪಾಲಿಕೆಯ ಬಾಕಿ ಮೊತ್ತ ಪಾವತಿಸುವಂತೆ ನೀಡಿರುವ ನೋಟಿಸ್ ಪ್ರತಿಗಳನ್ನು ನನಗೆ ನೀಡಿದ್ದ ಸೋಮಸುಂದರ್, ನನ್ನ ಹೆಸರಿಗೆ ಸೈಟ್ ನೋಂದಣಿ ಮಾಡಿಸುವಂತೆ ಕೇಳಿದಾಗಲೆಲ್ಲಾ ಇಲ್ಲ–ಸಲ್ಲದ ಸಬೂಬು ಹೇಳಿ ಸತಾಯಿಸುತ್ತಿದ್ದರು ಎಂದು ಅವರು ದೂರಿನಲ್ಲಿ ಆರೋಪಿಸಿದ್ದಾರೆ.

ಈ ಸಂಬಂಧ ನಾನು ನಗರಪಾಲಿಕೆ, ಮುಡಾ ಕಚೇರಿಗಳಿಗೆ ಹೋಗಿ ವಿಚಾರಿಸಿದಾಗ ದಾಖಲೆಗಳು ನಕಲಿ ಎಂಬುದು ತಿಳಿಯಿತು. ಗಾಬರಿಯಾದ ನಾನು ಸೋಮಸುಂದರ್ ಅವರನ್ನು ಫೋನ್ ಮೂಲಕ ಸಂಪರ್ಕಿಸಿ, ನನಗೆ ಸೈಟ್ ಬೇಡ, ನೀವು ನೀಡಿರುವ ದಾಖಲೆ ಪತ್ರ ಪಡೆದುಕೊಂಡು ನಾನು ಕೊಟ್ಟಿರುವ 12 ಲಕ್ಷ ರೂ. ಹಿಂದಿರುಗಿಸುವಂತೆ ಹೇಳಿದಾಗ ಅವರು ಅದಕ್ಕೆ ಸ್ಪಂದಿಸಲಿಲ್ಲ ಎಂದು ವೆಂಕಟರಾಜು ದೂರಿದ್ದಾರೆ.

ಕಳೆದ 2 ತಿಂಗಳ ಹಿಂದಷ್ಟೇ ದಿನೇಶ್ ಮೂಲಕ ನನ್ನನ್ನು ಸದರನ್ ಸ್ಟಾರ್ ಹೋಟೆಲ್‌ಗೆ ಕರೆಸಿಕೊಂಡ ಸೋಮಸುಂದರ್, ಅಲ್ಲಿ ಅವರೊಂದಿಗಿದ್ದ ನಿವೃತ್ತ ಡಿವೈಎಸ್ಪಿ ವಿಜಯಕುಮಾರ್‌ನೊಂದಿಗೆ ಸೇರಿ ಅವಾಚ್ಯ ಶಬ್ದಗಳಿಂದ ಬೈದು, "ನಿನಗೆ ಯಾವ ಸೈಟ್ ಅನ್ನೂ ರಿಜಿಸ್ಟರ್ ಮಾಡಿಕೊಡುವುದಿಲ್ಲವೆಂದು ಹೇಳಿ, ನನ್ನ ಮೇಲೆ ಹಲ್ಲೆ ನಡೆಸಿದರು. ನಾನು ಕೊಟ್ಟಾಗ ಹಣ ಪಡೆದುಕೊಳ್ಳಬೇಕೇ ಹೊರತು, ಹೆಚ್ಚಿಗೆ ಮಾತನಾಡಿದರೆ ನಿನಗೂ, ನಿನ್ನ ಸ್ನೇಹಿತನಿಗೂ ಒಂದು ಗತಿ ಕಾಣಿಸುತ್ತೇವೆ. ಕಂಪ್ಲೇಂಟ್ ಕೊಟ್ಟರೆ ನಿಮ್ಮನ್ನು ಕೊಲೆ ಮಾಡಿಸಿ ಸಾಕ್ಷಿ ಸಿಗದಂತೆ ಮಾಡಿ ಬಚಾಯಿಸಿಕೊಳ್ಳುತ್ತೇವೆ" ಎಂದು ಬೆದರಿಕೆ ಹಾಕಿದರು ಎಂದು ವೆಂಕಟರಾಜು ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ.

ಮುಡಾ, ಪಾಲಿಕೆ ಹಾಗೂ ಉಪ ನೋಂದಣಾಧಿಕಾರಿ ಕಚೇರಿಯವು ಎಂದು ನಕಲಿ ದಾಖಲೆಗಳನ್ನು ಸೃಷ್ಟಿಸಿರುವ ಪ್ರತಿಗಳನ್ನು ನೀಡಿ ನಂಬಿಸಿ 12 ಲಕ್ಷ ರೂ. ಹಣ ಪಡೆದು ವಂಚಿಸಿರುವ ಆರ್.ಸೋಮಸುಂದರ್ ಮತ್ತು ವಿಜಯಕುಮಾರ್ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಲಕ್ಷ್ಮೀಪುರಂ ಠಾಣೆ ಪ್ರಭಾರ ಇನ್ಸ್‌ಪೆಕ್ಟರ್ ನಾಗೇಗೌಡ, ನಿನ್ನೆ ಸೋಮಸುಂದರ್‌ನನ್ನು ಬಂಧಿಸಿ ವಿಚಾರಣೆ ನಡೆಸಿದ ಬಳಿಕ ಇಂದು ಸಂಜೆ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ರಾತ್ರಿ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು.

ವಂಚನೆ ಪ್ರಕರಣದಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿರುವ ನಿವೃತ್ತ ಡಿವೈಎಸ್ಪಿ ವಿಜಯಕುಮಾರ್‌ಗಾಗಿ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಕಿರುರಂಗಮಂದಿರದಲ್ಲಿ ಪಾರ್ಶ್ವಸಂಗೀತ ನಾಟಕ ಪ್ರದರ್ಶನ

ಮೈಸೂರು,ಸೆ.28–ರಂಗವಲ್ಲಿ ತಂಡವು ಸೆ.30, ಅ. 1, 7 ಹಾಗೂ 8ರ ಶನಿವಾರ, ಭಾನುವಾರಗಳಂದು ಸಂಜೆ 6.30 ಗಂಟೆಗೆ ಕಲಾಮಂದಿರದ ಕಿರುರಂಗಮಂದಿರದಲ್ಲಿ ಸಾಹಿತಿ ಶ್ರೀನಿವಾಸ ವೈದ್ಯ ಅವರ ಬರಹಗಳನ್ನಾಧರಿಸಿದ ಪಾರ್ಶ್ವಸಂಗೀತ ನಾಟಕ ಪ್ರದರ್ಶನ ಏರ್ಪಡಿಸಿದೆ. ರಂಗಾಯಣದ ಹಿರಿಯ ಕಲಾವಿದ ಪ್ರಶಾಂತ್ ಹಿರೇಮಠ ಈ ನಾಟಕ ನಿರ್ದೇಶಿಸಿದ್ದಾರೆ. ಯುವ ಸಾಹಿತಿ ಬಿ.ಪಿ.ಅರುಣ್ ರಂಗರೂಪ ಮಾಡಿರುವ ಈ ನಾಟಕದ ರಂಗವಿನ್ಯಾಸ–ಹೆಚ್.ಕೆ.ದ್ವಾರಕಾನಾಥ್, ಸಂಗೀತ ನಿರ್ವಹಣೆ–ವಿಶ್ವಾಸ್‌ಕೃಷ್ಣ, ಬೆಳಕಿನ ವಿನ್ಯಾಸ–ಕೃಷ್ಣಕುಮಾರ್ ನಾರ್ಣಕಜೆ, ವಸ್ತ್ರವಿನ್ಯಾಸ–ನಂದಿನಿ ಕೆ.ಆರ್., ಪ್ರಚಾರ ವಿನ್ಯಾಸ–ರವಿಪ್ರಸಾದ್, ನೃತ್ಯಸಂಯೋಜನೆ–ಕಾರ್ತಿಕ್ ಉಪಮನ್ಯು, ರಂಗನಿರ್ವಹಣೆ–ಸೀಮಂತಿನಿ ಬಿ., ಸಹನಿರ್ದೇಶನ–ಮಹೇಶ್‌ಕುಮಾರ್ ಅವರದ್ದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ: 9590259095/ 9964656482 ಸಂಪರ್ಕಿಸಬಹುದು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : "ವಧು ಪರೀಕ್ಷೆಯ ಸಮಯದಲ್ಲಿ ನೀವು ತುಂಬಾ ಕೋಪದಲ್ಲಿದ್ರಿ ನೆನಪಿದೆಯೇ?"

ಗಂಡ : "ಹೌದು ! ಕೋಪದಲ್ಲಿ ತೆಗೆದುಕೊಳ್ಳುವ ಯಾವ ನಿರ್ಧಾರವೂ ಸರಿಯಿರುವುದಿಲ್ಲ ಎಂದು ನಮ್ಮ ಮದುವೆಯ ನಂತರವೇ ಗೊತ್ತಾದದ್ದು"

ಮೈಸೂರು ಮಿತ್ರ

ಶುಕ್ರವಾರ, 29 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಭವಿಷ್ಯತ್ತಿನೊಂದಿಗೆ ಯಾರು ಅತಿ ಸಮೀಪವರ್ತಿಯಾಗಿದ್ದಾನೋ ಅವನನ್ನು ನಾನು ಸನ್ಮಾರ್ಗಿ ಎಂದು ಭಾವಿಸುತ್ತೇನೆ. –ಹೆನ್ರಿಕ್ ಇಬ್ಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಊರನ್ನೇ ಬಿಟ್ಟೋನಿಗೆ ನೀರಿನ ಹಂಗೇನು

ನಿಮ್ಮ ಪತ್ರಗಳು

ಪಾಲಿಕೆ ಆಯುಕ್ತರೇ, ಹೀಗೂ ಉಂಟೆ?

ಮಾನ್ಯರೆ,

ಸ್ವಚ್ಛ ಮೈಸೂರು ಅಭಿಯಾನ ಅಭಿಪ್ರಾಯ ಸಂಗ್ರಹವಾಗುತ್ತಿದ್ದರೆ ಪಾಲಿಕೆಯ ಪೌರಕಾರ್ಮಿಕರು ರಸ್ತೆಯ ಕಸ ಗುಡಿಸಲು ನಾಲ್ಕು ತಿಂಗಳುಗಳಿಂದ ಬಾರದೇ ಇರುವ ಘಟನೆ ಚಾಮರಾಜಪುರಂ ವಿಷ್ಣುವರ್ಧನ ರಸ್ತೆ ಹಾಗೂ ದೇವಪಾರ್ಥಿವ ರಸ್ತೆಯಲ್ಲಿ ನಡೆದಿದೆ. ಜಯಲಕ್ಷ್ಮಿ ವಿಲಾಸ ರಸ್ತೆ ಗುಡಿಸುವ ಪೌರಕಾರ್ಮಿಕ ಇಪ್ಪತ್ತು ಅಡಿ ದೂರದ ನಮ್ಮ ರಸ್ತೆಗೆ ಬರುವುದೇ ಇಲ್ಲ!

ಇಲ್ಲಿನ ನಿವಾಸಿಗಳೇ ರಸ್ತೆಯನ್ನು ಗುಡಿಸುತ್ತಿರುವುದರಿಂದ ರಸ್ತೆ ಸ್ವಚ್ಛವಾಗಿಯೇ ಇದೆ. ಬೇಸತ್ತ ನಾಗರಿಕರು ಇನ್ನೇನು ಮಾಡಲು ಸಾಧ್ಯ?

ಪಾಲಿಕೆಯ ಮೇಲ್ವಿಚಾರಕ ರಾಜು ಅವರಿಗೆ ಹಲವು ಸಲ ಹೇಳಿದರೂ ಜನವಿಲ್ಲ, ನಾನೇನು ಮಾಡಲಿ ಎಂದು ಹೇಳಿ ಕೈಚೆಲ್ಲುತ್ತಾರೆ. 42ನೇ ವಾರ್ಡಿನ ಪಾಲಿಕೆಯ ಸದಸ್ಯ ಎಂ.ಶಿವಕುಮಾರ್ ಅವರಿಗೆ ಹೇಳಿದರೆ ಅವರದೂ ಅದೇ ಉತ್ತರ. ಪಾಲಿಕೆಯ ಆಯುಕ್ತರಿಗೇ ದೂರು ನೀಡಿ ಎನ್ನುವ ಬಿಟ್ಟಿ ಸಲಹೆಯನ್ನೂ ಪಾಲಿಕೆಯ ಸದಸ್ಯರು ನೀಡುತ್ತಾರೆ. ಆಯುಕ್ತರೇ ಈ ಸಣ್ಣ ಕೆಲಸಕ್ಕೂ ಬರಬೇಕಾದರೆ ಪಾಲಿಕೆಯ ಸದಸ್ಯರಾಗಿ ಇವರೇಕೆ ಇರಬೇಕು? ಪಾಲಿಕೆಯ ಆಯುಕ್ತರೇ ನೀವಾದರೂ ಈ ಸಮಸ್ಯೆಯನ್ನು ಪರಿಹರಿಸುವಿರೇ?

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಮೈಸೂರು

ಮದ್ಯದಂಗಡಿ ಲೈಸೆನ್ಸ್ ಪ್ರಸ್ತಾಪ ಕೈಬಿಡುವಂತೆ ಮನವಿ

ಮಾನ್ಯರೆ,

ಮೂರು ಸಾವಿರ ಜನಸಂಖ್ಯೆ ಇರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮದ್ಯದಂಗಡಿ ತೆರೆಯಲು ಮುಂದಾಗಿರುವುದು ಸರಿಯಲ್ಲ. ಇದರಿಂದ ಕುಟುಂಬಗಳು ಬೀದಿ ಪಾಲಾಗುತ್ತವೆ. ಮದ್ಯದ ಅಮಲಿನಿಂದ ಅಹಿತಕರ ಘಟನೆ ನಡೆಯುವುದುಂಟು. ಈಗ ಮೂರು ಸಾವಿರ ಜನಸಂಖ್ಯೆ ಗ್ರಾಮ ಪಂಚಾಯಿತಿಗೊಂದರಂತೆ ಮದ್ಯದಂಗಡಿ ತೆರೆದರೆ ಮತ್ತೆ ಮದ್ಯಪಾನವನ್ನೂ ಪ್ರೋತ್ಸಾಹಿಸಿ ಬೆಳೆಸಿದಂತೆ ಆಗುತ್ತದೆ. ಕೂಡಲೇ ರಾಜ್ಯ ಸರ್ಕಾರ ಈ ಆದೇಶವನ್ನು ಹಿಂದಕ್ಕೆ ಪಡೆಯಬೇಕೆಂದು ಮನವಿ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು

ಬ್ಯಾಂಕುಗಳು ಸ್ಥಳೀಯ ಭಾಷೆಗೆ ಆದ್ಯತೆ ನೀಡಲಿ!

ಮಾನ್ಯರೆ,

ಬ್ಯಾಂಕುಗಳಲ್ಲಿ ಜನರ ಜತೆಗೆ ನೇರವಾಗಿ ವ್ಯವಹಾರ ಮಾಡುವವರು ಸ್ಥಳೀಯ ಭಾಷೆ ತಿಳಿದಿರಬೇಕು. ಸ್ಥಳೀಯ ಭಾಷೆಗಳನ್ನು ತಿಳಿಯದೇ ಇರುವವರನ್ನು ಬ್ಯಾಂಕಿನ ಶಾಖೆಗಳಲ್ಲಿ ಉದ್ಯೋಗದಲ್ಲಿ ಇರಿಸುವುದು ಔಚಿತ್ಯ ಅನಿಸದು. ಜೊತೆಗೆ ಬ್ಯಾಂಕಿನ ಅಧಿಕಾರಿಗಳು ನಿಗದಿತ ಸ್ಥಳೀಯ ಭಾಷೆಯಲ್ಲಿಯೇ ಮಾತನಾಡಿ ಗ್ರಾಹಕರೊಂದಿಗೆ ವ್ಯವಹರಿಸುವುದು ಹೆಚ್ಚು ಸೂಕ್ತ. ಇದರಿಂದ ಬ್ಯಾಂಕಿನ ವ್ಯವಸ್ಥೆಯ ಮೇಲೆ ನಂಬಿಕೆ ಇರಿಸಿ ವ್ಯವಹರಿಸುವ ಗ್ರಾಹಕನಿಗೆ ಹೆಚ್ಚು ಅನುಕೂಲವಾಗುತ್ತದೆ.

ಏಕೆಂದರೆ ಬ್ಯಾಂಕ್‌ನಲ್ಲಿ ವ್ಯವಹರಿಸುವರು ಎಲ್ಲರೂ ಅಕ್ಷರಸ್ಥರೇ ಆಗಿರುವುದಿಲ್ಲ. ಬಹುಪಾಲು ಜನರು ಅನಕ್ಷರಸ್ಥರೇ ಆಗಿರುತ್ತಾರೆ. ವೃದ್ಧಾಪ್ಯದಲ್ಲಿ ಸಿಗುವ ಪಿಂಚಣಿ ಹಾಗೂ ಮತ್ತಾವುದೋ ಕಾರಣಕ್ಕೆ ಬ್ಯಾಂಕ್‌ನಲ್ಲಿ ಖಾತೆ ತೆರೆದು ವ್ಯವಹರಿಸುತ್ತಾರೆ. ಇವರಿಗೆ ಸ್ಥಳೀಯ ಭಾಷೆ ಬಿಟ್ಟು ಅನ್ಯಭಾಷೆ ಬಹುತೇಕರಿಗೆ ತಿಳಿಯದು ಹಾಗೂ ಬ್ಯಾಂಕ್‌ಗೆ ಬರುವ ಗ್ರಾಹಕರೆಲ್ಲರೂ ಬಹುಭಾಷಾ ಪಂಡಿತರು ಕೂಡ ಆಗಿರುವುದಿಲ್ಲ! ಹೀಗಾಗಿ ಭಾಷೆ ಗೊತ್ತಿಲ್ಲದ ಸಿಬ್ಬಂದಿ ಜೊತೆ ಅನಗತ್ಯ ಜಗಳ, ಕಿರಿಕಿರಿ ಮಾಡಿಕೊಂಡು ತೊಂದರೆ ಪಡುವ ಬದಲು, ನಿಗದಿತ ಬ್ಯಾಂಕ್ ಶಾಖೆಗಳಲ್ಲಿ ಸ್ಥಳೀಯ ಭಾಷೆಗಳಲ್ಲಿ ವ್ಯವಹರಿಸಲು ಸಾಧ್ಯವಾಗದಿರುವ ಸಿಬ್ಬಂದಿ ಹಾಗೂ ಅಧಿಕಾರಿಯನ್ನು ಗ್ರಾಹಕರ ಜತೆಗಿನ ನೇರ ವ್ಯವಹಾರದಿಂದ ದೂರವಿಡುವುದೇ ಹೆಚ್ಚು ಸಮಂಜಸ.

ಇಷ್ಟಕ್ಕೂ ಬ್ಯಾಂಕ್‌ನಲ್ಲಿ ಕೆಲಸ ಮಾಡುವ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಸ್ಥಳೀಯ ಭಾಷೆ ಕಲಿಯಲು ಅಡ್ಡಿ ಏನಿದೆ? ಕರ್ಮಭೂಮಿಯಲ್ಲಿ ಅವರು ಇದ್ದು, ಕೆಲಸ ಮಾಡುವಾಗ ಸ್ಥಳೀಯ ಭಾಷೆಯನ್ನು ಕಲಿಯಲೇಬೇಕಿರುವುದು ತುಂಬಾ ಅವಶ್ಯಕ ಹಾಗೂ ಅನಿವಾರ್ಯ. ಅಲ್ಲದೇ ಸ್ಥಳೀಯ ಭಾಷೆ ಅರಿಯದ ಸಿಬ್ಬಂದಿ ಹಾಗೂ ಅಧಿಕಾರಿಗಳನ್ನು ಆ ಪ್ರದೇಶಕ್ಕೆ ಸಂಬಂಧಪಟ್ಟ ಬ್ಯಾಂಕ್ ಅಧಿಕಾರಿಗಳು ಹೇಗೆ ವರ್ಗಾಯಿಸುತ್ತಾರೆ ಎಂಬುದು ಕೂಡ ಅರ್ಥಹೀನ. ಈ ಹಿನ್ನೆಲೆಯಲ್ಲಿ ಬ್ಯಾಂಕ್‌ಗಳಲ್ಲಿ ಜನರ ಜತೆಗೆ ನೇರವಾಗಿ ವ್ಯವಹಾರ ಮಾಡುವವರು ಸ್ಥಳೀಯ ಭಾಷೆ ತಿಳಿದಿರಬೇಕಿರುವುದು ಹೆಚ್ಚು ಸೂಕ್ತ ಹಾಗೂ ಅವಶ್ಯಕ ಅನಿಸುತ್ತದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಕರ್ನಾಟಕ ಬಂದ್‌ಗೆ ಕನ್ನಡ ಸಂಘಟನೆಗಳು ಸಹಕಾರ ನೀಡಲಿ

ಮಾನ್ಯರೆ,

ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ವಿರೋಧಿಸಿ ಸೆ. 26 ರಂದು ನಡೆದ ಬೆಂಗಳೂರು ಬಂದ್ ಸಂಪೂರ್ಣ ಯಶಸ್ವಿಯಾಗಿದೆ. ಇದರ ಪರಿಣಾಮವಾಗಿ ಕಾವೇರಿ ನದಿ ಪ್ರಾಧಿಕಾರವು ಐದು ಸಾವಿರ ಕ್ಯೂಸೆಕ್ ಬದಲು ಮೂರು ಸಾವಿರ ಕ್ಯೂಸೆಕ್ಸ್ ನೀರು ಬಿಡುಗಡೆ ಮಾಡುವಂತೆ ಕರ್ನಾಟಕ ಸರ್ಕಾರಕ್ಕೆ ಆದೇಶ ಹೊರಡಿಸಿದೆ. ಈಗ ಶುಕ್ರವಾರ ಇಡೀ ಕರ್ನಾಟಕವೇ ಕಾವೇರಿ ನದಿ ನೀರು ಬಿಡದಂತೆ ಕರ್ನಾಟಕ ಬಂದ್ ಮಾಡುವುದರಿಂದ ಕಾವೇರಿ ನದಿ ಪ್ರಾಧಿಕಾರಕ್ಕೆ ನಮ್ಮ ಸಮಸ್ಯೆ ಅರ್ಥವಾಗಿ ತಮಿಳುನಾಡಿಗೆ ನೀರು ಹರಿಸುವುದನ್ನು ನಿಲ್ಲಿಸುವಂತೆ ಪ್ರಾಧಿಕಾರ ತೀರ್ಮಾನ ಕೈಗೊಳ್ಳಲಿ. ಶುಕ್ರವಾರದ ಕರ್ನಾಟಕದ ಬಂದ್ ಸಂಪೂರ್ಣ ಯಶಸ್ವಿಯಾದಾಗ ಮಾತ್ರ ಇದು ಸಾಧ್ಯ. ಕೆಲವು ಕನ್ನಡ ಸಂಘಟನೆಗಳು ತಮ್ಮ ತಮ್ಮ ಪ್ರತಿಷ್ಠೆಯನ್ನು ಬದಿಗಿರಿಸಿ ಶುಕ್ರವಾರದ ಬಂದ್‌ಗೆ ಸಹಕಾರ ನೀಡಲಿ.


– ಬೂಕನಕೆರೆ ವಿಜೇಂದ್ರ, ಲೇಖಕರು, ಕುವೆಂಪುನಗರ

ವಾರಕ್ಕೊಮ್ಮೆ ಜನತಾ ದರ್ಶನ

ಮಾನ್ಯರೆ,

ಇವತ್ತಿನ ಪೇಪರ್‌ನಲ್ಲಿ ಮಂತ್ರಿಗಳು, ಶಾಸಕರು, ಜಿಲ್ಲಾಧಿಕಾರಿಗಳು ವಾರಕ್ಕೊಮ್ಮೆ ಜನತಾ ದರ್ಶನ ಭಾಗ್ಯ ಕರುಣಿಸಬೇಕೆಂದು ಹೇಳಿದೆ. ಇದೇನು ಹೊಸದಲ್ಲ. ಮುಖ್ಯಮಂತ್ರಿಗಳು ದೂರುಗಳನ್ನು ಜಿಲ್ಲಾಧಿಕಾರಿಗೆ, ತಹಸೀಲ್ದಾರರಿಗೆ ಕಳಿಸಿ ಪೇಪರ್‌ನಲ್ಲಿ ಇಷ್ಟು ಸಾವಿರ ಅರ್ಜಿ ಅಂತ ಹೇಳುತ್ತಾರೆ. ತಹಸೀಲ್ದಾರರು, ರೆವೆನ್ಯೂ ಇನ್ಸ್‌ಪೆಕ್ಟರ್ ಅಲ್ಲಿಂದ ವಿಲೇಜ್ ಅಕೌಂಟೆಂಟ್ ಬಳಿ ಹೋಗುತ್ತದೆ. ಮೇಲಿನವರು ಅದರ ಬಗ್ಗೆ ಟ್ರ್ಯಾಕ್ ಇಡುವುದಿಲ್ಲ. ಕೆಳಗಿನವರು ಡೋಂಟ್ ಕೇರ್ ಮನಸ್ಸಿನವರು. ಈಗ ಸಕಾಲ ಅಕಾಲವಾಗಿದೆ. ಮುಖ್ಯಮಂತ್ರಿಗಳು ಜನತಾ ದರ್ಶನ ಕೊಡುವ ಅಧಿಕಾರದ ವ್ಯಕ್ತಿಯ ದೂರವಾಣಿ ಸಂಖ್ಯೆ ಕೊಡಿ. ಕರೆಯನ್ನು ಅವರೇ ಖುದ್ದು ಸ್ವೀಕರಿಸಬೇಕು. ಬೇರೆಯವರಿಗೆ ಫೋನ್ ಮಾಡಿ ಅನ್ನುವಂತಿಲ್ಲ. ದೂರುದಾರರಿಗೆ ಒಂದು ವಾರದಲ್ಲಿ ಫೋನ್ ಮಾಡಿ ಎಂದು ಹೇಳಿ, ತೆಗೆದುಕೊಂಡ ಕ್ರಮವನ್ನು ಅವರೇ ತಿಳಿಸಬೇಕು. ಆಗ ಜನಗಳಿಗೆ ನಂಬಿಕೆ ಬರುತ್ತದೆ.

–ಅಕ್ಕಿಹೆಬ್ಬಾಳು ವೆಂಕಟೇಶ್, ಮೈಸೂರು



ಡಾ. ವಿ. ರಂಗನಾಥ್

ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು


ಮೊ : 94482 08746 / 97421 79000

ಚಿಂತನೆ

ಸಾಧನೆಯಿಲ್ಲದೆ ಸತ್ತರೆ ಸಾವಿಗೆ ಸೂತಕ !!!

> ನಮ್ಮ ಅಂಗಾಂಗಗಳಿಗೆ ಇಷ್ಟೊಂದು ಬೆಲೆ ಇದೆ. ಅದನ್ನು ನಾವು ಹೇಗೆ ಬಳಸಿಕೊಳ್ಳುತ್ತಿದ್ದೇವೆ? ಎಂದು ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಬೇಕು. ನಾನು ಬಯಸದೇ ಇಷ್ಟೆಲ್ಲಾ ಅಂಗಗಳು ನನಗೆ ಉಚಿತವಾಗಿ ಲಭಿಸಿದೆ. ಇದನ್ನು ಇತರರ ಕೆಲಸಕ್ಕಾಗಿ ಬಳಸುತ್ತೇನೆ ಎಂಬ ವಿವೇಕ ಮೂಡಬೇಕು. ಕನ್ನಡ ಚಲನಚಿತ್ರ 'ಮಣ್ಣಿನಮಗ'ದಲ್ಲಿ ಅಳವಡಿಸಿಕೊಂಡ ಗೀತಪ್ರಿಯ ಅವರ ಗೀತೆ ಭಗವಂತ ಕೈಕೊಟ್ಟ ದುಡಿಯೋಕ್ಕಂತ, ಅದನ್ಯಾಕೆ ಎತ್ತುವೆ ಹೊಡೆಯೋಕ್ಕಂತಾ?... ಎಂದು ಹೇಳುತ್ತದೆ. ಹಾಗೆಯೇ ಬಾಯಿ ಇರುವುದು ನುಡಿಯಲು, ಅದನ್ನು ಬೈಯಲು ಉಪಯೋಗಿಸಬಾರದು ಹೀಗೆ ನಾನಾ ಮಾನವೀಯ ಮಾತುಗಳು ಅದರಲ್ಲಿದೆ.

ನಮ್ಮ ದೇಹ ದೇವಾಲಯವಿದ್ದಂತೆ. ಆದ್ದರಿಂದ ಇದನ್ನು ಪವಿತ್ರವಾಗಿ ಇಟ್ಟುಕೊಳ್ಳಬೇಕು. ದೇವಾಲಯದಲ್ಲಿ ಹೇಗೆ ದೇವರಿಗೆ ಪ್ರಾಶಸ್ತ್ಯವಿರುವುದೋ ಹಾಗೆ ದೇಹಕ್ಕೂ ಪ್ರಾಶಸ್ತ್ಯ ನೀಡಬೇಕು. ದೇವಾಲಯವನ್ನು ಶುದ್ಧಮಾಡಿ ಭಕ್ತಿಭಾವದಿಂದ ನೋಡಿಕೊಳ್ಳುವಂತೆ, ಈ ದೇಹವನ್ನೂ ನೋಡಿಕೊಳ್ಳಬೇಕು. ಏಕೆಂದರೆ ಗುಡಿಯೊಳಗೆ ದೇವರಿರುವಂತೆ ಇಲ್ಲಿ ಆತ್ಮ ಎಂಬ ದೇವರಿದೆ ಎಂದು ಹೇಳಲೂ ಬಹುದು. ದೇಗುಲದಲ್ಲಿ ಪಾವಿತ್ರ್ಯ ಕಾಪಾಡಿಕೊಳ್ಳದಿದ್ದರೆ ಹೇಗೆ ಅಪಚಾರವೋ ಹಾಗೆಯೇ ಈ ದೇಹವನ್ನು ಅಪವಿತ್ರಗೊಳಿಸಿಕೊಂಡರೆ ಅದನ್ನೂ ಅಪಚಾರವೆಂದೇ ಪರಿಗಣಿಸಬೇಕು. ದೇಹದ ಅಪಚಾರ ಎಂದರೆ, ಈ ದೇಹ ಸೃಷ್ಟಿಯಾಗಿರುವುದೇ ಏನನ್ನಾದರೊಂದನ್ನು ಸಾಧಿಸಲಿಕ್ಕಾಗಿ. ಅದನ್ನು ಆ ರೀತಿಯ ಸಾಧನೆಯ ಹಾದಿಗೆ ತರದಿದ್ದರೆ ದೇಹಕ್ಕೆ ಅಪಚಾರವಾದಂತೆ.



ಮನುಷ್ಯನ ದೇಹದಲ್ಲಿ ಕೆಲವು ಅಂಗಗಳು ಒಂದೊಂದು ಇದ್ದರೆ, ಕೆಲವು ಎರಡೆರಡು ಇರುತ್ತವೆ. ದೇಹದಲ್ಲಿ ಬುದ್ಧಿ ಅಥವಾ ಮೆದುಳು ಒಂದೇ. ಹಾಗೆ ಹೃದಯವೂ ಒಂದೇ. ಮೆದುಳು ಹಾಗೂ ಹೃದಯ ಯಾವಾಗಲೂ ಇತರರಿಗಾಗಿ ಮಿಡಿಯುತ್ತಿರಬೇಕು. ಮೆದುಳು ಯೋಚಿಸಿ ಸೂಚನೆ ನೀಡುತ್ತದೆ. ಮೆದುಳಿಗೆ ಹೃದಯವೇ ಸೂಚನೆ ನೀಡುವಂತೆ ಇರಬೇಕು. ಹೃದಯ ಯಾವಾಗಲೂ ಮೃದು ಸ್ವಭಾವದ್ದಾಗಿರುತ್ತದೆ. ಅದು ಉತ್ತಮ ಕೆಲಸಕ್ಕಾಗಿ ಮಿಡಿಯುತ್ತದೆ. ಮಿದುಳಿಗೆ ಅದೇ ರೀತಿ ಯೋಚಿಸಲು ಸೂಚನೆ ನೀಡುತ್ತದೆ.

ಮಿದುಳು ಯಾವಾಗಲೂ ತಪ್ಪು ಸರಿಗಳನ್ನು ವಿಶ್ಲೇಷಿಸಿ ಮನುಷ್ಯನಿಗೆ ತಿಳಿವಳಿಕೆ ನೀಡುತ್ತದೆ. ಇಂತಹ ತಿಳಿವಳಿಕೆಯನ್ನು ಅನುಷ್ಠಾನಗೊಳಿಸಲು ದೇಹದಲ್ಲಿ ಎರಡು ಕಣ್ಣುಗಳು, ಎರಡು ಕೈಗಳು, ಎರಡು ಕಾಲುಗಳು, ಎರಡು ಕಿವಿಗಳು ಇವೆ. ದೇಹದ ಸ್ವಾಸ್ಥ್ಯಕ್ಕಾಗಿ ಎರಡು ಶ್ವಾಸಕೋಶಗಳೂ ಇವೆ. ಇವನ್ನೆಲ್ಲಾ ಸರಿಯಾಗಿ ಬಳಸಿಕೊಂಡು ಉತ್ತಮ ಬದುಕು ಮಾಡಬಹುದಾದ ಅವಕಾಶ ಎಲ್ಲರಿಗೂ ಇದ್ದೇ ಇರುತ್ತದೆ. ಎಲ್ಲರ ಮನಸ್ಸಿನಲ್ಲೂ ಒಳ್ಳೆಯದು ಯಾವುದು, ಕೆಟ್ಟದ್ದು ಯಾವುದು ಎಂಬುದರ ವಿಶ್ಲೇಷಣೆ ನಡೆಯುತ್ತಲೇ ಇರುತ್ತದೆ. ಯಾವುದು ತಪ್ಪು, ಅದನ್ನು ಮಾಡುವುದರಿಂದ ಏನೆಲ್ಲಾ ತೊಂದರೆಯಾಗಬಹುದು, ಯಾವುದು ಒಳ್ಳೆಯದು, ಅದನ್ನು ಆಚರಿಸುವುದರಿಂದ ಏನೆಲ್ಲಾ ಒಳಿತಾಗುತ್ತದೆ ಎಂಬ ಮಂಥನವನ್ನು ಮಾಡುತ್ತಾ ಮನಸ್ಸು ಎಚ್ಚರಿಸುತ್ತಿರುತ್ತದೆ. ಆದರೆ ಅದು ವಿವೇಚನೆ ನೀಡುತ್ತದೆಯೇ ಹೊರತು, ಹೀಗೇ ಮಾಡು ಎಂದು ಒತ್ತಾಯಿಸುವುದಿಲ್ಲ. ಮೆದುಳು ನೀಡಿದ ಎಚ್ಚರಿಕೆಯನ್ನು ಗಮನಿಸಿ ಅದರಂತೆ ಎಚ್ಚರಿಕೆಯಿಂದ ನಡೆದವನು ಜೀವನದಲ್ಲಿ ಸಾಧನೆ ಮಾಡುತ್ತಾನೆ. ಅದರ ಅರಿವಿದ್ದೂ ಅಂತಹ ಸೂಚನೆ ತಿರಸ್ಕರಿಸಿದವನು ಜೀವನವನ್ನು ಹಾಳುಮಾಡಿಕೊಳ್ಳುತ್ತಾನೆ.

ಮನುಷ್ಯನಿಗೆ ಇರುವ ಎರಡು ಕಣ್ಣುಗಳು, ಎರಡು ಕಿವಿಗಳು ಏನು ನೋಡಬೇಕು ಏನು ನೋಡಬಾರದು, ಯಾವುದನ್ನು ಕೇಳಬೇಕು, ಯಾವುದನ್ನು ಕೇಳಬಾರದು ಎಂಬ ಬಗ್ಗೆ ಸೂಕ್ಷ್ಮವಾಗಿ ಎಚ್ಚರಿಕೆ ನೀಡುತ್ತವೆ. ಇವುಗಳಿಗೆ ಸ್ವತಂತ್ರ ಅಸ್ತಿತ್ವವಿಲ್ಲ. ಎಚ್ಚರಿಕೆ ನೀಡಿದ ನಂತರ ಮನುಷ್ಯ ಏನು ಹೇಳುತ್ತಾನೋ ಅದರಂತೆ ಅವು ನಡೆದುಕೊಳ್ಳುತ್ತವೆ. ಒಳ್ಳೆಯ ಆಯ್ಕೆಯಾದರೆ ಅದರಂತೆ, ಕೆಟ್ಟ ಆಯ್ಕೆಯಾದರೆ ಅದರಂತೆಯೂ ಅವು ನಡೆಯುತ್ತವೆ.

ಆದರೆ ಅಂತಿಮವಾಗಿ ಮನುಷ್ಯನ ಯೋಚನೆ ಹಾಗೂ ನಿರ್ಣಯದಂತೆ ದೇಹ ನಡೆದುಕೊಂಡು ಬಿಡುತ್ತದೆ. ಆದ್ದರಿಂದ ಮನುಷ್ಯ ಎಷ್ಟು ಎಚ್ಚರಿಕೆ ವಹಿಸಿದರೂ ಸಾಲದು. ನಮಗಿರುವುದು ಒಂದೇ ಜೀವನ, ಹಾಗಿರುವುದರಿಂದ ಆರಂಭದಿಂದಲೇ ತಪ್ಪುಗಳೆಡೆಗೆ ತೆರಳದಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ. ಕೊಲೆ ಮಾಡಿ ಶಿಕ್ಷೆಗೀಡಾದ ನಂತರ ನಾನು ಹಾಗೆ ಮಾಡಬಾರದಿತ್ತು ಎಂದು ಹೇಳಿದರೆ ಅದಕ್ಕೆ ಯಾವುದೇ ಬೆಲೆ ಇರುವುದಿಲ್ಲ. ತಪ್ಪನ್ನು ಉದ್ದೇಶಪೂರ್ವಕವಾಗಿ ಮಾಡಿರಲಿ, ಗೊತ್ತಿಲ್ಲದೇ ಮಾಡಿರಲಿ ಅದನ್ನು ತಪ್ಪು ಎಂದೇ ಪರಿಗಣಿಸಲಾಗುತ್ತದೆ. ಉದ್ದೇಶವಲ್ಲದ ತಪ್ಪಿಗೆ ಶಿಕ್ಷೆಯಾಗುವುದು ನಿಗದಿಯಾದರೂ ಅದಕ್ಕೆ ಇತರರು ಸ್ವಲ್ಪ ಸಾಂತ್ವನ ಹೇಳಬಹುದು ಅಷ್ಟೇ.

ಇದನ್ನು ಅರಿತೇ ಪುರಂದರದಾಸರು 'ಮಾನವ ಜನ್ಮ ದೊಡ್ಡದು, ಅದ ಹಾನಿ ಮಾಡಿಕೊಳ್ಳದಿರಿ' ಎಂದಿದ್ದಾರೆ. ಹಾಗೆ ಹಾನಿ ಮಾಡಿಕೊಳ್ಳುವವರನ್ನು 'ಹುಚ್ಚಪ್ಪಗಳು' ಎಂದೂ ಕರೆದಿದ್ದಾರೆ. ಅದೇ ಪದ್ಯದಲ್ಲಿ ದಾಸರು 'ಕಣ್ಣು, ಕೈಕಾಲು, ಕಿವಿಗಳು ಇದ್ದೂ ಮಣ್ಣುಮುಕ್ಕಿ ಮರುಳಾದರೆ ಹೇಗೆ?' ಎಂದು ಪ್ರಶ್ನಿಸಿದ್ದಾರೆ. ಇವೆಲ್ಲಾ ಇದ್ದೂ ಏನೂ ಸಾಧಿಸದೆ ಕೊನೆಗಾಲದಲ್ಲಿ ನನ್ನಿಂದ ತಪ್ಪಾಯಿತು ಈಗ ಸರಿ ಮಾಡಿಕೊಳ್ಳುತ್ತೇನೆ ಎಂದರೆ ಅವಕಾಶವಿರುವುದಿಲ್ಲ. ಆದ್ದರಿಂದ ಮೊದಲಿನಿಂದಲೂ ಎಚ್ಚರ ವಹಿಸಬೇಕು ಎಂದು ಹೇಳಿದ್ದಾರೆ.

ಇದು ಇಂದಿನ ಮಾತಲ್ಲ. ನೂರಾರು ವರ್ಷಗಳ ಹಿಂದೆ ಹೇಳಿರುವಂತಹುದು. ಆ ಕೀರ್ತನೆಯನ್ನು ನಾವು ಹಾಡುತ್ತೇವೆಯೇ ವಿನಃ ಅದರ ಆಂತರ್ಯ ಅರಿತು ವರ್ತಿಸುವುದಿಲ್ಲ. ಇದು ನಮಗೆ ಗೊತ್ತಿಲ್ಲವೆಂದಲ್ಲ, ಆದರೆ ನಾವು ಒಳಿತು ಕೆಡಕುಗಳನ್ನು ಆರಿಸಿಕೊಳ್ಳುವಾಗ ಎಚ್ಚರಿಕೆ ವಹಿಸಲೇಬೇಕಾಗುತ್ತದೆ. ಒಂದಂತೂ ನಿಶ್ಚಯ, ತಪ್ಪಿಗೆ ಶಿಕ್ಷೆ ಇದ್ದೇ ಇರುತ್ತದೆ. ಕೆಲವಕ್ಕೆ ತಕ್ಷಣದಲ್ಲಿಯೇ ಶಿಕ್ಷೆಯಾದರೆ, ಕೆಲವಕ್ಕೆ ಸ್ವಲ್ಪ ತಡವಾಗಿ ಶಿಕ್ಷೆಯಾಗಬಹುದು. ಆದರೆ ಶಿಕ್ಷೆಯಂತೂ ನಿಶ್ಚಿತ. ಇದು ಯಾವಾಗಲೂ ನಮ್ಮ ಗಮನದಲ್ಲಿರಬೇಕು.

ನಮ್ಮಲ್ಲಿ ಒಂದು ಒಳ್ಳೆಯ ಮಾತಿದೆ. 'ಬಡವರಾಗಿ ಹುಟ್ಟುವುದು ತಪ್ಪಲ್ಲ, ಆದರೆ ಬಡವರಾಗೇ ಬದುಕುವುದು, ಬಡವರಾಗೇ ಸಾಯುವುದು ತಪ್ಪು'. ಎಂತಹ ಒಳ್ಳೆಯ ಸಂದೇಶ ಈ ಮಾತಿನಲ್ಲಿದೆ. ಅದೇ ರೀತಿ ಹೇಳುವ ಮತ್ತೊಂದು ಮಾತು ಎಂದರೆ 'ಸಾಧನೆ ಇಲ್ಲದೆ ಸತ್ತರೆ ಸಾವಿಗೆ ಅವಮಾನ, ಆದರ್ಶ ಇಲ್ಲದೆ ಬದುಕಿದರೆ ಬದುಕಿಗೆ ಅವಮಾನ'. ಉತ್ತಮ ಸಂದೇಶ ಇದರಲ್ಲಿ ಅಡಕವಾಗಿದೆ. ಈ ಬಗ್ಗೆ ಯೋಚಿಸಿ ಬದುಕಬೇಕು. ಜೀವನ ಎಂದ ಮೇಲೆ ಏನನ್ನಾದರೂ ಸಾಧಿಸಲೇಬೇಕು. ಸಾಧಿಸದೆ ಸತ್ತರೆ ಸಾವೂ ಸಹ ಅದು ತನಗೆ ಮಾಡಿದ ಅವಮಾನ ಎಂದು ಭಾವಿಸುತ್ತದೆಯಂತೆ. ಸಾಧಕನ ಸಾವನ್ನು ಸಾವೂ ಮೌನವಾಗಿ ಸಂತಸದಿಂದ ಅಂಗೀಕರಿಸುತ್ತದೆ. ಸೋಮಾರಿಯ ಸಾವು ಭೂಮಿಯ ಭಾರವನ್ನು ಕಡಿಮೆ ಮಾಡಿದಂತೆ ಎಂದು ಹೇಳಬಹುದಷ್ಟೇ.

ನಾವು ಇಂತಹ ಉತ್ತಮ ದೇಹವನ್ನು ಪಡೆದು ಬಂದ ನಂತರ ಅದರ ಸದುಪಯೋಗವಾಗಬೇಕು. ಅದನ್ನು ಬಳಸಿಕೊಂಡು ಸಾಧನೆ ಮಾಡಬೇಕು. ಇಲ್ಲಿ ಸಾಧನೆ ಎಂದರೆ ಹಣ ಸಂಪಾದಿಸುವುದು ಎಂಬ ಅರ್ಥವಲ್ಲ. ಬದಲಿಗೆ ಈ ದೇಹವನ್ನು ಉಪಯೋಗಿಸಿಕೊಂಡು ನಾವು ಎಷ್ಟು ಜನರಿಗೆ ಸಹಾಯ ಮಾಡಿದ್ದೇವೆ? ಎಷ್ಟು ಜನರ ಕಷ್ಟಗಳನ್ನು ಕಂಡು ಮರುಗಿದ್ದೇವೆ? ಎಷ್ಟು ಜನರ ದುಃಖಗಳಲ್ಲಿ ಭಾಗಿಯಾಗಿ, ಅದನ್ನು ಪರಿಹರಿಸುವುದರಲ್ಲಿ ಹೇಗೆ ಪ್ರಯತ್ನವನ್ನು ಮಾಡಿದ್ದೇವೆ ಎಂಬುದು ಸಾಧನೆಯಾಗುತ್ತದೆ. ಅದನ್ನು ಎಲ್ಲರೂ ಮೆಚ್ಚುತ್ತಾರೆ. ಅಂತಹವರ ಸಾವನ್ನು ಸಾವೂ ಗೌರವಿಸುತ್ತದೆ. ಇಂತಹ ಉತ್ತಮ ದೇಹವನ್ನು ಕೊಟ್ಟ ನಂತರವೂ ಏನನ್ನೂ ಸಾಧಿಸದೆ ಸತ್ತರೆ ಅದು ದೇಹಕ್ಕೆ ಮಾಡಿದ ಅಪಮಾನವಲ್ಲದೆ ಮತ್ತಿನ್ನೇನು? ಎಂದು ಪರಿಗಣಿಸಬೇಕಾಗುತ್ತದೆ.

ನಮ್ಮಲ್ಲಿ ಬಹುತೇಕರಿಗೆ ಸಾಧನೆ ಮಾಡಲು ಹಣ ಬೇಕು, ಅವಕಾಶ ಬೇಕು ಎಂಬ ಭಾವನೆ ಇರುತ್ತದೆ. ಆದರೆ ಹಣವಿಲ್ಲದೆಯೂ ಸಹಾಯ ಮಾಡುವುದಕ್ಕೆ ಅವಕಾಶವಿದೆ. ಇತರರ ನೋವಿಗೆ ಸ್ಪಂದಿಸುವುದಕ್ಕೆ ಹಣವೇ ಬೇಕಾಗುವುದಿಲ್ಲ. ಇತ್ತೀಚೆಗೆ ಒಂದು ಪ್ರಸಂಗ ವರದಿಯಾಗಿತ್ತು. ದಾರಿಯಲ್ಲಿ ಹೋಗುತ್ತಿದ್ದ ಒಬ್ಬನಿಗೆ ರಸ್ತೆಯಲ್ಲಿ ಹಿಂದಿನ ಎರಡೂ ಕಾಲುಗಳಲ್ಲಿ ಸ್ವಾಧೀನ ಇಲ್ಲದೆ, ತೆವಳಿಕೊಂಡು ಹೋಗುತ್ತಿದ್ದ ಒಂದು ನಾಯಿ ಕಣ್ಣಿಗೆ ಬಿತ್ತು. ಆ ವ್ಯಕ್ತಿ ಸ್ವಾಭಿಮಾನದಿಂದ ಜೀವನ ಮಾಡುವಂತಹ ಮನಸ್ಥಿತಿಯವನು. ಆದರೆ ಭಿಕ್ಷೆ ಬೇಡಬಾರದು ಎಂದು ನಿರ್ಧರಿಸಿ ಸ್ವಂತ ಕಾಲಮೇಲೆ ನಿಲ್ಲಲು, ಬಿದಿರಿನ ಕೊಳಲು ತಯಾರಿಸಿ ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದ. ಅಂತಹವನಿಗೆ ಈ ನಾಯಿಯನ್ನು ಕಂಡು ದುಃಖವಾಯಿತು. ಆ ನಾಯಿಗೆ ಏನಾದರೂ ಸಹಾಯ ಮಾಡಬೇಕೆಂದು ನಿರ್ಧರಿಸಿ, ಅದನ್ನು ತನ್ನ ಮನೆಗೆ ಎತ್ತಿಕೊಂಡು ಹೋಗುತ್ತಾನೆ. ಅಲ್ಲಿ ಅದರ ಹಿಂದಿನ ಕಾಲುಗಳಿಗೆ ಎರಡು ಗಾಲಿಗಳಿರುವ ಒಂದು ಪುಟ್ಟ ಗಾಡಿ ತಯಾರಿಸಿ, ಜೋಡಿಸುತ್ತಾನೆ. ನಾಯಿ ಆ ಗಾಲಿಯ ಸಹಾಯದಿಂದ ಓಡುತ್ತಾ, ಈ ಮನುಷ್ಯನನ್ನು ಕೃತಜ್ಞತೆಯಿಂದ ನೋಡುತ್ತದೆ. ಆ ನಾಯಿಗೆ ಸಹಾಯ ಮಾಡಿದ ಈ ವ್ಯಕ್ತಿಗೆ ಒಂದು ಕೈ ಹಾಗೂ ಒಂದು ಕಾಲಿಲ್ಲ. ಕೃತಕ ಕೈಕಾಲು ಜೋಡಿಸಿಕೊಂಡು, ಒಂದೇ ಕೈನಿಂದ ಕೊಳಲು ನುಡಿಸುತ್ತಾ, ಕೊಳಲು ಮಾರುತ್ತಾ ಜೀವನ ಸಾಗಿಸುತ್ತಿರುತ್ತಾನೆ. ಇದನ್ನೇ ಮಾನವೀಯತೆ ಎನ್ನುವುದು. ತನಗೇ ಇಲ್ಲದಿದ್ದರೂ ಅತಿಥಿಗಳನ್ನು ಸತ್ಕರಿಸಿದ ಅನೇಕ ಕಥೆಗಳನ್ನು ನಾವು ಚಿಕ್ಕವರಿದ್ದಾಗ ಕೇಳಿರುತ್ತೇವೆ. ಆಗ ನಾವೂ ಹಾಗೇ ಏನಾದರೂ ಮಾಡಬೇಕೆಂದು ಮನಸ್ಸು ಹೇಳುತ್ತದೆ. ಆದರೆ ಬೆಳೆದಂತೆ ಹಣದಿಂದಲೇ ಎಲ್ಲಾ ಎಂದುಕೊಂಡು ಮಾನವೀಯತೆಯನ್ನು ಹಣಕ್ಕೆ ಒತ್ತೆ ಇಟ್ಟುಬಿಡುತ್ತೇವೆ.

ಹಿಂದೆ ಒಂದು ಕಥೆ ನಾವು ನೀವು ಕೇಳಿದ್ದೆವು. ಎಲ್ಲಾ ಅಂಗಾಂಗಗಳು ಸರಿಯಾಗಿದ್ದರೂ ಒಬ್ಬ ಭಿಕ್ಷೆ ಬೇಡುತ್ತಿರುತ್ತಾನೆ. ಇದನ್ನು ಒಬ್ಬರು ಪ್ರಶ್ನಿಸುತ್ತಾರೆ. ಇಂತಹ ಸೊಗಸಾದ ದೇಹವಿದ್ದರೂ ಭಿಕ್ಷೆ ಬೇಡುತ್ತಿರುವುದು ತಪ್ಪಲ್ಲವೇ? ಎಂದಾಗ ಆ ಭಿಕ್ಷುಕ ನನ್ನಲ್ಲಿ ಹಣವಿಲ್ಲ, ಹಣವಿಲ್ಲದಿದ್ದರೆ ಜೀವನ ಸಾಗಿಸಲಾಗದು. ಆದ್ದರಿಂದ ಭಿಕ್ಷೆ ಬೇಡುತ್ತಿದ್ದೇನೆ ಎನ್ನುತ್ತಾನೆ. ಹಾಗಾದರೆ ನಿನ್ನ ಒಂದು ಕೈ ಕತ್ತರಿಸಿ ಕೊಡು, ನಿನಗೆ ಲಕ್ಷ ಹಣ ಕೊಡುತ್ತೇನೆ ಎಂದಾಗ, ಆ ಭಿಕ್ಷುಕ ಅದು ಹೇಗೆ ಸಾಧ್ಯ? ಒಂದು ಕೈಯಿಲ್ಲದಿದ್ದರೆ ನಾನು ಹೇಗೆ ಜೀವನ ಮಾಡಲಿ? ಎನ್ನುತ್ತಾನೆ. ಹಾಗಾದರೆ ನಿನ್ನ ಒಂದು ಕಾಲು ಕೊಡು ಎರಡು ಲಕ್ಷ ಕೊಡುತ್ತೇನೆ ಎಂದಾಗಲೂ ಕಾಲಿಲ್ಲದೆ ಹೇಗೆ ಜೀವನ ಮಾಡುವುದು ಎನ್ನುತ್ತಾನೆ. ಹಾಗಾದರೆ ಒಂದು ಕಣ್ಣು ಕೊಡು, ಒಂದು ಕಿವಿ ಕೊಡು ಎಂದು ಒಂದೊಂದೇ ಅಂಗದ ಹೆಸರು ಹೇಳಿ ಅದನ್ನು ಕೊಟ್ಟರೆ ಇಷ್ಟು ದುಡ್ಡು ಕೊಡುತ್ತೇನೆ ಎಂದಾಗ ಭಿಕ್ಷುಕ ಯಾವುದಕ್ಕೂ ಒಪ್ಪುವುದಿಲ್ಲ. ತನಗೆ ಪ್ರತಿಯೊಂದು ಅಂಗವೂ ಮುಖ್ಯ, ಅದನ್ನು ಕೊಡಲಾಗದು ಎನ್ನುತ್ತಾನೆ. ಆಗ ಈ ವ್ಯಕ್ತಿ ನಿನ್ನ ದೇಹದ ಒಂದೊಂದು ಅಂಗವೂ ಹೀಗೆ ಅತ್ಯಂತ ಮೌಲ್ಯಯುತವಾಗಿದೆ. ಅಷ್ಟೊಂದು ಮೌಲ್ಯದ ದೇಹ ಇಟ್ಟುಕೊಂಡೂ ನೀನು ಭಿಕ್ಷೆ ಬೇಡುತ್ತಿರುವೆ, ಇದು ನಾಚಿಕೆಯ ಸಂಗತಿಯಲ್ಲವೇ? ಎಂದಾಗ ಆ ಭಿಕ್ಷುಕನಿಗೆ ಜ್ಞಾನೋದಯವಾಗಿ ಭಿಕ್ಷೆ ಬೇಡುವುದನ್ನು ಬಿಟ್ಟು ದುಡಿಯಲು ಪ್ರಾರಂಭಿಸಿದ ಎಂದು ಆ ಕಥೆ ಹೇಳುತ್ತದೆ. ಈ ಕಥೆಯನ್ನು ನಾವು ಪ್ರಾಥಮಿಕ ಶಾಲೆಯಿಂದಲೇ ಕೇಳಿರುತ್ತೇವೆ.

ನಮ್ಮ ಅಂಗಾಂಗಗಳಿಗೆ ಇಷ್ಟೊಂದು ಬೆಲೆ ಇದೆ. ಅದನ್ನು ನಾವು ಹೇಗೆ ಬಳಸಿಕೊಳ್ಳುತ್ತಿದ್ದೇವೆ? ಎಂದು ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಬೇಕು. ನಾನು ಬಯಸದೇ ಇಷ್ಟೆಲ್ಲಾ ಅಂಗಗಳು ನನಗೆ ಉಚಿತವಾಗಿ ಲಭಿಸಿದೆ. ಇದನ್ನು ಇತರರ ಕೆಲಸಕ್ಕಾಗಿ ಬಳಸುತ್ತೇನೆ ಎಂಬ ವಿವೇಕ ಮೂಡಬೇಕು. ಕನ್ನಡ ಚಲನಚಿತ್ರ 'ಮಣ್ಣಿನಮಗ'ದಲ್ಲಿ ಅಳವಡಿಸಿಕೊಂಡ ಗೀತಪ್ರಿಯ ಅವರ ಗೀತೆ "ಭಗವಂತ ಕೈಕೊಟ್ಟ ದುಡಿಯೋಕ್ಕಂತ, ಅದನ್ಯಾಕೆ ಎತ್ತುವೆ ಹೊಡೆಯೋಕ್ಕಂತಾ?... ಎಂದು ಹೇಳುತ್ತದೆ. ಹಾಗೆಯೇ ಬಾಯಿ ಇರುವುದು ನುಡಿಯಲು, ಅದನ್ನು ಬೈಯಲು ಉಪಯೋಗಿಸಬಾರದು ಹೀಗೆ ನಾನಾ ಮಾನವೀಯ ಮಾತುಗಳು ಅದರಲ್ಲಿದೆ. ಇದನ್ನು ಅರ್ಥ ಮಾಡಿಕೊಳ್ಳಬೇಕು. ಇಂತಹ ದೇಹ ಉಪಯೋಗಿಸಿಕೊಂಡು ಏನನ್ನಾದರೂ ಸಾಧಿಸಬೇಕು. ಇಲ್ಲದಿದ್ದರೆ ನಮ್ಮ ಸಾವೂ ನಮ್ಮನ್ನು ಅಣಕಿಸಬಹುದು. ನಮ್ಮ ಸಾವನ್ನು ಅದು ಸೂತಕ ಎಂದೂ ಭಾವಿಸಬಹುದು.

ಪಿತೃ ಪಕ್ಷ ಪರ್ವ ಪರಲೋಕಕ್ಕೆ ಸಮಾಧಾನ

ಅನಿತ್ಯಾನಿ ಶರೀರಾಣಿ । ವಿಭವೋ ನೈವ ಶಾಶ್ವತಃ।
ನಿತ್ಯ ಸನ್ನಿಹಿತೋಮೃತ್ಯುಃ।
ಕರ್ತವ್ಯೋಧರ್ಮ ಸಂಗ್ರಹಃ॥

ಅರ್ಥ:– ಈ ಶರೀರ ಅನಿತ್ಯವಾದದ್ದು
ಪ್ರಪಂಚದಲ್ಲಿ ಯಾರೂ ಶಾಶ್ವತರಲ್ಲ
ಮೃತ್ಯು ನಿತ್ಯವೂ ಸಮೀಪಿಸುತ್ತಿದೆ
ಧರ್ಮ ಸಂಗ್ರಹ ನಮ್ಮ ಕರ್ತವ್ಯವಾಗಿರಲಿ

'ಧರ್ಮ ಸಿಂಧು'ವಿನಲ್ಲಿ ಉಲ್ಲೇಖಿಸಿರುವ ಪ್ರಕಾರ ಪಿತೃ ದೇವತೆಗಳಿಗೆ ಪಿಂಡ ಪ್ರದಾನ ಮಾಡುವುದರಿಂದ ಆ ವ್ಯಕ್ತಿಗೆ ದೀರ್ಘಾಯು, ಪುತ್ರ–ಪೌತ್ರಾದಿ ಯಶಸ್ಸು, ಧನ, ಸುಖ, ಸಂಪತ್ತು, ಪಶು ಇತ್ಯಾದಿ ಸಾಧನಗಳು ಪ್ರಾಪ್ತವಾಗುತ್ತವೆ ಎಂದು ಹೇಳಲಾಗಿದೆ.

ಅಷ್ಟೇ ಅಲ್ಲದೆ, ಪಿತೃಗಳ ಕೃಪಾಕಟಾಕ್ಷದಿಂದ ಎಲ್ಲಾ ಪ್ರಕಾರದ ಸಮೃದ್ಧಿ, ಸೌಭಾಗ್ಯ, ರಾಜ್ಯ, ಮೋಕ್ಷಗಳು ಲಭಿಸುತ್ತದೆಂದು ಹೇಳಿದೆ. ಪರಲೋಕದಲ್ಲಿ ರುವ ಪಿತೃದೇವತೆಗಳು ಆಶ್ವಯುಜ ಮಾಸದಲ್ಲಿ ಬರುವ ಪಿತೃಪಕ್ಷದಲ್ಲಿ ತಮ್ಮ ಪುತ್ರ–ಪೌತ್ರಾದಿಗಳು ತಿಲ ತರ್ಪಣ, ಪಿಂಡದಾನಗಳನ್ನು ನೀಡಿ ಸಂತುಷ್ಟಗೊಳಿಸುತ್ತಾರೆ ಎಂಬ ಆಶಾಭಾವನೆಯಿಂದ ಕಾದಿರುತ್ತಾರೆ.

ಶ್ಲೋಕ:– ಆಯುಃ ಪುತ್ರಾನ್ ಯಶಃ ಸ್ವರ್ಗಃ
ಕೀರ್ತಿಪುಷ್ಟಿಬಲಂ ಯಮ।
ಪಶೂನ್ ಸೌಖ್ಯಂ ಧನಂ ಧಾನ್ಯಂ
ಪ್ರಾಪ್ನುಯಾತ್ ಪಿತೃಪೂಜನಾತ್ ॥

ಇದೇ ಆಶಾಭಾವನೆಯೊಂದಿಗೆ ನಮ್ಮ ಪಿತೃ ದೇವತೆಗಳು ಪಿತೃಲೋಕದಿಂದ ಪೃಥ್ವಿಗೆ ಬರುತ್ತಾರೆ. ಆದ್ದರಿಂದ ಪ್ರತಿಯೊಬ್ಬ ಸನಾತನ ಧರ್ಮಿಯರೂ ತಮ್ಮ ಪೂರ್ವಜರಿಗೆ ಅವರ ಋಣವನ್ನು ತೀರಿಸಲೋಸುಗ ಶ್ರಾದ್ಧ, ಎಡೆ, ತರ್ಪಣಗಳನ್ನು ತಮ್ಮ ತಮ್ಮ ಪರಂಪರಾಗತ ಶ್ರದ್ಧಾನುಸಾರ ಆಚರಿಸಿ ಪಿತೃದೇವತೆಗಳನ್ನು ಸಂತೋಷಪಡಿಸುವುದು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರಾದಿ ಎಲ್ಲಾ ವರ್ಣಾಶ್ರಮದವರದೂ ಆದ್ಯ ಕರ್ತವ್ಯವಾಗಿದೆ.



ಹಿಂದೂ ಸಂಸ್ಕೃತಿಯಲ್ಲಿ ಪ್ರತಿ ಮಾಸ ಬರುವ ಅಮಾವಾಸ್ಯೆ ಪಿತೃ ಪೂಜೆಗೆ ಪುಣ್ಯಮಯ ತಿಥಿ ಎಂದು ಹೇಳಲಾಗಿದೆ. ಆದರೆ ಭಾದ್ರಪದ ಮಾಸ, ಕೃಷ್ಣಪಕ್ಷ ಮಹಾಲಯ ಅಮಾವಾಸ್ಯೆಯು ಪಿತೃ ದೇವತೆಗಳಿಗೆ ಅತ್ಯಂತ ವಿಶಿಷ್ಟವಾದ ಪರಮ ಪುಣ್ಯ ದಿನ. ಈ ಅಮಾವಾಸ್ಯೆಯನ್ನು 'ಪಿತೃ ವಿಸರ್ಜನಿ' ಅಮಾವಾಸ್ಯೆ ಎಂದು ಕರೆಯುತ್ತಾರೆ. ಇಂದಿನ ಸಾಮಾಜಿಕ ಒತ್ತಡಗಳ ಮಧ್ಯೆ ಪಿತೃ ಪಕ್ಷದ ಸಮಯದಲ್ಲಿ ನಿಶ್ಚಿತ ತಿಥಿಯಂದು ತರ್ಪಣ ಕೊಡಲು ಸಾಧ್ಯವಾಗದಿದ್ದಲ್ಲಿ ಅಂತಹ ಕುಟುಂಬದವರು ಮಹಾಲಯ ಅಮಾವಾಸ್ಯೆಯ ದಿನ ತರ್ಪಣ, ಎಡೆ ಇಡುವುದು, ಶ್ರಾದ್ಧಾದಿಗಳನ್ನು ಆಚರಿಸಬಹುದಾಗಿದೆ. ಇದೇ ದಿನದಂದು ನಮ್ಮ ಪೂರ್ವಿಕರ ಸಂತೃಪ್ತಿಗೋಸ್ಕರ ವಸ್ತ್ರದಾನ, ಸ್ವಯಂ ಪಾಕ ದಾನ, ಇಷ್ಟ ಬಂಧು–ಮಿತ್ರರಿಗೆ ಭೋಜನ ಮಾಡಿಸುವ ಪರಿಪಾಟವೂ ಇದೆ.

ಮಹಾಲಯ ಅಮಾವಾಸ್ಯೆಯ ದಿನ ಪರಲೋಕದ ಪಿತೃಗಳನ್ನು ಬ್ರಹ್ಮರೂಪದಿಂದ ಆಹ್ವಾನಿಸಿ, ಪಿಂಡದಾನ, ತಿಲತರ್ಪಣ, ಶ್ರಾದ್ಧಾದಿಗಳನ್ನು ಕೈಗೊಂಡು ನಮ್ಮನ್ನು ಹೊತ್ತು, ಹೆತ್ತಿ, ಸಾಕಿ, ಸಲಹಿದ ತಂದೆ–ತಾಯಂದಿರಿಗೆ ತಿಲಾಂಜಲಿ ನೀಡುವುದರಿಂದ ಪಿತೃಶಾಪಕ್ಕೆ ಗುರಿಯಾಗುವುದನ್ನು ತಪ್ಪಿಸಿಕೊಳ್ಳಬಹುದಾಗಿದೆ.

ಪರ್ವಕಾಲ: ಪಿತೃಪಕ್ಷದ ಹದಿನೈದು ದಿನಗಳೂ ಒಂದು ಪರ್ವಕಾಲವೆ. ಈ ಅವಧಿಯಲ್ಲಿ ಹಿಂದೂ ಧರ್ಮ ಅನುಸರಿಸುವವರು, ಸಂಯಮಪೂರ್ವಕವಾಗಿ ಪಿತೃಗಣಗಳಿಗೆ ಶ್ರಾದ್ಧ, ತರ್ಪಣ, ಎಡೆ ಇಡುವುದು ಇತ್ಯಾದಿಗಳನ್ನು ಅರ್ಪಿಸಿ ಅವರನ್ನು ಸಂತುಷ್ಟಗೊಳಿಸಬೇಕು ಎಂಬುದಾಗಿ "ಧರ್ಮಸಿಂಧು" ಗ್ರಂಥದಲ್ಲಿ ಉಲ್ಲೇಖವಿದೆ. ಕಾರ್ಯಬಾಹುಳ ಸಂಬಂಧಪಟ್ಟ ತಿಥಿಯಂದು ಆಚರಿಸಲು ಸಾಧ್ಯವಿಲ್ಲದಾಗ, 'ಪಿತೃ ವಿಸರ್ಜನಿ' ಅಮಾವಾಸ್ಯೆ (ಮಹಾಲಯ ಅಮಾವಾಸ್ಯೆ) ದಿನ ಪ್ರಾತಃಸ್ನಾನ, ಶೌಚಾದಿಗಳಿಂದ ನಿವೃತ್ತರಾಗಿ ಗಾಯತ್ರಿ ಮಂತ್ರ ಹೇಳುತ್ತಾ, ಪ್ರತ್ಯಕ್ಷ ದೈವನಾದ ಸೂರ್ಯನಾರಾಯಣನಿಗೆ ಅರ್ಘ್ಯವನ್ನು ನೀಡಬೇಕು.

ಆ ದಿನ ಮನೆಯಲ್ಲಿ ಮಡಿಯಿಂದ ತಯಾರಿಸಿದ ಸಕಲ ಭೋಜನ ಪದಾರ್ಥಗಳನ್ನು ಪಂಚಬಲಿ ಇಟ್ಟು, ಅಂದರೆ ಸರ್ವ ಪ್ರಥಮ ಗೋವಿಗೂ, ನಂತರ ನಾಯಿಗೂ, ಕಾಗೆಗಳಿಗೂ (ಇವರೆ ಪಿತೃದೇವತೆಗಳು), ನಂತರ ದೇವತೆಗಳಿಗೂ, ಕಡೆಯದಾಗಿ ಇರುವೆಗಳಿಗೂ ಭೋಜನದ ಅಂಶವನ್ನು ಇಡಬೇಕು. ನಂತರ ಪಿತೃ ದೇವತೆಗಳನ್ನು ಅನನ್ಯ ಶ್ರದ್ಧಾಭಕ್ತಿಗಳಿಂದ ನಮಿಸಿ, ನಮಗೆ ಮಂಗಳವನ್ನು ಪ್ರದಾನ ಮಾಡಿ ಎಂದು ಪ್ರಾರ್ಥಿಸಿ, ನಂತರ ಭೋಜನ ಮಾಡಬೇಕು. ರಾತ್ರಿ ಊಟ ಮಾಡಬಾರದು. ಈ ರೀತಿಯ ಆಚರಣೆಯಿಂದ ಜೀವನದಲ್ಲಿ ಸುಖ, ಶಾಂತಿ, ಸಮೃದ್ಧಿಗಳೂ, ಅಂತ್ಯದಲ್ಲಿ ಮೋಕ್ಷವೂ ದೊರಕುತ್ತದೆ ಎಂಬುದಾಗಿ ಗರುಡ ಪುರಾಣದಲ್ಲಿ ಹೇಳಲಾಗಿದೆ.

ಸ್ವಪಿಂಡ ದಾನ: 'ಜಾತಸ್ಯ ಹೀ ದುವೋ ಮೃತ್ಯುಃ' ಎಂಬ ಗೀತಾಚಾರ್ಯ ಶ್ರೀ ಕೃಷ್ಣನ ವಾಣಿಯಂತೆ, ಮನುಷ್ಯನಾಗಿ ಹುಟ್ಟಿದವನಿಗೆ ಮೃತ್ಯುವೇ ಅಂತಿಮ ಸತ್ಯ. ಎಲ್ಲರ ಪ್ರಾಪಂಚಿಕ ವ್ಯವಹಾರವೂ ಒಂದು ದಿನ ಮುಗಿಯಲೇಬೇಕು. ಇದನ್ನೆಲ್ಲ ಅರಿತಿದ್ದ ನಮ್ಮ ಋಷಿಮುನಿಗಳು ಧರ್ಮಮೋಕ್ಷವನ್ನು ಬಲ್ಲವರಾಗಿ 'ಸ್ವಪಿಂಡ ದಾನ'ದ ಮಧ್ಯಮ ಮಾರ್ಗವನ್ನು ತಿಳಿಸಿಕೊಟ್ಟಿದ್ದಾರೆ. ಕೆಲವು ಸನಾತನ ಧರ್ಮಾಚಾರಿಗಳು ಭಾರತದ ಮಹಾಪುಣ್ಯಕ್ಷೇತ್ರ ವಿಷ್ಣುಪಾದವಿರುವ ಗಯಾದಲ್ಲಿ ಸ್ವಪಿಂಡದಾನವನ್ನು ತಾವೇ ಮಾಡಿಕೊಂಡು ಸದ್ಗತಿಗೆ ಭಾಜನರಾಗಬಹುದಾಗಿದೆ.

ಈ ಕೈಂಕರ್ಯವನ್ನು ಸಾಮಾನ್ಯ ಜನರು ಮಹಾಲಯ ಅಮಾವಾಸ್ಯೆಯಂದು ಪುಣ್ಯನದಿ, ಸಂಗಮ, ಸಮುದ್ರ ತಟಗಳಲ್ಲಿ ಮಾಡಬಹುದು. ಮನೆಯಲ್ಲಾದರೂ ಮಾಡಬಹುದು. ಈ ಆಚರಣೆಯನ್ನು ಬಲ್ಲ ಆಚಾರ್ಯರಿಂದ ಮಾಡಿಸಿ, ದಾನ, ಧರ್ಮಾದಿಗಳನ್ನು ಮಾಡಿ ಬಡವರಿಗೆ ಭೋಜನ ಮಾಡಿಸಬೇಕು.

ಸ್ವಪಿಂಡ ದಾನ ಮಾಡುವಾಗ ಜಲತರ್ಪಣ ನೀಡುತ್ತಾ 'ಪದ್ಮಪುರಾಣಾಂತರ್ಗತ' 'ಮಾಘ ಮಹಾತ್ಮೆ'ಯಲ್ಲಿ ಬರುವ 'ಶ್ರೀ ಯಮಸ್ತೋತ್ರ'ವನ್ನು ಹೇಳಿಕೊಳ್ಳಬೇಕು. ಅಥವಾ ಈ ಕೆಳಗೆ ತಿಳಿಸಿರುವ ಮಂತ್ರವನ್ನಾದರೂ ಹೇಳಿಕೊಳ್ಳಬೇಕು.

ಮಂತ್ರ:–ಓಂ ಯಮಾಯ ಸ್ವಧಾ ತಸ್ಮೈ ನಮಃ ।
ಓಂ ಧರ್ಮರಾಜಾಯ ಸ್ವಧಾ ತಸ್ಮೈ ನಮಃ ।
ಓಂ ಮೃತ್ಯುವೇ ಸ್ವಧಾ ತಸ್ಮೈ ನಮಃ ।
ಓಂ ಅನ್ತಕಾಯ ಸ್ವಧಾ ತಸ್ಮೈ ನಮಃ ।
ಓಂ ವೈವಸ್ವತಾಯ ಸ್ವಧಾ ತಸ್ಮೈ ನಮಃ ।
ಓಂ ಕಾಲಾಯ ಸ್ವಧಾ ತಸ್ಮೈ ನಮಃ ।
ಓಂ ಸರ್ವಪ್ರಾಣ ಹರಾಯ ಸ್ವಧಾ ತಸ್ಮೈ ನಮಃ ।

ಈ ರೀತಿಯಾಗಿ ನಾವು ಜೀವಿಸಿರುವಾಗಲೇ ನಮ್ಮ ಮರಣಾನಂತರ ಸುಖ ಪ್ರಾಪ್ತಿಗೆ ತರ್ಪಣ, ಶ್ರಾದ್ಧ, ಪಿಂಡದಾನಗಳನ್ನು ಯಥೋಚಿತವಾದ ಸಮಯದಲ್ಲಿ ನೆರವೇರಿಸಿಕೊಂಡಲ್ಲಿ ಜನನ–ಮರಣಗಳ ಸಂಕೋಲೆಯಿಂದ ಬಿಡುಗಡೆ ಹೊಂದಿ ಮೋಕ್ಷಕ್ಕೆ ಭಾಜನರಾಗುತ್ತೇವೆ.

– 'ಚೈತನ್ಯಶ್ರೀ' ವಿ. ಕೇಶವಮೂರ್ತಿ,
ಜ್ಯೋತಿಷ ವಿದ್ವಾಂಸ
ಕಲ್ಪದ್ರುಮ ಜ್ಯೋತಿಷ ಅಧ್ಯಯನ ಕೇಂದ್ರ (ರಿ)
533, 6ನೇ ಕ್ರಾಸ್, ಬೋಗಾದಿ 2ನೇ ಹಂತ,
ಮೈಸೂರು. ಮೊ.ನಂ.:9740973224

30.9.2023 ಶನಿವಾರ ಪಿತೃಪಕ್ಷ ಪ್ರಾರಂಭ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಮೈಸೂರಿನ ಅಶೋಕಪುರಂ ಅರುಂಧತಿ ಕಾಲೋನಿಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಚಾಮುಂಡೇಶ್ವರಿ ದೇವಸ್ಥಾನದ ಗುದ್ದಲಿಪೂಜೆ ಕಾರ್ಯಕ್ರಮದಲ್ಲಿ ನಗರಪಾಲಿಕೆ ಸದಸ್ಯರೂ ಆದ ಕಾಂಗ್ರೆಸ್ ಮುಖಂಡ ಪ್ರದೀಪ್‌ಕುಮಾರ್ ಪಾಲ್ಗೊಂಡಿದ್ದರು.

ಹಂಪಿ ಅತ್ಯುತ್ತಮ ಪ್ರವಾಸೋದ್ಯಮ ಗ್ರಾಮ; ಕೇಂದ್ರ ಘೋಷಣೆ

ಬೆಂಗಳೂರು,ಸೆ.28–ರಾಜ್ಯದ ವಿಶ್ವ ಪಾರಂಪರಿಕ ತಾಣವಾದ ವಿಜಯನಗರ ಸಾಮ್ರಾಜ್ಯದ ಹಂಪಿಗೆ ಈಗ ಮತ್ತೊಂದು ಗರಿ ಮೂಡಿದೆ. ಈ ವರ್ಷದ ಅತ್ಯುತ್ತಮ ಪ್ರವಾಸೋದ್ಯಮ ಗ್ರಾಮವೆಂದು ಪ್ರವಾಸೋದ್ಯಮ ಸಚಿವಾಲಯವು ಬುಧವಾರ ಘೋಷಣೆ ಮಾಡಿದೆ. ಇದು ಗ್ರಾಮೀಣ ಮೂಲಸೌಕರ್ಯ ಮತ್ತು ಅದರ ಸಂಸ್ಕೃತಿಯನ್ನು ಸುಧಾರಿಸಲು ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಹಣ ಪಡೆಯಲು ನೆರವಾಗುತ್ತದೆ. ವಿಶ್ವ ಪ್ರವಾಸೋದ್ಯಮ ದಿನಾಚರಣೆಯ ಅಂಗವಾಗಿ ಈ ಘೋಷಣೆ ಮಾಡಲಾಗಿದೆ.



ಅತ್ಯುತ್ತಮ ಪ್ರವಾಸೋದ್ಯಮ ಸ್ಪರ್ಧೆಯಲ್ಲಿ ಅತ್ಯುತ್ತಮ ಪ್ರವಾಸೋದ್ಯಮ ಗ್ರಾಮವಾಗಿ ಹಂಪಿ ಗುರುತಿಸಲ್ಪಟ್ಟಿದೆ ಎಂದು ಸಚಿವಾಲಯ ನೀಡಿರುವ ಪ್ರಶಸ್ತಿ ಪತ್ರದಲ್ಲಿ ತಿಳಿಸಲಾಗಿದೆ. 31 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಸ್ವೀಕರಿಸಿದ 795 ಅರ್ಜಿಗಳಲ್ಲಿ ಹಂಪಿಯನ್ನು ಆಯ್ಕೆ ಮಾಡಲಾಗಿದೆ. ಇದೊಂದು ಹೆಮ್ಮೆಯ ಕ್ಷಣ ಎಂದು ಕರ್ನಾಟಕ ಪ್ರವಾಸೋದ್ಯಮ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌ಕೆ ಪಾಟೀಲ್ ಹೇಳಿದ್ದಾರೆ. ರಾಜ್ಯ ಸರ್ಕಾರದ ಅಧಿಕಾರಿಗಳು ನವದೆಹಲಿಯಲ್ಲಿ ಪ್ರಶಸ್ತಿ ಸ್ವೀಕರಿಸಿದರು. ಇದರೊಂದಿಗೆ, ರಾಜ್ಯ ಸರ್ಕಾರ ಮತ್ತು ಸ್ಥಳೀಯ ಆಡಳಿತ ಗ್ರಾಮೀಣ ಪ್ರವಾಸೋದ್ಯಮವನ್ನು ಉತ್ತೇಜಿಸಲು ಮತ್ತು ಜನಪ್ರಿಯಗೊಳಿಸಲು ಮತ್ತು ಹೋಮ್‌ಸ್ಟೇಗಳ ನೋಂದಣಿ ಮತ್ತು ಕಾರ್ಯಾಚರಣೆ ಉತ್ತೇಜಿಸಲು ಕೆಲಸ ಮಾಡಬಹುದು ಎಂದು ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ. ಇದು ಗ್ರಾಮೀಣ ಕಲೆ ಮತ್ತು ಕರಕುಶಲತೆಯನ್ನು ಜನಪ್ರಿಯಗೊಳಿಸಲು ಮತ್ತು ಹಳ್ಳಿಯ ಅನುಭವ ಪಡೆಯಲು, ಪ್ರವಾಸಿಗರನ್ನು ಆಕರ್ಷಿಸಲು ಸಹಾಯ ಮಾಡುತ್ತದೆ. ಕೃಷಿ ಮತ್ತು ಗ್ರಾಮೀಣ ಪ್ರವಾಸೋದ್ಯಮವನ್ನು ಉತ್ತೇಜಿಸಲು ಇದು ರಾಜ್ಯಕ್ಕೆ ದೊಡ್ಡ ಪ್ರೋತ್ಸಾಹವಾಗಿದೆ ಎಂದು ಪ್ರವಾಸೋದ್ಯಮ ಇಲಾಖೆ ಮತ್ತೊಬ್ಬ ಅಧಿಕಾರಿ ಹೇಳಿದರು. ಈ ಮಧ್ಯೆ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಮತ್ತು ಸ್ವಚ್ಛತಾ ಪಖವಾಡ (ಸ್ವಚ್ಛತೆ ಪಾಕ್ಷಿಕ) ಮತ್ತು ಸ್ವಚ್ಛತಾ ಹಿ ಸೇವಾ ಅಭಿಯಾನದ ಅಂಗವಾಗಿ ಇಲಾಖೆಯು ನಂದಿ ಗ್ರಾಮದ ಭೋಗನಂದೀಶ್ವರ ದೇವಸ್ಥಾನ, ಹಂಪಿ, ಪಟ್ಟದಕಲ್ಲು ಬೇಲೂರು, ಶೃಂಗೇರಿ, ಸೋಮನಾಥಪುರ, ಮೇಲುಕೋಟೆ ಮತ್ತು ಶ್ರೀರಂಗಪಟ್ಟಣ ಸೇರಿದಂತೆ ಒಂಬತ್ತು ಸ್ಥಳಗಳಲ್ಲಿ ಸ್ವಚ್ಛತೆ ಮತ್ತು ಜಾಗೃತಿ ಅಭಿಯಾನವನ್ನು ಕೈಗೊಂಡಿತು.

ನಾಳೆ ಸಾಹಸಸಿಂಹ ಸಂಗೀತ ಸಂಜೆ



ಮೈಸೂರು,ಸೆ.28–ಮೈಸೂರು ಆರ್ಟಿಸ್ಟ್ ಅಸೋಸಿಯೇಷನ್ ವತಿಯಿಂದ ಸಾಹಸಸಿಂಹ ಡಾ.ವಿಷ್ಣುವರ್ಧನ್ ಅವರ ಜನ್ಮ ದಿನೋತ್ಸವದ ಅಂಗವಾಗಿ 'ಸಾಹಸಸಿಂಹ ಸಂಗೀತ ಸಂಜೆ' ವಿಷ್ಣುವರ್ಧನ್ ಅವರ ನಟನೆಯ ಹಳೆಯ ಚಿತ್ರಗೀತೆಗಳ ಕಾರ್ಯಕ್ರಮವನ್ನು ಚಾಮುಂಡಿಪುರಂ ವೃತ್ತದಲ್ಲಿ ಸೆ.30ರಂದು ಶನಿವಾರ ಸಂಜೆ 6 ಗಂಟೆಗೆ ಆಯೋಜಿಸಲಾಗಿದೆ. ನಗರಪಾಲಿಕೆ ಸದಸ್ಯ ಮಾ.ವಿ.ರಾಂಪ್ರಸಾದ್, ಸಂಗೀತ ಸಂಜೆ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಿದರು. ಬಳಿಕ ಮಾತನಾಡಿದ ಅವರು, ಮೈಸೂರು ಕಲಾವಿದರ ತವರೂರು ವಿಷ್ಣುವರ್ಧನ್ ಮತ್ತು ಅಂಬರೀಷ್ ಅವರ ಬಾಲ್ಯದಿನಗಳಲ್ಲಿ ಹೆಚ್ಚಾಗಿ ಸೇರುತ್ತಿದ್ದ ಚಾಮುಂಡಿಪುರಂ ವೃತ್ತದಲ್ಲಿ ಆಕಾಶವಾಣಿ ದೂರದರ್ಶನ ಕಲಾವಿದರು ಜನಪ್ರಿಯ ಗಾಯಕರಿಂದ ಸಾಹಸಸಿಂಹ ಸಂಗೀತ ಸಂಜೆ ಹಳೆಯ ಚಿತ್ರಗೀತೆಗಳ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಮೈಸೂರು ಆರ್ಟಿಸ್ಟ್ ಅಸೋಸಿಯೇಷನ್ ಅಧ್ಯಕ್ಷ ರಘುನಾಥ್, ಪ್ರಧಾನ ಕಾರ್ಯದರ್ಶಿ ಗುರುದತ್, ಕಾರ್ಯ ದರ್ಶಿ ನಿರೂಪಕ ಅಜಯ್ ಶಾಸ್ತ್ರಿ, ಖಜಾಂಚಿ ಪ್ರಶಾಂತ್ ಸೂರ್ಯ, ಕೃಷ್ಣ ಬೇಕರಿ ಆನಂದ್, ನಂಜುಂಡ, ರವಿಕುಮಾರ್ ಇದ್ದರು.

30 ನಿಗಮ–ಮಂಡಳಿಗೆ ಅಧ್ಯಕ್ಷರ ನೇಮಕ ನಿರ್ಧಾರ

ವಿವಿಧ ಪ್ರಾಧಿಕಾರ, ಸಂಸ್ಥೆಗಳಿಗೆ 700 ಕಾರ್ಯಕರ್ತರು ಸದಸ್ಯರಾಗಿ ನೇಮಕಾತಿ

ಬೆಂಗಳೂರು,ಸೆ.28–(ಕೆಎಂಶಿ) ರಾಜ್ಯದ ಪ್ರತಿಷ್ಠಿತ 30 ನಿಗಮ–ಮಂಡಳಿಗಳ ಅಧ್ಯಕ್ಷರು ಹಾಗೂ ಪಕ್ಷದ 700 ಕಾರ್ಯಕರ್ತರಿಗೆ ಪ್ರಾಧಿಕಾರ ಮತ್ತು ಇತರೆ ಸಂಸ್ಥೆಗಳ ಸದಸ್ಯರಾಗಿ ನೇಮಕಾತಿ ಪ್ರಕ್ರಿಯೆಗೆ ಮುಖ್ಯಮಂತ್ರಿ ಚಾಲನೆ ನೀಡಿದ್ದಾರೆ.

ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗದಂತೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಪಕ್ಷದ ಅಭ್ಯರ್ಥಿಗಳಿಗೆ ಅನುಕೂಲವಾಗುವಂತೆ ಕಾಂಗ್ರೆಸ್ ಶಾಸಕರು, ಮುಖಂಡರು, ಕಾರ್ಯಕರ್ತರಿಗೆ ಅಧಿಕಾರ ನೀಡಲಿದ್ದಾರೆ.

ಕಾರ್ಯಕರ್ತರು, ಮುಖಂಡರಿಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಪ್ರತಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ತಲಾ ಇಬ್ಬರಿಗೆ ಮೊದಲ ಹಂತದಲ್ಲಿ ಅವಕಾಶ ದೊರೆಯಲಿದೆ. ಕ್ಷೇತ್ರದಲ್ಲಿ ಯಾರನ್ನು ನೇಮಕ ಇಲ್ಲವೇ ನಾಮಕರಣ ಮಾಡಬೇಕು ಎಂಬ ಅಧಿಕಾರವನ್ನು ಆಯಾ ಕ್ಷೇತ್ರದ ಶಾಸಕರು ಹಾಗೂ ಚುನಾವಣೆಯಲ್ಲಿ ಪರಾಭವಗೊಂಡ ಅಭ್ಯರ್ಥಿಗಳಿಗೆ ಅಧಿಕಾರ ನೀಡಿದ್ದಾರೆ.



ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಖುದ್ದಾಗಿ ಎಲ್ಲರಿಗೂ ಪತ್ರ ಬರೆದು ಸೆ.30ರೊಳಗೆ ಇಬ್ಬರ ಹೆಸರು ಶಿಫಾರಸ್ಸು ಮಾಡುವಂತೆ ಸಲಹೆ ಮಾಡಿದ್ದಾರೆ. ಪ್ರತಿ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರಿಗೆ ಅವಕಾಶ ಮಾಡಿಕೊಡುವುದಲ್ಲದೆ, ಕೆಪಿಸಿಸಿಯಿಂದಲೂ ಹೆಸರುಗಳನ್ನು ಪಡೆದುಕೊಳ್ಳುತ್ತಿದ್ದಾರೆ.

ಒಟ್ಟಾರೆ ಮೊದಲ ಹಂತದಲ್ಲಿ 30 ನಿಗಮಗಳಿಗೆ ಅಧ್ಯಕ್ಷರು 700 ಸದಸ್ಯರನ್ನು ಎಲ್ಲಾ ಹಂತದಲ್ಲೂ ನಾಮಕರಣಕ್ಕೆ ತೀರ್ಮಾನ ಮಾಡಿದ್ದಾರೆ. ಐದು ಗ್ಯಾರಂಟಿ ಯೋಜನೆಯ ಅನುಷ್ಠಾನಕ್ಕೆ ದೊಡ್ಡ ಪ್ರಮಾಣದಲ್ಲಿ ಹಣಕಾಸಿನ ಅಗತ್ಯ ಇರುವುದರಿಂದ ಲಾಭದಾಯಕ ನಿಗಮ–ಮಂಡಳಿಗಳಿಗೆ ಸಚಿವ ಸ್ಥಾನ ವಂಚಿತರಾದ ಹಿರಿಯ ಶಾಸಕರಿಗೆ ಹಾಗೂ ಅಲ್ಪ ಅಂತರದಲ್ಲಿ ಪರಾಭವಗೊಂಡ ಅಭ್ಯರ್ಥಿಗಳಿಗೆ ಅಧ್ಯಕ್ಷ ಸ್ಥಾನ ನೀಡಲು ತೀರ್ಮಾನಿಸಿದ್ದಾರೆ.

ನಿಗಮ–ಮಂಡಳಿಗೆ ನೇಮಕಗೊಳ್ಳುವ ಅಧ್ಯಕ್ಷರಿಗೆ ಸಂಪುಟ ದರ್ಜೆಯ ಸ್ಥಾನಮಾನ ನೀಡಲಾಗುತ್ತಿದ್ದು, ಅಂಥವರಿಗೆ ಸಂಬಂಧಿಸಿದ ನಿಗಮವೇ ವೇತನ ಹಾಗೂ ಇತರೆ ಭತ್ಯೆಗಳನ್ನು ಭರಿಸಬೇಕು.

ಸರ್ಕಾರದ ಖಜಾನೆಯಿಂದ ವೇತನ ಭರಿಸುವಂತಹ ಯಾವುದೇ ನಿಗಮ ಮಂಡಳಿಗಳಿಗೆ ಸದ್ಯಕ್ಕೆ ರಾಜಕೀಯ ನೇಮಕಾತಿ ಇಲ್ಲ. ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ಮೃಗಾಲಯ ಪ್ರಾಧಿಕಾರ, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಾಲ್ಕು ನಿಗಮಗಳು ಸೇರಿದಂತೆ ವಿವಿಧ 30 ನಿಗಮ–ಮಂಡಳಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರ ನೇಮಕವಾಗಲಿದೆ.

'ನಮ್ಮೂರ ಸೊಬಗು' ಜಾನಪದ ಸಂಗೀತ ರೂಪಕ



ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸ್ವರಾಲಯ ಸಂಗೀತ ಸಂಸ್ಥೆಯು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಸಹಯೋಗದೊಂದಿಗೆ ಇತ್ತೀಚೆಗೆ ಗಾನಭಾರತಿ ಸಭಾಂಗಣದಲ್ಲಿ ಸ್ವರಾಲಯ ಸಾಂಸ್ಕೃತಿಕ ಹಬ್ಬ–2023 (ಭಾಗ–3) ಅನ್ನು ಅದ್ದೂರಿಯಾಗಿ ಆಚರಿಸಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶುಭ ಗಣೇಶ್ ನಿರ್ದೇಶನದಲ್ಲಿ ಜಾನಪದ ಸಂಗೀತ ರೂಪಕ (ನಮ್ಮೂರ ಸೊಬಗು)ವನ್ನು ಪ್ರದರ್ಶಿಸಲಾಯಿತು. ಚಿತ್ರದಲ್ಲಿ ಸ್ವರಾಲಯ ಅಧ್ಯಕ್ಷೆ ವಿದುಷಿ ಡಾ.ಸುಮಾ ಹರಿನಾಥ್, ಕಾರ್ಯದರ್ಶಿ ಹೆಚ್.ಎಸ್. ಶ್ರೀಕಾಂತಾಮಣಿ, ಶುಭ ಗಣೇಶ್, ಕುಮಾರಿಯರಾದ ರಮ್ಯ, ಅಖಿಲ ಜಿ., ವಿಭುದ ರಾಜೇಂದ್ರ, ವಕೀಲ ಹಾಗೂ ನೋಟರಿ ಕೆ.ವಿ.ವಾಸು ಮತ್ತಿತರರನ್ನು ಕಾಣಬಹುದು.

ಅ.1, ಯಕ್ಷಗಾನ ಪ್ರಸಂಗ-ಶ್ರೀದೇವಿ ಮಹಾತ್ಮೆ

ಮೈಸೂರು, ಸೆ. 28– ಮೈಸೂರಿನ ದಕ್ಷಿಣ ಕನ್ನಡ ವೈದ್ರ ಸಾಂಸ್ಕೃತಿಕ ಸಂಘದ ವತಿಯಿಂದ ಅ.1ರಂದು ಸಂಜೆ 5.30ಕ್ಕೆ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಸುಪ್ರಸಿದ್ಧ ಯಕ್ಷಗಾನ ಕಲಾವಿದರ ಸಮಾಗಮ, ದಕ್ಷಿಣ ಕನ್ನಡ ಇವರಿಂದ ಶ್ರೀ ದೇವಿ ಮಹಾತ್ಮೆ ಯಕ್ಷಗಾನ ಪ್ರಸಂಗವನ್ನು ಏರ್ಪಡಿಸಲಾಗಿದೆ. ಪ್ರವೇಶ ಉಚಿತವಾಗಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಮಹಾಜನ ಕಾಲೇಜಲ್ಲಿ ಭಗತ್‌ಸಿಂಗ್ ಜನ್ಮ ದಿನಾಚರಣೆ



ಮೈಸೂರು,ಸೆ.28–ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ದೇಶಭಕ್ತ ಹಾಗೂ ಕ್ರಾಂತಿಕಾರಿ ನಾಯಕರಾದ ಭಗತ್‌ಸಿಂಗ್ ಅವರ 116ನೇ ಜನ್ಮ ದಿನವನ್ನು, ಕಾಲೇಜಿನ ಎನ್‌ಸಿಸಿ ವತಿಯಿಂದ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಶೈಕ್ಷಣಿಕ ಡೀನ್ ಡಾ.ಶ್ರೀಧರ್, ಎನ್‌ಸಿಸಿ ಇನ್‌ಫೆಂಟ್ರಿ ಮೇಜರ್ ನಿಖಿಲ್, ನ್ಯಾಕ್ ಸಂಯೋಜಕಿ ಗೀತಾ, ಕ್ರೀಡಾ ವಿಭಾಗದ ನಿರ್ದೇಶಕರಾದ ಡಾ.ಭಾಸ್ಕರ್, ಎನ್‌ಸಿಸಿ ಆರ್ಟಿಲರಿ ಬ್ಯಾಟ್ರಿ ಕ್ಯಾಪ್ಟನ್ ಡಾ.ಇಂದ್ರಾಣಿ, ಕನ್ನಡ ವಿಭಾಗದ ಡಾ.ವಿನೋದಮ್ಮ, ಭೂಗೋಳಶಾಸ್ತ್ರ ವಿಭಾಗದ ಡಾ.ಸೋಮಶೇಖರ್ ಹಾಗೂ ಕಾಲೇಜಿನ ಅಧ್ಯಾಪಕ, ಅಧ್ಯಾಪಕೇತರರು ಉಪಸ್ಥಿತರಿದ್ದರು.

ಲಾರಿ ಡಿಕ್ಕಿ: ಮಹಿಳೆ ಸಾವು


ಮೈಸೂರು,ಸೆ.28– ಲಾರಿ ಡಿಕ್ಕಿ ಹೊಡೆದು ಪಾದಚಾರಿ ಮಹಿಳೆ ಮೃತಪಟ್ಟಿರುವ ಘಟನೆ ಮೈಸೂರು–ನಂಜನಗೂಡು ರಾಷ್ಟ್ರೀಯ ಹೆದ್ದಾರಿಯ ಮಂಡಕಳ್ಳಿ ಬಳಿ ಗುರುವಾರ ಸಂಜೆ ಸಂಭವಿಸಿದೆ. ಮೈಸೂರಿನಿಂದ ಸಾರಿಗೆ ಸಂಸ್ಥೆ ಬಸ್‌ನಲ್ಲಿ ಬಂದಿಳಿದ ಮಹಿಳೆ ಮಂಡಕಳ್ಳಿ ಗ್ರಾಮದ ಕಡೆಗೆ ರಸ್ತೆ ದಾಟುವಾಗ ವೇಗವಾಗಿ ಬಂದ ಲಾರಿ ಡಿಕ್ಕಿ ಹೊಡೆದು, ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೈಸೂರು ದಕ್ಷಿಣ ಠಾಣೆ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ, ಮೃತದೇಹವನ್ನು ಮೈಸೂರು ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸಾಗಿಸಿದ್ದಾರೆ. ಅಪಘಾತದಲ್ಲಿ ಮೃತಪಟ್ಟವರು ಉದ್ಬೂರು ಗ್ರಾಮದ ಸಣ್ಣಮ್ಮ(60) ಎಂದು ತಿಳಿದುಬಂದಿದೆಯಾದರೂ ಪೊಲೀಸರು ಸ್ಪಷ್ಟಪಡಿಸಿಲ್ಲ. ಮೃತರ ಮಾಹಿತಿ ಈವರೆಗೂ ಲಭ್ಯವಾಗಿಲ್ಲ ಎಂದು ಅವರು ತಿಳಿಸಿದ್ದಾರೆ.

ಇಂದು ಬಂದ್ ಬೆಂಬಲಿಸಿ ಮೌನ ಮೆರವಣಿಗೆ

ಮೈಸೂರು,ಸೆ.28(ಪಿಎಂ)– ಸಂಜೀವಿನಿ ನಾಗರಿಕ ಹಿತರಕ್ಷಣಾ ಸಮಿತಿ ವತಿಯಿಂದ ಸೆ.29ರಂದು ಬೆಳಗ್ಗೆ 8.30ಕ್ಕೆ ಕಾವೇರಿ ನೀರಿಗಾಗಿ ಹಮ್ಮಿಕೊಂಡಿರುವ ಕರ್ನಾಟಕ ಬಂದ್ ಬೆಂಬಲಿಸಿ ಮೌನ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಮೌನ ಮೆರವಣಿಗೆಯು ಹೆಬ್ಬಾಳು ಹೆಬ್ಬಾಗಿಲಿನಿಂದ ಹೊರಟು, ಸಂಜೀವಿನಿ ಸರ್ಕಲ್, ಬಸವನಗುಡಿ ಸರ್ಕಲ್, ಸೂರ್ಯ ಬೇಕರಿ ಸರ್ಕಲ್, ವಿಜಯನಗರ ವಾಟರ್ ಟ್ಯಾಂಕ್‌ವರೆಗೆ ನಡೆಯಲಿದೆ.

ಭಾರತದ ಹಸಿರುಕ್ರಾಂತಿ ಪಿತಾಮಹ ಎಂ.ಎಸ್.ಸ್ವಾಮಿನಾಥನ್ ವಿಧಿವಶ

ಚೆನ್ನೈ: ವಿಶ್ವ ಕಂಡ ಶ್ರೇಷ್ಠ ಕೃಷಿ ವಿಜ್ಞಾನಿ, ಭಾರತದ ಹಸಿರುಕ್ರಾಂತಿಯ ಪಿತಾಮಹ ಎಂದೇ ಪ್ರಖ್ಯಾತರಾದ ಡಾ.ಮೊಂಕೊಂಬ ಸಾಂಬಶಿವನ್ ಸ್ವಾಮಿನಾಥನ್ (98) ಅವರು ಬುಧವಾರ ಚೆನ್ನೈನಲ್ಲಿ ನಿಧರಾಗಿದ್ದಾರೆ.



ಎಂ.ಎಸ್.ಸ್ವಾಮಿನಾಥನ್ ಅವರ ಪತ್ನಿ ಮಿನಾ ಸ್ವಾಮಿನಾಥನ್ ಅವರು ಕಳೆದ ವರ್ಷ ನಿಧನರಾಗಿದ್ದರು. ಸ್ವಾಮಿನಾಥನ್, ಮೂವರು ಪುತ್ರಿಯರಾದ ಸೌಮ್ಯ ಸ್ವಾಮಿನಾಥನ್, ಮಧುರಾ ಸ್ವಾಮಿನಾಥನ್ ಮತ್ತು ನಿತ್ಯ ಸ್ವಾಮಿನಾಥನ್ ಅವರನ್ನು ಅಗಲಿದ್ದಾರೆ. ಸ್ವಾಮಿನಾಥನ್ ಅವರ ಅಗಲಿಕೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ಆಗಸ್ಟ್ 7, 1925ರಂದು ಕುಂಭಕೋಣಂ ಜಿಲ್ಲೆಯಲ್ಲಿ ಜನಿಸಿದ ಸ್ವಾಮಿನಾಥನ್ ಅವರು ತಮ್ಮ ಸ್ವಂತ ಊರಿನಲ್ಲಿ ಶಿಕ್ಷಣವನ್ನು ಪೂರ್ಣಗೊಳಿಸಿದರು. ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮವು ಸ್ವಾಮಿನಾಥನ್ ಅವರನ್ನು 'ಆರ್ಥಿಕ ಪರಿಸರ ವಿಜ್ಞಾನದ ಪಿತಾಮಹ' ಎಂದು ಬಣ್ಣಿಸಿದೆ.


1960 ಹಾಗೂ 70ರ ದಶಕದಲ್ಲಿ ರಾಸಾಯನಿಕ ಹಾಗೂ ಜೈವಿಕ ತಂತ್ರಜ್ಞಾನದ ಮೂಲಕ ಅಕ್ಕಿ ಮತ್ತು ಗೋಧಿಯ ಉತ್ಪಾದನೆ ಹೆಚ್ಚಿಸಲು ರೂಪಿಸಲಾದ ಹಸಿರು ಕ್ರಾಂತಿ ಯೋಜನೆಯಲ್ಲಿ ಕೇಂದ್ರ ಕೃಷಿ ಸಚಿವರಾಗಿದ್ದ ಸಿ.ಸುಬ್ರಮಣಿಯಂ, ಜಗಜೀವನ್ ರಾಮ್ ಅವರೊಂದಿಗೆ ಸ್ವಾಮಿನಾಥನ್ ಕೆಲಸ ಮಾಡಿದ್ದರು.

ಅಧಿಕ ಇಳುವರಿಯ ಭತ್ತ ಹಾಗೂ ಗೋಧಿ ತಳಿಯ ಅಭಿವೃದ್ಧಿಗಾಗಿ 1987ರಲ್ಲಿ ಅವರಿಗೆ ಜಾಗತಿಕ ಆಹಾರ ಬಹುಮಾನ ಲಭಿಸಿತ್ತು. ಅದರಿಂದ ಬಂದ ಹಣದಲ್ಲಿ ಅವರು ಚೆನ್ನೈನಲ್ಲಿ ಎಂ.ಎಸ್.ಸ್ವಾಮಿನಾಥನ್ ಸಂಶೋಧನಾ ಪ್ರತಿಷ್ಠಾನವನ್ನು ಆರಂಭಿಸಿದರು. 1971ರಲ್ಲಿ ರೇಮನ್ ಮ್ಯಾಗ್ಸೆಸ್ಸೆ ಹಾಗೂ 1986ರಲ್ಲಿ ಆಲ್ಬರ್ಟ್ ಐನ್‌ಸ್ಟೀನ್ ವಿಶ್ವ ವಿಜ್ಞಾನ ಪ್ರಶಸ್ತಿಗಳೂ ಅವರಿಗೆ ಸಂದಿವೆ.

ಇವುಗಳೊಂದಿಗೆ ಪದ್ಮಶ್ರೀ, ಪದ್ಮ ಭೂಷಣ ಹಾಗೂ ಪದ್ಮ ವಿಭೂಷಣ ಪ್ರಶಸ್ತಿಗಳು ಸಹ ಸ್ವಾಮಿನಾಥನ್ ಅವರಿಗೆ ಸಂದಿವೆ. ಎಚ್.ಕೆ.ಫಿರೋದಿಯಾ ಪ್ರಶಸ್ತಿ, ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಪ್ರಶಸ್ತಿ ಹಾಗೂ ಇಂದಿರಾ ಗಾಂಧಿ ಪ್ರಶಸ್ತಿಗಳೂ ಸ್ವಾಮಿನಾಥನ್ ಅವರಿಗೆ ಲಭಿಸಿವೆ.

ದೇಶದ ಕೃಷಿ ಕ್ಷೇತ್ರದಲ್ಲೇ ಅಲ್ಲದೆ, ಜಾಗತಿಕ ಮಟ್ಟದಲ್ಲಿ ಸ್ವಾಮಿನಾಥನ್ ಅವರ ಕಾರ್ಯ ಹೆಚ್ಚು ಜನಪ್ರಿಯ. ಜಾಗತಿಕ ಮಟ್ಟದ ಹಲವು ಕೃಷಿ ಹಾಗೂ ಪರಿಸರ ಜಾಗೃತಿ ಕುರಿತ ಕಾರ್ಯಕ್ರಮಗಳಲ್ಲಿ ಅವರು ಸಕ್ರಿಯರಾಗಿದ್ದರು. ಟೈಮ್ ನಿಯತಕಾಲಿಕೆ ಪ್ರಕಟಿಸಿದ 20ನೇ ಶತಮಾನದ 20 ಅತ್ಯಂತ ಪ್ರಭಾವಿಗಳ ಪಟ್ಟಿಯಲ್ಲಿ ಅವರ ಹೆಸರು ಸೇರಿತ್ತು.

ಕಾಂತಮ್ಮ ನಿಧನ



ಮೈಸೂರು, ಸೆ.28–ಮೈಸೂರಿನ ಜೆ.ಪಿ.ನಗರದ ನಿವಾಸಿ ಲೇಟ್ ಸೀತಾರಾಮ್ ಅವರ ಪತ್ನಿ ಕಾಂತಮ್ಮ(90) ಗುರುವಾರ ನಿಧನರಾದರು. ಮೃತರು ಮಕ್ಕಳಾದ ಅನಂತ, ಸುಬ್ರಮಣ್ಯ, ನಾಗಮಣಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ ಬೆಳಗ್ಗೆ 9 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರಘಾಟ್‌ನಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಡ್ರಗ್ಸ್ ಪ್ರಕರಣ; ಕಾಂಗ್ರೆಸ್ ಶಾಸಕ ಸುಖಪಾಲ್ ಖೈರಾ ಬಂಧನ

ಚಂಡೀಗಢ: 2015ರ ಡ್ರಗ್ಸ್ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಶಾಸಕ ಸುಖಪಾಲ್ ಸಿಂಗ್ ಖೈರಾ ಅವರನ್ನು ಪಂಜಾಬ್ ಪೊಲೀಸರು ಬಂಧಿಸಿದ್ದಾರೆ. ನಾರ್ಕೊಟಿಕ್ಸ್ ಡ್ರಗ್ಸ್ ಆಂಡ್ ಸೈಕೋ ಟ್ರಾಫಿಕ್ ಸಬ್‌ಸ್ಟನ್ಸಸ್ ಆ್ಯಕ್ಟ್ ಅಡಿಯಲ್ಲಿ ಸುಖಪಾಲ್ ಖೈರಾ ಅವರನ್ನು ಜಲಾಲಬಾದ್ ಪೊಲೀಸರು ಗುರುವಾರ ಬೆಳಗ್ಗೆ 6.30ರ ಸುಮಾರಿಗೆ ಬಂಧಿಸಿದ್ದಾರೆ.



ಚಂಡೀಗಢದಲ್ಲಿರುವ ನಿವಾಸದಲ್ಲಿ ಖೈರಾ ಅವರನ್ನು ಬಂಧನಕ್ಕೊಳಪಡಿಸಲಾಗಿದ್ದ, ಈ ವೇಳೆ ಭಾರಿ ಹೈಡ್ರಾಮಾವೇ ನಡೆದಿದೆ. ಬಂಧನಕ್ಕೂ ಮೊದಲು ಸುಖಪಾಲ್ ಖೈರಾ ಪೊಲೀಸರ ಜೊತೆ ವಾಗ್ವಾದ ನಡೆಸಿದ್ದಾರೆ. ಹಾಗೆಯೇ, ಬಂಧನದ ಘಟನೆಯನ್ನು ಫೇಸ್‌ಬುಕ್ ಲೈವ್ ಮೂಲಕ ಜನರಿಗೆ ತೋರಿಸಿದ್ದಾರೆ. ಅಕ್ರಮವಾಗಿ ಮಾದಕವಸ್ತು ಸಾಗಣೆ ಪ್ರಕರಣದಲ್ಲಿ ಖೈರಾ ಸಿಲುಕಿದ್ದಾರೆ ಎಂದು ತಿಳಿದು ಬಂದಿದೆ. ಸುಖಪಾಲ್ ಸಿಂಗ್ ಖೈರಾ ಅವರನ್ನು 2021ರಲ್ಲೂ ಬಂಧನ ಕ್ಕೊಳಪಡಿಸಲಾಗಿತ್ತು. ಅಕ್ರಮವಾಗಿ ಮಾದಕವಸ್ತು ಸಾಗಣೆ, ಮಾದಕವಸ್ತು ದಂಧೆ, ಅಕ್ರಮವಾಗಿ ಹಣ ವರ್ಗಾವಣೆ ಸೇರಿ ಹಲವು ಪ್ರಕರಣಗಳಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಸುಖಪಾಲ್ ಸಿಂಗ್ ಅವರನ್ನು ಬಂಧಿಸಿ ವಿಚಾರಣೆ ನಡೆಸಿದ್ದರು. ಈ ನಡುವೆ ನಕಲಿ ಪಾಸ್‌ಪೋರ್ಟ್ ಪ್ರಕರಣವೂ ಖೈರಾ ವಿರುದ್ಧ ಕೇಳಿಬಂದಿತ್ತು.

ರಾಜಕೀಯ ಸೇಡಿಗಾಗಿ ಬಂಧನ: ಈ ನಡುವೆ ಸುಖಪಾಲ್ ಖೈರಾ ಅವರ ಬಂಧನವನ್ನು ಪಂಜಾಬ್ ರಾಜ್ಯದ ಕಾಂಗ್ರೆಸ್ ಅಧ್ಯಕ್ಷ ಅಮರಿಂದರ್ ಸಿಂಗ್ ರಾಜಾ ವಾರಿಂಗ್ ಅವರು ಖಂಡಿಸಿದ್ದಾರೆ.

ಸಾಮಾಜಿಕ ಜಾಲತಾಣ ಟ್ವಿಟರ್‌ನಲ್ಲಿ ಟ್ವೀಟ್ ಮಾಡಿರುವ ಅವರು, ರಾಜಕೀಯ ಸೇಡಿಗಾಗಿ ಕಾಂಗ್ರೆಸ್ ಶಾಸಕ ಸುಖಪಾಲ್ ಖೈರಾ ಅವರನ್ನು ಬಂಧಿಸಲಾಗಿದೆ. ಇದು ಪ್ರತಿಪಕ್ಷಗಳನ್ನು ಬೆದರಿಸುವ ಪ್ರಯತ್ನವಾಗಿದೆ ಮತ್ತು ಪ್ರಮುಖ ವಿಷಯಗಳಿಂದ ಗಮನವನ್ನು ಸೆಳೆಯಲು ಎಎಪಿ ಸರ್ಕಾರ ನಡೆಸಿರುವ ತಂತ್ರವಾಗಿದೆ ಎಂದು ಹೇಳಿದ್ದಾರೆ.

ಶಾಲೆಗಳಲ್ಲಿ ಸಂಗೀತ ಶಿಕ್ಷಣ ಕಡ್ಡಾಯಗೊಳಿಸಿ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಆಗ್ರಹ



ಮೈಸೂರು,ಸೆ.28–ಸಂಗೀತ ಮನುಷ್ಯನ ಭಾವಕೋಶವನ್ನು ಪ್ರಫುಲ್ಲಗೊಳಿಸುವ ಶಕ್ತಿ ಹೊಂದಿದೆ. ಭಾವನೆಗಳ ಅಭಿವ್ಯಕ್ತಿಗೆ ಸಂಗೀತ ವಿಶೇಷ ಕಲಾ ಮಾಧ್ಯಮವಾಗಿದೆ. ಹಾಗಾಗಿ ಸಂಗೀತ ಗಾಯಕರ ಹೃದಯದ ಭಾಷೆಯಾಗಿದೆ. ಮಕ್ಕಳ ಶಾಲಾ ಶಿಕ್ಷಣದಲ್ಲಿ ಸಂಗೀತ ಕಡ್ಡಾಯವಾಗಿರಲಿ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಭಿಪ್ರಾಯಪಟ್ಟರು.

ಡಾ ರಾಜ್‌ಕುಮಾರ್ ಕಲಾಸೇವಾ ಟ್ರಸ್ಟ್ ಸಂಸ್ಥೆಯು ನಾದಬ್ರಹ್ಮ ಸಭಾಂಗಣದಲ್ಲಿ ನಟ ವಿಷ್ಣುವರ್ಧನ್ ಜಯಂತಿ ಅಂಗವಾಗಿ "ನಮ್ಮ ವಿಷ್ಣುವರ್ಧನ " ಶೀರ್ಷಿಕೆಯಡಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು ರಾಜರ ಕಾಲದಿಂದಲೂ ಸಂಗೀತಕ್ಕೆ ವಿಶೇಷ ಮನ್ನಣೆ ನೀಡುತ್ತಾ ಬಂದಿದ್ದು ಸಂಗೀತಕ್ಕೆ ಎಲ್ಲರನ್ನು ಸೆಳೆಯುವ ಮಾಂತ್ರಿಕ ಶಕ್ತಿಯಿದೆ. ಹಾಗಾಗಿ ಸಂಗೀತದ ಕಡೆ ನಾವು ಹೆಚ್ಚು ಒತ್ತುಕೊಡಬೇಕಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ ಗೌರವಾಧ್ಯಕ್ಷ ಡಾ.ವೈ.ಡಿ.ರಾಜಣ್ಣ ಮಾತನಾಡಿ, ಹಿರಿಯ ಗಾಯಕ ಮೈಸೂರು ಜಯರಾಂ ಅವರು ಡಾ.ರಾಜ್‌ಕುಮಾರ್ ಹೆಸರಿನ ಟ್ರಸ್ಟ್‌ನಲ್ಲಿ ನಟ ವಿಷ್ಣುವರ್ಧನ್ ನೆನಪಿನ ಕಾರ್ಯಕ್ರಮ ಆಯೋಜಿಸಿರುವುದು ವಿಶೇಷವಾಗಿದೆ.

ಡಾ.ರಾಜಕುಮಾರ್ ಹಾಗೂ ವಿಷ್ಣುವರ್ಧನ್ ಅವರು ಕನ್ನಡ ಚಿತ್ರರಂಗದ ಎರಡು ಕಣ್ಣುಗಳಿದ್ದಂತೆ. ಇಬ್ಬರೂ ಮೇರು ಕಲಾವಿದರಾಗಿ ನಾಡಿನ ಸಾಂಸ್ಕೃತಿಕ ಲೋಕದ ಹಿರಿಮೆ ಹೆಚ್ಚಿಸಿದವರು. ಕಲಾವಿದರು ಎಲ್ಲರೂ ಒಂದೇ ಎಂಬ ಭಾವನೆ ಅವರಿಬ್ಬರಲ್ಲಿಯೂ ಇತ್ತು. ಅವರ ನಡುವೆ ಪ್ರೀತಿ ವಾತ್ಸಲ್ಯಕ್ಕೆ ಕೊರತೆಯಿರಲಿಲ್ಲ.

ಜೂ.ವಿಷ್ಣುವರ್ಧನ್ ಖ್ಯಾತಿಯ ಜಯಶ್ರೀರಾಜ್ ವಿಷ್ಣು ಗೀತೆಗಳ ಗಾಯನ ಹಾಗೂ ಅವರ ಹಾಡುಗಳಿಗೆ ನೃತ್ಯ ಸಂಯೋಜನೆಯ ಹೆಜ್ಜೆಗಳು ಮನಸೂರೆ ಗೊಂಡವು. ವಿಷ್ಣು ನಮ್ಮ ಮುಂದೆಯೇ ಇದ್ದಾರೆ ಎಂಬ ಭಾವ ಮೂಡಿಸಿದವು. ವಿಷ್ಣುವರ್ಧನ್ ಅಭಿನಯದ ಗೀತೆಗಳನ್ನು ಹಿರಿಯ ಗಾಯಕ ಮೈಸೂರು ಜಯರಾಂ ತಮ್ಮ ಗಾಯನದ ಮೂಲಕ ಕೇಳುಗರ ಮನಗೆದ್ದರು. ಇವರ ನೇತೃತ್ವದಲ್ಲಿ ಗಾಯಕರಾದ ಸುರೇಶ್ ಚಂದನ್ ಶಶಿಕಲಾ ಶಾರ ದಾಂಬ ರಾಜೇಶ್ ಧನ್ಯಶ್ರೀ ನಡೆಸಿಕೊಟ್ಟರು. ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಮೈಸೂರಿನ ಉದ್ಯಮಿ ರವೀಗೌಡ ಡಾ ವಿಷ್ಣು ಸೇನಾ ಸಮಿತಿ ರಾಜ್ಯಾಧ್ಯಕ್ಷ ರಾಜೇಗೌಡ, ಜಿಲ್ಲಾಧ್ಯಕ್ಷ ಎಂ.ಬಿ.ಪ್ರಸನ್ನ, ನಿರೂಪಕ ಹಾಗೂ ಗಾಯಕ ಸುಧೀಂದ್ರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಶ್ರದ್ಧಾಭಕ್ತಿಯಿಂದ ಈದ್ ಮಿಲಾದ್ ಆಚರಣೆ





ಮೈಸೂರಿನಲ್ಲಿ ಈದ್ ಮಿಲಾದ್ ಪ್ರಯುಕ್ತ ಮುಸಲ್ಮಾನ ಬಾಂಧವರು ಮೆರವಣಿಗೆ ನಡೆಸಿದರು. ಮೆರವಣಿಗೆ ಬಳಿಕ ಮೈಸೂರಿನ ಮೀಲಾದ್ ಪಾರ್ಕ್‌ನಲ್ಲಿ ಸರ್‌ಖಾಜ್ಹಿಯವರಾದ ಮೌಲಾನಾ ಮೊಹಮ್ಮದ್ ಉಸ್ಮಾನ್ ಷರೀಫ್ ಸಾಹೇಬ್ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ ನಡೆಯಿತು.

ಮೈಸೂರು,ಸೆ.28(ಪಿಎಂ)– ನಗರದಲ್ಲಿ ಪ್ರವಾದಿ ಮೊಹಮ್ಮದ್ ಅವರ ಜನ್ಮದಿನದ ಪ್ರತೀಕವಾದ ಈದ್ ಮಿಲಾದ್ ಹಬ್ಬವನ್ನು ಗುರುವಾರ ಮುಸಲ್ಮಾನ ಬಾಂಧವರಿಂದ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ನಗರದ ವಿವಿಧ ಮಸೀದಿಗಳಲ್ಲಿ ಪವಿತ್ರ ಗ್ರಂಥವಾದ ಕುರಾನ್‌ನ ವಾಚನ ಮಾಡಲಾಯಿತು. ಮೈಸೂರಿನ ದಾವತೆ–ಇಸ್ಲಾಮಿ ಹಿಂದ್ ಕರ್ನಾಟಕ ವತಿಯಿಂದ ಪ್ರತಿ ವರ್ಷದಂತೆ ಜುಲೂಸ್ ಮೊಹಮದಿ (ಪ್ರವಾದಿ ಮೊಹಮ್ಮದ್ ಅವರ ಜನ್ಮದಿನದ ಅಂಗವಾಗಿ) ಈದ್ ಮಿಲಾದ್ ಉನ್ ನಬಿ ಮೆರವಣಿಗೆಯನ್ನು ನಡೆಸಲಾಯಿತು. ಲಷ್ಕರ್ ಮೊಹಲ್ಲಾದ ಅಶೋಕ ರಸ್ತೆಯಲ್ಲಿರುವ ಮಸೀದಿ ಅಜ್ಜಾಮ್ ಮರ್‌ಕಾಜ್ಹ್ ಅಹಲ ಸುನ್ನತೋ ಜಮಾತ್‌ನಿಂದ ಹೊರಟ ಮೆರವಣಿಗೆಯು, ಸಾಡೆ ರಸ್ತೆ, ಈದಿಗಾ ಮಸೀದಿ ರಸ್ತೆ, ಪುಲಿಕೇಶಿ ರಸ್ತೆ, ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ ರಸ್ತೆಗಳಲ್ಲಿ ಸಾಗಿ ಮತ್ತೆ ಮಸೀದಿ ಅಜ್ಜಾಮ್ ಮರ್‌ಕಾಜ್ಹ್ ಅಹಲ ಸುನ್ನತೋ ಜಮಾತ್‌ಗೆ ಹಿಂತಿರುಗಿ ಮುಕ್ತಾಯಗೊಂಡಿತು. ಸರ್‌ಖಾಜ್ಹಿಯವರಾದ ಮೌಲಾನಾ ಮೊಹಮ್ಮದ್ ಉಸ್ಮಾನ್ ಷರೀಫ್ ಸಾಹೇಬ್ ಅಧ್ಯಕ್ಷತೆಯಲ್ಲಿ ಮುಸಲ್ಮಾನ ಬಾಂಧವರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಬಳಿಕ ಮೀಲಾದ್ ಪಾರ್ಕ್‌ನಲ್ಲಿ ಸಭಾ ಕಾರ್ಯಕ್ರಮ ನಡೆಯಿತು. ಸರ್‌ಖಾಜ್ಹಿಯವರಾದ ಮೌಲಾನಾ ಮೊಹಮ್ಮದ್ ಉಸ್ಮಾನ್ ಷರೀಫ್ ಸಾಹೇಬ್ ಅಧ್ಯಕ್ಷತೆ ವಹಿಸಿ, ಪ್ರವಾದಿ ಮೊಹಮ್ಮದ್ ಸಂದೇಶ ತಿಳಿಸಿಕೊಟ್ಟರು. ಶಾಸಕ ತನ್ವೀರ್ ಸೇಠ್, ಪಾಲಿಕೆ ಸದಸ್ಯ ರಫೀಕ್ ಅಹಮದ್, ಮಾಜಿ ಸದಸ್ಯ ಕೆ.ಸಿ.ಶೌಕತ್ ಪಾಷ, ಮುಖಂಡರಾದ ಎನ್.ಅನ್ವರ್ ಪಾಷ, ಎಂ.ಡಿ.ಮುಮ್ತಾಜ್ ಅಹಮದ್, ಸಮಾಜ ಸೇವಕ ಮೀರಾಜ್ ಮತ್ತಿತರರಿದ್ದರು.

ಟಿಪ್ಪು ಸಮಾಧಿ ಬಳಿ ಅಶ್ಲೀಲ ನೃತ್ಯದ ಚಿತ್ರೀಕರಣ: ಎಸ್‌ಡಿಪಿಐ ಖಂಡನೆ

ಮೈಸೂರು, ಸೆ.28– ಶ್ರೀರಂಗಪಟ್ಟಣದ ಗುಂಬಜ್‌ನಲ್ಲಿರುವ ಸ್ವಾತಂತ್ರ್ಯ ಹೋರಾಟಗಾರ, ಹುತಾತ್ಮ ಟಿಪ್ಪು ಸುಲ್ತಾನ್ ಸಮಾಧಿ ಎದುರು ಕನ್ನಡ ಚಲನಚಿತ್ರವೊಂದರ ಅಶ್ಲೀಲ ಹಾಡಿನ ಚಿತ್ರೀಕರಣ ನಡೆದಿದ್ದು, ಮುಸಲ್ಮಾನರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದೆ. ಕೂಡಲೇ ಸೆನ್ಸಾರ್ ಮಂಡಳಿ ಈ ದೃಶ್ಯವನ್ನು ತೆಗೆದು ಹಾಕಬೇಕು ಎಂದು ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಒತ್ತಾಯಿಸಿದರು.



ನಗರದ ಎಸ್‌ಡಿಪಿಐ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಜಗತ್ತಿನ ಕೋಟ್ಯಾಂತರ ಮುಸಲ್ಮಾನರು ಮತ್ತು ಟಿಪ್ಪು ಸುಲ್ತಾನರ ಅಭಿಮಾನಿಗಳ ಪಾಲಿಗೆ ಗುಂಬಜ್ ಅತ್ಯಂತ ಪವಿತ್ರವಾದ ಸ್ಥಳವಾಗಿದೆ. ಇಲ್ಲಿ ಟಿಪ್ಪು ಸುಲ್ತಾನರು, ಮತ್ತವರ ತಂದೆ ಹೈದರಾಲಿ ಹಾಗೂ ತಾಯಿಯವರ ಸಮಾಧಿ ಇದೆ. ಅಲ್ಲದೇ ಟಿಪ್ಪು ಸುಲ್ತಾನರ ಕುಟುಂಬದವರು, ಬ್ರಿಟೀಷರ ವಿರುದ್ಧ ಹೋರಾಡಿ ಮಡಿದ ಅಸಂಖ್ಯಾತ ಸೈನಿಕರ ಸಮಾಧಿಗಳಿವೆ. ಸನಿಹದಲ್ಲೇ ಪವಿತ್ರವಾದ ಮಸೀದಿ ಇದೆ. ಇಂತಹ ಸ್ಥಳದಲ್ಲಿ ಕೋಮಲ್‌ಕುಮಾರ್ ನಟನೆಯ 'ನಮೋ ಭೂತಾಮ್ಮ' ಚಿತ್ರದ ದ್ವಂದ್ವಾರ್ಥದ ಅಶ್ಲೀಲ ಹಾಡಿನ ಚಿತ್ರೀಕರಣಕ್ಕೆ ಅವಕಾಶ ನೀಡಿದ್ದು ತಪ್ಪು. ಇದಕ್ಕೆ ಅಲ್ಲಿನ ಟಿಪ್ಪು ಸುಲ್ತಾನ್ ವಕ್ಫ್ ಎಸ್ಟೇಟ್ ಸಮಿತಿ ಹಾಗೂ ರಾಜ್ಯ ವಕ್ಫ್ ಮಂಡಳಿ ನೇರ ಹೊಣೆಯಾಗಿದೆ. ಶಾಸಕ ತನ್ವೀರ್ ಸೇಠ್ ಈ ಸಮಿತಿ ಅಧ್ಯಕ್ಷರಾಗಿದ್ದು, ವಕ್ಫ್ ಬೋರ್ಡ್ ಸದಸ್ಯರೂ ಆಗಿದ್ದಾರೆ. ಕೂಡಲೇ ನೈತಿಕ ಹೊಣೆ ಹೊತ್ತು ಅವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಬೇಕೆಂದು ಮಜೀದ್ ಆಗ್ರಹಿಸಿದರು.

ಸಿನಿಮಾ ಚಿತ್ರೀಕರಣಕ್ಕೆ ಅವಕಾಶ ನೀಡಿದ ಪುರಾತತ್ವ ಇಲಾಖೆ ಹಾಗೂ ಸ್ಥಳೀಯವಾಗಿ ಈ ಸ್ಥಳದ ಪಾವಿತ್ರ್ಯತೆಯ ರಕ್ಷಣೆ ಮಾಡುವ ಹೊಣೆ ಹೊತ್ತಿರುವ ಎಸ್ಟೇಟ್ ಸಮಿತಿ ಸ್ಥಳದ ಮಹತ್ವದ ಬಗ್ಗೆ ಚಿತ್ರ ನಿರ್ಮಾಪಕರಿಗೆ ಮನವರಿಕೆ ಮಾಡಿಕೊಡಬೇಕಿತ್ತು. ಆದರೆ ಚಿತ್ರ ನಿರ್ಮಾಪಕರು ನೀಡಿದ ಹಣದ ಆಸೆಗೆ ಟಿಪ್ಪು ಸುಲ್ತಾನ್ ವಕ್ಫ್ ಎಸ್ಟೇಟ್ ಸಮಿತಿ ಮಾರು ಹೋಗಿ ಇಂತಹ ಅಶ್ಲೀಲ ಹಾಡಿನ ಚಿತ್ರೀಕರಣಕ್ಕೆ ಅವಕಾಶ ನೀಡಿದೆ ಎಂದು ಅವರು ಕಿಡಿಕಾರಿದರು.

ಈಗಾಗಲೇ ಈ ಚಲನಚಿತ್ರ ಬಿಡುಗಡೆಯಾಗಿದ್ದು, ವಿಷಯ ತಡವಾಗಿ ಬೆಳಕಿಗೆ ಬಂದಿದೆ. ಇನ್ನು ಮುಂದೆ ಇಂತಹ ಯಾವುದೇ ಸಮುದಾಯಗಳ ಪವಿತ್ರ ಸ್ಥಳಗಳಲ್ಲಿ ಅಶ್ಲೀಲ ಹಾಡುಗಳ ಚಿತ್ರೀಕರಣಕ್ಕೆ ಸರ್ಕಾರ ಅವಕಾಶ ಮಾಡಿಕೊಡಬಾರದು. ಈ ಬಗ್ಗೆ ತಾವು ಮುಖ್ಯಮಂತ್ರಿಗಳು, ವಕ್ಫ್ ಸಚಿವರು ಮತ್ತು ವಕ್ಫ್ ಮಂಡಳಿಗೆ ದೂರು ನೀಡಲಿದ್ದು, ಇಂತಹ ಘಟನೆಗಳ ವಿರುದ್ಧ ಸಾರ್ವಜನಿಕರು ದನಿ ಎತ್ತಬೇಕೆಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಎಸ್‌ಡಿಪಿಐ ಜಿಲ್ಲಾಧ್ಯಕ್ಷ ರಫತ್ ಖಾನ್, ಜಿಲ್ಲಾ ಉಪಾಧ್ಯಕ್ಷ ಹಾಗೂ ಪಾಲಿಕೆ ಮಾಜಿ ಸದಸ್ಯ ಎಸ್.ಸ್ವಾಮಿ, ಪ್ರಧಾನ ಕಾರ್ಯದರ್ಶಿ ಸಫಿಯುಲ್ಲಾ, ಕಾರ್ಯದರ್ಶಿ ಫರ್ದೀನ್ ಅಹಮದ್ ಇದ್ದರು.

ಕಾವೇರಿಗಾಗಿ ಮಂಡ್ಯದಲ್ಲಿ ಸರಣಿ ಪ್ರತಿಭಟನೆ

ಪ್ರಗತಿಪರ ಸಂಘಟನೆಗಳು, ಎಸ್‌ಡಿಪಿಐ, ವಿಶ್ವಕರ್ಮ ಸಮುದಾಯ, ವಿವಿಧ ಗ್ರಾಮಸ್ಥರು ಹೋರಾಟದಲ್ಲಿ ಭಾಗಿ



ಮಂಡ್ಯ, ಸೆ.28– ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ರೈತ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ನಗರದ ಸರ್‌ಎಂವಿ ಪ್ರತಿಮೆ ಎದುರು ನಡೆಯುತ್ತಿರುವ ಧರಣಿಗೆ ಗುರುವಾರವೂ ಅನೇಕ ಸಂಘಟನೆಗಳು ಬೆಂಬಲ ಸೂಚಿಸಿದವು.

ವಿಶ್ವಕರ್ಮ ಸಮುದಾಯ, ಎಸ್‌ಡಿಪಿಐ, ಕರ್ನಾಟಕ ರಾಜ್ಯ ರೈತ ಸಂಘದ ಆಶ್ರಯದಲ್ಲಿ ಇಂಡುವಾಳು ಮತ್ತು ಸಿದ್ದಯ್ಯನ ಕೊಪ್ಪಲು ಗ್ರಾಮಸ್ಥರು, ಪ್ರಗತಿಪರ ಸಂಘಟನೆಗಳು, ಬೆಂಗಳೂರಿನ ಗೌಡತಿಯರ ಸೇನೆ, ಗೌಡರ ಯುವಸೇನೆ ಹಾಗೂ ಅಖಿಲ ಕರ್ನಾಟಕ ಒಕ್ಕಲಿಗ ಪದವೀಧರರ ವೇದಿಕೆ ಸೇರಿದಂತೆ ಹಲವು ಸಂಘಟನೆಗಳು ಪ್ರತಿಭಟನೆಗೆ ಬೆಂಬಲ ಸೂಚಿಸಿದವು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ದಿನಕ್ಕೊಂದು ಆದೇಶ ನೀಡುವ ಮೂಲಕ ಕಾವೇರಿ ಜಲಾನಯನ ವ್ಯಾಪ್ತಿಯ ಜನರಿಗೆ ಮರಣಶಾಸನ ಬರೆಯುತ್ತಿದೆ. ಕಾವೇರಿ ನದಿ ನೀರಿನ ವಿಚಾರದಲ್ಲಿ ಕಳೆದ ಹಲವಾರು ದಿನಗಳಿಂದ ಒಗ್ಗಟ್ಟಿನ ಹೋರಾಟ ನಡೆಯುತ್ತಿದ್ದು, ಮುಂದೆಯೂ ಪಕ್ಷಾತೀತವಾಗಿ ಹಾಗೂ ಎಲ್ಲಾ ಸಂಘಟನೆಗಳು ಒಗ್ಗೂಡಿ ಹೋರಾಟ ಮಾಡುವ ಅವಶ್ಯಕತೆ ಇದೆ ಎಂದರು.

ಈಗಾಗಲೇ ಬೆಂಗಳೂರು ಬಂದ್ ಯಶಸ್ವಿಯಾಗಿದೆ. ನಾಳೆ ಕರ್ನಾಟಕ ಬಂದ್ ಇದ್ದು ಜನತೆ ಹಾಗೂ ಸಂಘಟನೆಗಳು ಸಹಕಾರ ನೀಡಬೇಕಾಗಿದೆ. ಕಾವೇರಿಗಾಗಿ ನಡೆಯುತ್ತಿರುವ ಹೋರಾಟದ ಕಿಚ್ಚನ್ನು ಎಲ್ಲರೂ ಮೈಗೂಡಿಸಿಕೊಂಡು ಒಗ್ಗಟ್ಟಿನ ಹೋರಾಟ ಮಾಡಬೇಕಿದೆ ಎಂದು ಮನವಿ ಮಾಡಿದರು.

ಎಸ್‌ಡಿಪಿಐ ಭಾಗಿ: ಈದ್ ಮಿಲಾದ್ ಹಬ್ಬದ ದಿನವೂ ಮುಸ್ಲಿಂ ಸಮುದಾಯದ ಜನತೆ ಎಸ್‌ಡಿಪಿಐ ನೇತೃತ್ವದಲ್ಲಿ ಕಾವೇರಿ ಹೋರಾಟ ಬೆಂಬಲಿಸಿ ಧರಣಿ ನಿರತರಾಗಿ ಸರ್ಕಾರ ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ತಕ್ಷಣ ನಿಲ್ಲಿಸಿ ಪರ್ಯಾಯ ವ್ಯವಸ್ಥೆ ಮೂಲಕ ನ್ಯಾಯ ಪಡೆಯಲು ಮುಂದಾಗಬೇಕೆಂದು ಆಗ್ರಹಿಸಿದರು.

ಅಲ್ಲದೇ ಕರ್ನಾಟಕ ರಾಜ್ಯ ರೈತ ಸಂಘದ ಆಶ್ರಯದಲ್ಲಿ ಇಂಡುವಾಳು ಮತ್ತು ಸಿದ್ದಯ್ಯನಕೊಪ್ಪಲು ಗ್ರಾಮದ ರೈತರು ಟ್ರಾಕ್ಟರ್ ಮೆರವಣಿಗೆ ಮೂಲಕ ಧರಣಿ ಸ್ಥಳಕ್ಕೆ ತೆರಳಿ ನಿರಂತರ ಧರಣಿ ಬೆಂಬಲಿಸಿದರು.

ಪ್ರತಿಭಟನಾ ಧರಣಿಯಲ್ಲಿ ಮಾಜಿ ಶಾಸಕರಾದ ಕೆ.ಟಿ.ಶ್ರೀಕಂಠೇಗೌಡ, ಜಿ.ಬಿ.ಶಿವಕುಮಾರ್, ಪ್ರಗತಿಪರ ಮುಖಂಡರಾದ ಟಿ.ರೇಣುಕಾ, ಕೃಷ್ಣೇಗೌಡ, ವೆಂಕಟೇಶ್ ಗೌಡ, ಎಸ್‌ಡಿಪಿಐನ ಸಾದತ್, ಮುಕ್ತಿಯಾರ್, ಮುಬಾರಕ್ ಹುಸೇನ್, ಆಸ್ಕರ್, ವಿಶ್ವಕರ್ಮ ಮಹಾಸಭಾದ ಹೇಮಂತ್, ಕುಮಾರ್, ಹಿತರಕ್ಷಣಾ ಸಮಿತಿ ಸುನಂದಾ ಜಯರಾಂ, ಕೆ.ಬೋರಯ್ಯ, ಚಂದ್ರಶೇಖರ್, ಕನ್ನಡಸೇನೆ ಮಂಜು, ದಸಂಸ ಕೃಷ್ಣ, ಅಂಬುಜಮ್ಮ ಇತರರಿದ್ದರು.

ವಿಶ್ವಕರ್ಮ ಮಹಾಸಭಾ ಮೆರವಣಿಗೆ

ಮಂಡ್ಯ: ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರ ಹಾಗೂ ನೀರು ಬಿಡಲು ಆದೇಶಿಸಿರುವ ಕಾವೇರಿ ನದಿ ನೀರು ನಿಯಂತ್ರಣ ಸಮಿತಿ ವಿರುದ್ಧ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಕಾರ್ಯಕರ್ತರು ಮಂಡ್ಯದಲ್ಲಿ ಮೆರವಣಿಗೆ ನಡೆಸಿದರು.

ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಿಂದ ಖಾಲಿ ಕೊಡ ಹಿಡಿದು ಮೆರವಣಿಗೆ ಹೊರಟು, ಕೇಂದ್ರ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗುತ್ತಾ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಧರಣಿ ಸ್ಥಳಕ್ಕೆ ತೆರಳಿ ಧರಣಿ ಬೆಂಬಲಿಸಿದರು. ವಿಧಾನಪರಿಷತ್ ಸದಸ್ಯ ಹಾಗೂ ವಿಶ್ವಕರ್ಮ ಮಹಾಸಭಾ ರಾಜ್ಯಾಧ್ಯಕ್ಷ ಕೆ.ಪಿ.ನಂಜುಂಡಿ ಮಾತನಾಡಿ, ಕಾವೇರಿ ನದಿ ಉಗಮ ಕರ್ನಾಟಕವಾದರೂ ನೀರನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದರೆ ಲೋಪ ಇದೆ. ಅದನ್ನು ಸರಿಪಡಿಸುವ ಕೆಲಸ ಆಗಬೇಕು. ರೈತ ಪ್ರಾಣ ಇದ್ದಂತೆ, ಅವರು ಸಂಕಷ್ಟದಲ್ಲಿದ್ದಾರೆ. ಅವರ ರಕ್ಷಣೆಗೆ ಪ್ರತಿಯೊಬ್ಬರೂ ಮುಂದಾಗಬೇಕಾಗಿದೆ ಎಂದರು.

ನಾಡಿನ ಜಲದ ವಿಚಾರದಲ್ಲಿ ಭಾಷೆ, ಜಾತಿ ಮೀರಿ ಹೋರಾಟ ಮಾಡಬೇಕು. ಕಾಯಕ ಸಮಾಜ ರೈತರನ್ನು ಅವಲಂಬಿಸಿ ಬದುಕು ನಡೆಸುತ್ತಿದೆ. ರೈತರು ಸಂಕಷ್ಟಕ್ಕೆ ಸಿಲುಕಿದಾಗ ಅವರ ಅವಲಂಬಿಸಿ ಬದುಕುತ್ತಿರುವ ಜನರು ಸಹ ಕಷ್ಟಪಡಬೇಕಾಗುತ್ತದೆ. ಕಾವೇರಿ ವಿಚಾರದಲ್ಲಿ ನ್ಯಾಯ ಸಿಗಲೇಬೇಕು. ಅದು ಹೋರಾಟದಿಂದ ಮಾತ್ರ ಸಾಧ್ಯ ಎಂಬುದನ್ನು ಅರಿಯಬೇಕಾಗಿದೆ ಎಂದು ಹೇಳಿದರು.

ಕಾವೇರಿ ನದಿ ನೀರಿನ ವಿಚಾರದಲ್ಲಿ ಕರ್ನಾಟಕ ರಾಜ್ಯಕ್ಕೆ ನಿರಂತರ ಅನ್ಯಾಯ ಆಗುತ್ತಿದ್ದು, ಸಮಿತಿ, ಪ್ರಾಧಿಕಾರ, ನ್ಯಾಯಾಲಯದ ಆದೇಶಗಳು ರೈತರ ನೋವಿಗೆ ಮತ್ತಷ್ಟು ಸಂಕಟ ತರುತ್ತಿವೆ. ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ಸ್ಥಗಿತ ಮಾಡಬೇಕು. ಕರ್ನಾಟಕ ಸರ್ಕಾರ ದೃಢ ನಿಲುವು ತೆಗೆದುಕೊಂಡು ಸರ್ವೋಚ್ಚ ನ್ಯಾಯಾಲಯಕ್ಕೆ ವಾಸ್ತವಾಂಶ ಮನವರಿಕೆ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಎಣ್ಣೆಹೊಳೆಕೊಪ್ಪಲಲ್ಲಿ ಗುಡ್ಡಗಾಡು ಓಟ ಸ್ಪರ್ಧೆಗೆ ಚಾಲನೆ



ಪಾಂಡವಪುರ, ಸೆ.28– ತಾಲೂಕಿನ ಎಣ್ಣೆಹೊಳೆಕೊಪ್ಪಲು ಗ್ರಾಮದಲ್ಲಿ ಗುಡ್ಡಗಾಡು ಓಟ ಸ್ಪರ್ಧೆಗೆ ಶ್ರೀಶಂಭುಲಿಂಗೇಶ್ವರ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಪ್ರೊ.ಎಂ.ಪಂಚಲಿಂಗೇಗೌಡ ಚಾಲನೆ ನೀಡಿದರು.

ತಾಲೂಕಿನ ಜಯಂತಿ ನಗರದ ಶ್ರೀ ಶಂಭುಲಿಂಗೇಶ್ವರ ಶಿಕ್ಷಣ ಸಂಸ್ಥೆ ಆವರಣದಲ್ಲಿ ಜಿಲ್ಲಾ ಮಟ್ಟದ ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟದ ಅಂಗವಾಗಿ ಜಿಲ್ಲಾ ಮಟ್ಟದ ಗುಡ್ಡಗಾಡು ಓಟದ ಸ್ಪರ್ಧೆ ನಡೆಯಿತು. ಸ್ಪರ್ಧೆಯಲ್ಲಿ ಗಂಡು ಮಕ್ಕಳಿಗೆ 6 ಕಿಮೀ ಮತ್ತು ಹೆಣ್ಣು ಮಕ್ಕಳಿಗೆ 4 ಕಿಮೀ ದೂರ ನಿಗದಿಪಡಿಸಲಾಗಿತ್ತು. 100ಕ್ಕೂ ಅಧಿಕ ಮಂದಿ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದರು.

ವಿಜೇತರ ವಿವರ: ಗುಡ್ಡಗಾಡು ಓಟದ ಸ್ಪರ್ಧೆಯ ಹೆಣ್ಣು ಮಕ್ಕಳ ವಿಭಾಗದಲ್ಲಿ ಮಂಡ್ಯದ ಮಾಂಡವ್ಯ ಪಿಯು ಕಾಲೇಜಿನ ಮಂಧಾರ ಮೈತ್ರಿ ಡಿ.ಆರ್(ಪ್ರಥಮ), ನಾಗಮಂಗಲದ ಬಿಜಿಎಸ್ ಪಿಯು ಕಾಲೇಜಿನ ಸ್ಫೂರ್ತಿ(ದ್ವಿತೀಯ), ಪಾಂಡವಪುರ ವಿಜಯ ಕಾಲೇಜಿನ ಐಶ್ವರ್ಯ(ತೃತೀಯ), ನಾಗಮಂಗಲದ ಎಸ್‌ಜಿಎಸ್ ಪಿಯು ಕಾಲೇಜಿನ ಶಿಲ್ಪ (ನಾಲ್ಕನೇ), ನಾಗಮಂಗಲದ ಬಿಜಿಎಸ್ ಪಿಯು ಕಾಲೇಜಿನ ವರ್ಷ(ಐದನೇ) ಹಾಗೂ ಸಂಜನಾ ಬಿ.ಎಸ್(ಆರನೇ) ಸ್ಥಾನ ಪಡೆದರು.

ಬಾಲಕರ ವಿಭಾಗ: ನಾಗಮಂಗಲದ ಎಸ್‌ಜಿಎಸ್ ಪಿಯು ಕಾಲೇಜಿನ ನಾಗರಾಜು (ಪ್ರಥಮ), ಪಾಂಡವಪುರ ಎಸ್‌ಎಸ್‌ಇಟಿ ಪಿಯು ಕಾಲೇಜಿನ ಮಹಾನಂದೀಶ (ದ್ವಿ), ಪಾಂಡವಪುರ ವಿಜಯ ಪಿಯು ಕಾಲೇಜಿನ ಪೃಥ್ವಿರಾಜ್(ತೃತೀಯ), ಮದ್ದೂರಿನ ಭಾರತಿ ಕಾಲೇಜಿನ ಭುವನ್ (ನಾಲ್ಕನೇ), ನಾಗಮಂಗಲದ ಬಿಜಿಎಸ್ ಪಿಯು ಕಾಲೇಜಿನ ಹೇಮಂತ್(ಐದನೇ) ಹಾಗೂ ನಾಗಮಂಗಲದ ಬಿಜಿಎಸ್ ಪಿಯು ಕಾಲೇಜಿನ ಗಗನ್‌ಗೌಡ(ಆರನೇ) ಸ್ಥಾನ ಪಡೆದರು.

ಪ್ರೊ.ಎಂ.ಪಂಚಲಿಂಗೇಗೌಡ ಮಾತನಾಡಿ, ಜಿಲ್ಲಾಮಟ್ಟದ ಕ್ರೀಡಾಕೂಟದ ಯಶಸ್ವಿಗೆ ಶ್ರಮಿಸಿದ ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ ಸೇರಿದಂತೆ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ದೈಹಿಕ ಶಿಕ್ಷಣ ಪರಿವೀಕ್ಷಕ, ದೈಹಿಕ ಶಿಕ್ಷಕರಾದ ಮಂಜುನಾಥ್, ಶಿವಕುಮಾರ್, ಗುರುಮೂರ್ತಿ ಸೇರಿದಂತೆ ಹಲವರಿದ್ದರು.

ಭೂಮಿತಾಯಿ ಹೋರಾಟ ಸಮಿತಿ ಪ್ರತಿಭಟನೆ



ಶ್ರೀರಂಗಪಟ್ಟಣ, ಸೆ.28– ಕೆಆರ್‌ಎಸ್‌ನಲ್ಲಿ ನೀರಿಲ್ಲದಿದ್ದರೂ ತಮಿಳುನಾಡಿಗೆ ನೀರು ಹರಿಸುವಂತೆ ಆದೇಶ ನೀಡಿರುವುದು ಹಾಸ್ಯಾಸ್ಪದ ಎಂದು ಆರೋಪಿಸಿ ಭೂಮಿತಾಯಿ ಹೋರಾಟ ಸಮಿತಿ ಸದಸ್ಯರು ಕೇಕೆ ಹಾಕುವ ಮೂಲಕ ಪ್ರತಿಭಟನೆ ನಡೆಸಿದರು.

ಸಮಿತಿ ಅಧ್ಯಕ್ಷ ಕೃಷ್ಣೇಗೌಡ ಹಾಗೂ ರೈತ ಮುಖಂಡ ಕೆ.ಎಸ್.ನಂಜುಂಡೇಗೌಡರ ನೇತೃತ್ವದಲ್ಲಿ ಪಟ್ಟಣದ ಕುವೆಂಪು ವೃತ್ತದ ಬಳಿ ಮೈಸೂರು–ಬೆಂಗಳೂರು ಹೆದ್ದಾರಿ ತಡೆದ ನೂರಾರು ರೈತರು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಕಾವೇರಿ ನಂಬಿ ನಮ್ಮ ಪೂರ್ವಿಕರ ಬಳಿಕ ನಾವೂ ಕೂಡ ವ್ಯವಸಾಯ ಮಾಡುತ್ತಾ ಜೀವನ ನಡೆಸುತ್ತಿದ್ದೇವೆ. ಈ ಬಾರಿ ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಮಳೆಯಾಗದ ಕಾರಣ ಅಣೆಕಟ್ಟೆ ಬರಿದಾಗಿದೆ. ಹೀಗಿದ್ದರೂ ತಮಿಳುನಾಡಿಗೆ ನೀರು ಹರಿಸುವಂತೆ ಒತ್ತಡ ಹೇರುತ್ತಿರುವುದು ಸರಿಯಲ್ಲ. ಅಲ್ಲದೇ ಒಮ್ಮೆ ನೀರು ಬಿಟ್ಟಿಲ್ಲ, ಮತ್ತೊಮ್ಮೆ ನೀರು ಬಿಟ್ಟಿದ್ದೇವೆ ಎಂದು ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳು ಹೇಳಿಕೆ ನೀಡುತ್ತಿರುವುದು ಹಾಸ್ಯಾಸ್ಪದದಿಂದ ಕೂಡಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಎಂ.ವಿ.ಕೃಷ್ಣ, ಮಹಾಲಿಂಗು, ಶಿವರಾಜು, ಪುಟ್ಟಣ್ಣ, ಸಿದ್ದಪ್ಪ ಶ್ರೀನಿವಾಸ್, ಬಾಬು, ರವಿಲಕ್ಷ್ಮಣ, ನಾಗೇಂದ್ರ, ನಾಗರಾಜು, ದೇವರಾಜು, ಸೂರಿ, ಮಹದೇವು, ಮಹೇಶ್ ಸೇರಿದಂತೆ ಇತರರಿದ್ದರು.

ಇಂದಿನ ಕರ್ನಾಟಕ ಬಂದ್‌ಗೆ ನೈತಿಕ ಬೆಂಬಲ



ಕೆ.ಆರ್.ಪೇಟೆ, ಸೆ.28– ನಾಳಿನ ಕರ್ನಾಟಕ ಬಂದ್ ಬೆಂಬಲಿಸಿ ಕೆ.ಆರ್.ಪೇಟೆ ಬಂದ್ ಮಾಡುವುದಿಲ್ಲ. ಬದಲಿಗೆ ನೈತಿಕ ಬೆಂಬಲ ನೀಡಿ ಬಂಡಿಹೊಳೆ ಬಳಿ ಹೇಮಾವತಿ ನದಿಗೆ ಇಳಿದು ಪ್ರತಿಭಟನೆ ನಡೆಸಲಾಗುವುದು. ಬಳಿಕ ಪಟ್ಟಣದ ತಹಸೀಲ್ದಾರ್ ಕಚೇರಿವರೆಗೆ ಬೈಕ್ ರ್‍ಯಾಲಿ ನಡೆಸಿ ಮನವಿ ಸಲ್ಲಿಸಲಾಗುವುದು ಎಂದು ಕಾವೇರಿ ಹೇಮಾವತಿ ಹಿತರಕ್ಷಣಾ ಸಮಿತಿ ತಿಳಿಸಿದೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಸಮಿತಿ ಸಂಚಾಲಕ ಶಂಕರ್, ಈಗಾಗಲೇ ಸೆ.26ರಂದು ಕನ್ನಡಪರ, ರೈತ, ಪ್ರಗತಿಪರ, ದಲಿತಪರ ಸಂಘಟನೆಗಳ ನೇತೃತ್ವದಲ್ಲಿ ನಡೆದ ಕೆ.ಆರ್.ಪೇಟೆ ಬಂದ್ ಯಶಸ್ವಿಯಾಗಿದೆ. ಹೀಗಾಗಿ ಸೆ.29 ರಂದು ಕನ್ನಡ ಚಳವಳಿಗಾರ ವಾಟಾಳ್ ನಾಗರಾಜ್ ಕರೆ ನೀಡಿರುವ ಕರ್ನಾಟಕ ಬಂದ್‌ಗೆ ನೈತಿಕ ಬೆಂಬಲ ಬೆಂಬಲವಿದೆಯೇ ಹೊರತು, ಬಂದ್ ನಡೆಸದಿರಲು ತೀರ್ಮಾನಿಸಲಾಗಿದೆ ಹೀಗಾಗಿ ಎಂದಿನಂತೆ ಪಟ್ಟಣದಲ್ಲಿ ವ್ಯಾಪಾರ ವಹಿವಾಟು ನಡೆಯಲಿದೆ ಎಂದರು. ಅಲ್ಲದೇ ಸಮಿತಿಯಿಂದ ಹೇಮಾವತಿ ನದಿಗೆ ಇಳಿದು ಪ್ರತಿಭಟನೆ ನಡೆಸಿ, ಬೈಕ್ ರ್‍ಯಾಲಿ ಮೂಲಕ ಪಟ್ಟಣಕ್ಕೆ ಆಗಮಿಸಿ ತಮಿಳುನಾಡಿಗೆ ನೀರು ಹರಿಸದಂತೆ ತಹಸೀಲ್ದಾರ್‌ಗೆ ಮನವಿ ಸಲ್ಲಿಸಲಾಗುವುದು.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಹಾಗೂ ಹೈಕೋರ್ಟ್‌ನಲ್ಲಿ ಸಮರ್ಥವಾಗಿ ವಾದ ಮಂಡಿಸಲು ವಿಫಲವಾಗಿರುವ ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಹರಿಸುವ ಮೂಲಕ ರೈತರ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ ಎಂದು ಆರೋಪಿಸಿದರು.

ಗೊರೂರು ಜಲಾಶಯ ವ್ಯಾಪ್ತಿಯ ಹಾಸನ, ತುಮಕೂರು, ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳ ಕೆರೆ ಕಟ್ಟೆಗಳು ನೀರಿಲ್ಲದೇ ಬರಿದಾಗಿದ್ದು, ಅವುಗಳನ್ನು ತುಂಬಿಸಲು ಮುಂದಾಗದ ರಾಜ್ಯ ಸರ್ಕಾರ ಹಾಗೂ ನೀರಾವರಿ ಇಲಾಖೆ ಅಧಿಕಾರಿಗಳು ರಾತ್ರೋರಾತ್ರಿ ಕದ್ದುಮುಚ್ಚಿ ನಮ್ಮ ಹೇಮಾವತಿ ಜಲಾಶಯದಿಂದ ಕೆಆರ್‌ಎಸ್‌ಗೆ ನೀರು ಹರಿಸುತ್ತಿದ್ದಾರೆ ಎಂದು ದೂರಿದರು.

ತಾಲೂಕಿನ ಹೇಮಾವತಿ ಅಚ್ಚುಕಟ್ಟು ಪ್ರದೇಶದ ರೈತರು ಹೇಮಾವತಿ ಚಲೋ ಚಳವಳಿ ಹಮ್ಮಿಕೊಂಡು ಗೊರೂರು ಜಲಾಶಯಕ್ಕೆ ಮುತ್ತಿಗೆ ಹಾಕಿ ಉಗ್ರ ಹೋರಾಟ ಮಾಡುತ್ತೇವೆ. ನಮ್ಮ ತಾಳ್ಮೆಗೂ ಒಂದು ಮಿತಿಯಿದೆ. ರೈತರ ತಾಳ್ಮೆಯ ಕಟ್ಟೆಯು ಒಡೆದರೆ ಯಾವ ಸರ್ಕಾರವೂ ಉಳಿಯುವುದಿಲ್ಲ ಎಂಬ ಸತ್ಯವನ್ನು ಕಾಂಗ್ರೆಸ್ ಸರ್ಕಾರವು ತಿಳಿಯಬೇಕು ಎಂದು ಎಚ್ಚರಿಕೆ ನೀಡಿದರು.

ಕೆ.ಆರ್.ಪೇಟೆ ಬಂದ್ ಇಲ್ಲ: ಕಾವೇರಿ ಹೇಮಾವತಿ ಹಿತರಕ್ಷಣಾ ಸಮಿತಿ ಸ್ಪಷ್ಟನೆ

ಈ ವೇಳೆ ಕರವೇ ಸ್ವಾಭಿಮಾನಿ ಸೇನೆ ತಾಲೂಕು ಅಧ್ಯಕ್ಷ ಸಮೀರ್, ಗೌರವಾಧ್ಯಕ್ಷ ಎ.ಸಿ.ಕಾಂತರಾಜು, ಕರವೇ ಪದವೀಧರ ಘಟಕದ ತಾಲೂಕು ಅಧ್ಯಕ್ಷ ಸಿ.ಬಿ.ಚೇತನಕುಮಾರ್, ಮದನ್, ಕರ್ನಾಟಕ ರಕ್ಷಣಾ ಸೇನೆಯ ತಾಲೂಕು ಅಧ್ಯಕ್ಷ ಪ್ರಶಾಂತ್, ಉಪಾಧ್ಯಕ್ಷ ಪೃಥ್ವಿ, ಜಯ ಕರ್ನಾಟಕ ಸಂಘಟನೆಯ ಕೆ.ಎಲ್.ಮಹೇಶ್, ಮಂಗಳಮ್ಮ, ಮಧುಶ್ರೀ, ಒಕ್ಕಲಿಗರ ಸಂಘಟನೆಯ ಮಹಿಳಾ ವಿಭಾಗದ ತಾಲೂಕು ಅಧ್ಯಕ್ಷೆ ಪ್ರೇಮ, ಉಪಾಧ್ಯಕ್ಷೆ ಮಧುಶ್ರೀ ಸೇರಿದಂತೆ ಇನ್ನಿತರರಿದ್ದರು.

ಕೃಷಿತಜ್ಞ ಸ್ವಾಮಿನಾಥನ್ ನಿಧನಕ್ಕೆ ಸಂತಾಪ

ದೇಶದ ಆರ್ಥಿಕ ಹಾಗೂ ಕೃಷಿ ತಜ್ಞ ಡಾ.ಸ್ವಾಮಿನಾಥನ್ ನಿಧನಕ್ಕೆ ಕಂಬನಿ ಮಿಡಿದ ರೈತ ಹಾಗೂ ಪ್ರಗತಿಪರ ಸಂಘಟನೆಗಳು, ಕೇಂದ್ರ ಸರ್ಕಾರಕ್ಕೆ ಸ್ವಾಮಿನಾಥನ್ ಅವರ ಸಲ್ಲಿಸಿರುವ ರೈತ ಪರವಾದ ವರದಿ ಜಾರಿಗೊಳಿಸುವ ಮೂಲಕ ಅಗಲಿದ ಕೃಷಿ ತಜ್ಞನಿಗೆ ಗೌರವ ನೀಡಬೇಕು ಎಂದು ಒತ್ತಾಯಿಸಿದರು.

ತಮಿಳುನಾಡಿನಿಂದ ದಿಕ್ಕು ತಪ್ಪಿಸುವ ಕೆಲಸ: ಡಾ.ಚಿಕ್ಕರಂಗೇಗೌಡ



ಮಂಡ್ಯ, ಸೆ.28– ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ತಮಿಳುನಾಡು ನಿರಂತರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದು, ಕೇಂದ್ರ ಸರ್ಕಾರ ಮತ್ತು ನ್ಯಾಯಾಂಗ ವ್ಯವಸ್ಥೆಯಲ್ಲಿ ಹಸ್ತಕ್ಷೇಪ ಮಾಡುತ್ತಿದೆ ಎಂದು ಇತಿಹಾಸ ಸಂಶೋಧಕ ತಲಕಾಡು ಡಾ.ಚಿಕ್ಕರಂಗೇಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಗುರುವಾರ ನಗರದಲ್ಲಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಧರಣಿಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ತಮಿಳುನಾಡಿಗೆ ಕರ್ನಾಟಕದ ಹಳೇ ಮೈಸೂರು ಭಾಗ, ಆಂಧ್ರಪ್ರದೇಶದ ದಕ್ಷಿಣ ಭಾಗ, ಕೇರಳ ಸೇರಿ 5 ಜಲಮೂಲಗಳಿವೆ. ಇದನ್ನು ಮರೆಮಾಚಿ ಪ್ರಾಧಿಕಾರದ ಎದುರು ಕೇವಲ ಕರ್ನಾಟಕದ ನೀರಿನ ಹಕ್ಕನ್ನು ಮಾತ್ರ ಪ್ರತಿಪಾದಿಸುತ್ತಿದೆ ಎಂದರು.

ಮೂರನೇ ಒಂದರಷ್ಟು ಅರಣ್ಯ ಸಂರಕ್ಷಿಸದೆ ಕಾವೇರಿ ಜಲಾನಯನ ವ್ಯಾಪ್ತಿಯಲ್ಲಿ ನೀರಾವರಿ ಪ್ರದೇಶ ವಿಸ್ತರಣೆ ಮಾಡಿಕೊಂಡಿದೆ. ಬೆಂಗಳೂರಿನ ಯಲಹಂಕಕ್ಕೆ ಕಾವೇರಿ ನೀರು ನೀಡುವ ಯೋಜನೆಗೆ ಕಾವೇರಿ ವ್ಯಾಪ್ತಿಗೆ ಸದರಿ ಪ್ರದೇಶ ಬರುವುದಿಲ್ಲ ಎಂದು ಅಡ್ಡಗಾಲು ಹಾಕಿದ್ದರು. ಆದರೆ ಆಂಧ್ರ ಪ್ರದೇಶದಿಂದ ಚೆನ್ನೈಗೆ ಕೃಷ್ಣ ನೀರನ್ನು ಪಡೆದಿದ್ದಾರೆ. ಪಶ್ಚಿಮಘಟ್ಟ ಅರಣ್ಯ ವ್ಯಾಪ್ತಿ ನಿರ್ವಹಣೆಯಲ್ಲಿ ಕರ್ನಾಟಕ, ಕೇರಳ ಮಹಾರಾಷ್ಟ್ರ ರಾಜ್ಯಗಳು ಕೋಟ್ಯಾಂತರ ಹಣದಿಂದ ಮಾಡುತ್ತಿವೆ. ಆದರೆ ಏನೂ ಕೊಡುಗೆ ನೀಡದ ತಮಿಳುನಾಡು ಹೆಚ್ಚಿನ ನೀರನ್ನು ಪಡೆಯುತ್ತಿದೆ ಎಂದರು.

ತಮಿಳುನಾಡಿನಲ್ಲಿ ಬೇಸಾಯದ ಭೂಮಿ ಶ್ರೀಮಂತರ ಬಳಿ ಇದೆ. ಅವರು ತಮ್ಮ ಮನೆಗಳಲ್ಲಿರುವ ಜೀತಗಾರರನ್ನು ಕಾವೇರಿ ಹೋರಾಟಕ್ಕೆ ಕರೆ ತಂದು ಸತ್ತ ಹೆಗ್ಗಣ ತಿನ್ನಿಸುವ ಚಳವಳಿ ಮಾಡಿದ್ದಾರೆ. ಅಮಾಯಕರನ್ನು ಹೋರಾಟಕ್ಕೆ ಬಳಕೆ ಮಾಡಿಕೊಳ್ಳಲಾಗಿದ್ದು, ಇದೊಂದು ಮಾನವ ಹಕ್ಕಿನ ಉಲ್ಲಂಘನೆ ಪ್ರಕರಣ ಎಂದು ಹೇಳಿದರು.

ಕಾವೇರಿ ವಿಚಾರ ಕರ್ನಾಟಕ ಮತ್ತು ತಮಿಳುನಾಡಿನ ಸಂಘರ್ಷಕ್ಕೆ ಎಡೆಮಾಡಿಕೊಟ್ಟಿದ್ದು 1118 ವರ್ಷಗಳ ಹಿಂದೆ ಎಂಬ ಸತ್ಯ ತಿಳಿಯಬೇಕಾಗಿದೆ. 904 ಮತ್ತು 905ನೇ ಇಸವಿಯಲ್ಲಿ ಪಾಂಡವಪುರ ತಾಲೂಕಿನ ಸೀತಾಪುರದ ಬಳಿ ತಲಕಾಡು ಗಂಗರು ಕಾವೇರಿ ನದಿಗೆ ಸಣ್ಣ ಪ್ರಮಾಣದ ಅಣೆಕಟ್ಟು ನಿರ್ಮಾಣ ಮಾಡಿದ್ದರು. ತಮಿಳುನಾಡಿನಲ್ಲಿ ಅದಾಗಲೇ ಕಾವೇರಿ ನದಿಗೆ ಅಣೆಕಟ್ಟು ನಿರ್ಮಾಣ ಮಾಡಿಕೊಂಡಿದ್ದ ಚೋಳರು ಇದಕ್ಕೆ ತಕರಾರು ಮಾಡಿದ್ದರು ಎಂದು ತಿಳಿಸಿದರು.

ತಲಕಾಡು ಗಂಗರ ನಂತರ ಟಿಪ್ಪುಸುಲ್ತಾನ್ ಅಣೆಕಟ್ಟೆ ನಿರ್ಮಾಣ ಯೋಜನೆ ಮಾಡಿದ್ದರು. ತರುವಾಯ ಮೈಸೂರು ರಾಜಮನೆತನದ ನಾಲ್ವಡಿ ಕೃಷ್ಣರಾಜ ಒಡೆಯರ್ ಜಲಾಶಯ ನಿರ್ಮಿಸಿದರು. ಇದಕ್ಕೆ ಒಡೆಯರ್ ಪತ್ನಿ ಪ್ರತಾಪಕುಮಾರಿ ಚಿನ್ನಾಭರಣ ನೀಡುವ ಮೂಲಕ ಸಹಕರಿಸಿದ್ದರು. ಕಾವೇರಿ ನೀರಿನ ವಿಚಾರದಲ್ಲಿ ವಾಸ್ತವಾಂಶ ಮಂಡಿಸಲು ಒಬ್ಬ ಕನ್ನಡಿಗ ವಕೀಲರು ಇಲ್ಲ. ಅಷ್ಟೇ ಅಲ್ಲದೆ ಇವರಿಗೆ ನೀರಿನ ಮೂಲದ ಬಗ್ಗೆ ಅರಿವಿಲ್ಲ. ಕೇವಲ ಅಂಕಿ ಅಂಶದ ಮೂಲಕ ವಾದ ಮಾಡುತ್ತಿದ್ದು, ಇದರಿಂದ ನ್ಯಾಯ ಸಿಗುತ್ತಿಲ್ಲ. ನೀರಾವರಿ ತಜ್ಞರು, ರೈತರು, ಕಾವೇರಿ ಹೋರಾಟಗಾರರ ಜೊತೆ ಸಮಗ್ರವಾಗಿ ಚರ್ಚಿಸಿ ಮಾಹಿತಿ ಪಡೆದು ನ್ಯಾಯಾಲಯದ ಮುಂದೆ ಸಮರ್ಥ ವಾದ ಮಂಡನೆಗೆ ಸರ್ಕಾರ ಮುಂದಾಗಬೇಕಾಗಿದೆ ಎಂದರು.

ಕಾವೇರಿ ವಿಚಾರದಲ್ಲಿ ಕಾನೂನಿನ ಮೂಲಕ ನ್ಯಾಯ ಸಿಗದು. ಪರ್ಯಾಯ ಮಾರ್ಗದ ಮೂಲಕ ಜಲ ಸಂರಕ್ಷಣೆಗೆ ಮುಂದಾಗಬೇಕು. ಜಲಾಶಯಗಳ ನೀರನ್ನು ಕೆರೆಗಳಿಗೆ ತುಂಬಿಸುವ ಕೆಲಸ ಆಗಬೇಕು. ಆ ಹಿನ್ನೆಲೆಯಲ್ಲಿ ಹೊಸಕೆರೆಗಳ ನಿರ್ಮಾಣದ ಜೊತೆಗೆ ಕೆರೆಗಳ ಹೂಳೆತ್ತಿಸಬೇಕು. ಒತ್ತುವರಿ ತೆರವು ಮಾಡಿ ಹೆಚ್ಚಿನ ನೀರು ಸಂಗ್ರಹವಾಗುವಂತೆ ಮಾಡುವ ಮೂಲಕ ಕರ್ನಾಟಕದ ಪಾಲಿನ ನೀರು ಸದ್ಬಳಕೆಗೆ ಸರ್ಕಾರ ಯೋಜನೆ ರೂಪಿಸಬೇಕೆಂದರು.

ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಲಿ

ಪ್ರಗತಿಪರ ಚಿಂತಕ, ಸಾಹಿತಿ ಎಸ್.ಎಲ್.ಮುಕುಂದರಾಜ್ ಮಾತನಾಡಿ, ಕಾವೇರಿ ವಿಚಾರದಲ್ಲಿ ಕರ್ನಾಟಕ ಮತ್ತು ತಮಿಳುನಾಡು ನಡುವೆ ಸಂಘರ್ಷ ನಡೆಯುತ್ತಿದ್ದು, ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ ಈ ವಿವಾದ ಬಗೆಹರಿಸುವ ಜವಾಬ್ದಾರಿ ವಹಿಸಲಿ ಎಂದು ಆಗ್ರಹಿಸಿದರು.

ಕೇಂದ್ರ ಸರ್ಕಾರ ಕರ್ನಾಟಕ ಮತ್ತು ತಮಿಳುನಾಡು ಸರ್ಕಾರಗಳಿಗೆ ಮಾತುಕತೆ ಮೂಲಕ ಒಂದು ನಿರ್ಣಯಕ್ಕೆ ಬನ್ನಿ ಎಂದು ತಿಳಿಸಬೇಕು. ಮಳೆ ಬರದ ಸಂಕಷ್ಟ ಪರಿಸ್ಥಿತಿಯಲ್ಲಿ ಬೇರೆ ರೀತಿಯ ನಿರ್ಣಯ ತೆಗೆದುಕೊಳ್ಳಲು ಸೂಚಿಸಬೇಕೆಂದು ಒತ್ತಾಯಿಸಿದರು.

ಬಂಗಾರಪ್ಪ ಅವರು ಮುಖ್ಯಮಂತ್ರಿ ಸ್ಥಾನ ಹೋದರೂ ಚಿಂತೆ ಇಲ್ಲ ಎಂದು ಕಾವೇರಿ ನೀರನ್ನು ಬಿಡುವುದೇ ಇಲ್ಲ ಎಂದು ಸುಗ್ರೀವಾಜ್ಞೆ ತಂದಿದ್ದರು. ಅದೇ ರೀತಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ತಮಿಳುನಾಡಿಗೆ ನೀರು ಬಿಡುವುದೇ ಇಲ್ಲ ಎಂಬ ನಿರ್ಣಯಕ್ಕೆ ಬರಬೇಕು. ಅವರು ಜೈಲಿಗೆ ಹೋದರೆ ಬಿಡಿಸಲು ಕನ್ನಡಿಗರು ಇದ್ದಾರೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹಾಗೆಲ್ಲ ಮಾಡಲು ಸಾಧ್ಯವೇ ಎಂದು ಪ್ರಶ್ನಿಸಿದರು.

ನಾಳೆ ನೇರ ಸಂದರ್ಶನ

ಮಂಡ್ಯ, ಸೆ.28– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಗೂ ಮೆ॥ ಸೂರ್ಯೋದಯ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ (Suryoday Small Finance Bank) ಸಂಸ್ಥೆಯ ಸಹಭಾಗಿತ್ವದಲ್ಲಿ ಉದ್ಯೋಗ ನೀಡುವ ಸಂಬಂಧ ಸೆಪ್ಟೆಂಬರ್ 30 ರಂದು ಬೆಳಿಗ್ಗೆ 10.30 ಗಂಟೆಗೆ ನೇರ ಸಂದರ್ಶನ ನಡೆಯಲಿದೆ. ಪಿ.ಯು.ಸಿ, ಐ.ಟಿ.ಐ (ಯಾವುದೇ ಟ್ರೇಡ್), ಡಿಪ್ಲೋಮಾ ಹಾಗೂ ಯಾವುದೇ ಪದವಿ ಉತ್ತೀರ್ಣರಾದ 21 ರಿಂದ 30 ವರ್ಷದೊಳಗಿನ ಆಸಕ್ತ ಅಭ್ಯರ್ಥಿಗಳು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಗೆ ತಮ್ಮ ಬಯೋಡೇಟಾದೊಂದಿಗೆ ಸಂದರ್ಶನಕ್ಕೆ ಹಾಜರಾಗಬಹುದಾಗಿದೆ ಎಂದು ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08232-295124, 8660061488 ಅಥವಾ 9164642684 ಸಂಖ್ಯೆಗಳಿಗೆ ಸಂಪರ್ಕಿಸಬಹುದಾಗಿದೆ ಎಂದು ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಪಾಧ್ಯಾಯರ ಸಂಘದಿಂದ ಶ್ಲಾಘನೀಯ ಕಾರ್ಯ



ಕೆ.ಆರ್.ನಗರ, ಸೆ.28– ಒತ್ತಡದ ನಡುವೆಯೂ ಸಹಕಾರ ಸಂಘವನ್ನು ಸ್ಥಾಪಿಸುವ ಮೂಲಕ ಕಷ್ಟದಲ್ಲಿರುವವರಿಗೆ ಸಾಲ ನೀಡುವ ಜೊತೆಗೆ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಿ ಗೌರವಧನ ನೀಡುತ್ತಿರುವುದು ಸಮಾಜ ಮೆಚ್ಚುವ ಕೆಲಸವಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣಪ್ಪ ಆರ್. ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಹಕಾರ ಸಂಘದ 7ನೇ ವರ್ಷದ ವಾರ್ಷಿಕ ಮಹಾಸಭೆ ಮತ್ತು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ನಿವೃತ್ತರಾದ ಸಹಕಾರಿ ಶಿಕ್ಷಕರಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಧಿಕಾರಕ್ಕಾಗಿ ಹಾತೊರೆಯುತ್ತಿರುವ ಇವತ್ತಿನ ಕಾಲದಲ್ಲಿ ಒಂದು ಸಹಕಾರ ಸಂಘವನ್ನು ಸ್ಥಾಪಿಸುವ ಮೂಲಕ ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಶಿಕ್ಷಕರು ಯಾವುದರಲ್ಲೂ ಕಮ್ಮಿ ಇಲ್ಲ ಎಂಬಂತೆ ತೋರುಸುತ್ತಿರುವುದು ಉತ್ತಮವಾದ ಕೆಲಸವಾಗಿದೆ ಎಂದರು.

ಸರ್ಕಾರಿ ಉಪಾಧ್ಯಾಯರ ಸಹಕಾರ ಸಂಘದ ಅಧ್ಯಕ್ಷ ತುಳಸಿ ರಾಮನಾಯಕ ಮಾತನಾಡಿ 230 ಜನ ಷೇರುದಾರರಿಂದ 65,000ಗಳ ಷೇರು ಹಣದಿಂದ ಸ್ಥಾಪಿತವಾದ ಸಂಘ ಇಂದು 92,99,477 ರಷ್ಟು ವ್ಯವಹಾರ ನಡೆಸಿದ್ದೇವೆ ಹಾಗೂ ಮೂರು ಲಕ್ಷಕ್ಕೂ ಹೆಚ್ಚು ನಿವ್ವಳ ಲಾಭಗೊಳಿಸಿರುವ ಹೆಗ್ಗಳಿಕೆ ನಮ್ಮದಾಗಿದ್ದು ಇದಕ್ಕೆಲ್ಲಾ ಸಹಕಾರ ನೀಡಿದ ನನ್ನ ಆಡಳಿತ ಮಂಡಳಿಯ ಸದಸ್ಯರನ್ನು ಅಭಿನಂದಿಸುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕರು ಮತ್ತು ರಾಜ್ಯ ಜಿಲ್ಲಾ ಪ್ರಶಸ್ತಿ ಪುರಸ್ಕೃತರಾದ ಶಿಕ್ಷಕರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು ಹಾಗೂ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಗೌರವಧನ ನೀಡಿ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮವನ್ನು ಉದ್ದೇಶಿಸಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿಜೆ ಅರುಣ್ ಕುಮಾರ್, ಕ್ಷೇತ್ರ ಸಮನ್ವಯ ಅಧಿಕಾರಿ ವೆಂಕಟೇಶ್, ಅಕ್ಷರ ದಾಸೋಹ ಪ್ರದೀಪ್ ಕುಮಾರ್, ನೌಕರರ ಸಂಘದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಶಂಕರೇಗೌಡ, ನಿಕಟಪೂರ್ವ ಅಧ್ಯಕ್ಷ ಮಂಜೇಗೌಡ ಸಂಘದ ಉಪಾಧ್ಯಕ್ಷ ಬಿ.ಆರ್. ಕುಮಾರ್, ತಾಲೂಕು ಸರ್ಕಾರಿ ನೌಕರ ಸಂಘದ ಉಪಾಧ್ಯಕ್ಷ ಪುರುಷೋತ್ತಮ್ ಮಾತನಾಡಿದರು. ವೇದಿಕೆಯಲ್ಲಿ ಫಣಿರಾಜ್, ಡಿ.ಟಿ.ಕುಮಾರ್, ಕೆ.ಟಿ.ಸ್ವಾಮಿ, ಬಿ.ಕಾಂತರಾಜ್, ಟಿ.ಜೆ.ಸತೀಶ್ ಕುಮಾರ್, ಎಂ.ಮನು, ಬಿ.ಆರ್. ರುಕ್ಮಿಣಿ, ಡಿ.ರಾಧಾ ಎಂಎನ್ ಮುಖ್ಯ ಕಾರ್ಯನಿರ್ವನಾಧಿಕಾರಿ ಎಂ.ವಿ.ರಮೇಶ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಸಹಕಾರ ಸಂಘದ ಏಳಿಗೆಗೆ ಪ್ರತಿ ಸದಸ್ಯರ ಸಹಕಾರ ಅಗತ್ಯ

ಸರಗೂರು, ಸೆ.28– ಸಹಕಾರ ಸಂಘದ ಏಳಿಗೆಗೆ ಪ್ರತಿ ಸದಸ್ಯರ ಸಹಕಾರ ಅಗತ್ಯ ಎಂದು ದಡದಹಳ್ಳಿ ಪಟ್ಟದ ಮಠಾಧ್ಯಕ್ಷರಾದ ಷಡಕ್ಷರ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಜೆಎಸ್‌ಎಸ್ ಶಿವಾನುಭವ ಮಂಟಪದಲ್ಲಿ ಸಂಘದ ಅಧ್ಯಕ್ಷ ಕೊತ್ತೇಗಾಲ ಎಲ್.ಶಿವಣ್ಣ ಅಧ್ಯಕ್ಷತೆಯಲ್ಲಿ ನಡೆದ ಸಂಘದ 2021–22ನೇ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ ಸ್ವಾಮೀಜಿಗಳು ಮಾತನಾಡಿ, ಸಹಕಾರ ಸಂಘದ ಏಳಿಗೆಗೆ ಪ್ರತಿ ಸದಸ್ಯರು ಸಹಕಾರ ನೀಡಬೇಕು. ಸಕಾಲಕ್ಕೆ ಪಡೆದ ಸಾಲ–ಬಡ್ಡಿಯನ್ನು ಪಾವತಿಸಲು ಕ್ರಮವಹಿಸಬೇಕು. ಸಹಕಾರ ಉತ್ತಮ ರೀತಿಯಲ್ಲಿ ನಡೆಯಲು ಪ್ರೋತ್ಸಾಹ ನೀಡಬೇಕು ಎಂದರು.

ಬಿಡಗಲು ಪಡವಲು ವಿರಕ್ತಮಠದ ಮಹಾದೇವಸ್ವಾಮೀಜಿ ಆಶೀರ್ವಚನ ನೀಡಿದರು, ಸಂಘದ ಅಧ್ಯಕ್ಷ ಎಲ್.ಶಿವಣ್ಣ ಮಾತನಾಡಿ ಷೇರುದಾರರಿಗೆ ನೆರವಾಗಲೆಂದು ಸಂಘವೂ ಸಾಲ ನೀಡುತ್ತಿದೆ. ಇದರಿಂದ ಜನರಿಗೆ ತುಂಬಾ ಅನುಕೂಲವಾಗಿದೆ. ಇದರೊಂದಿಗೆ ಸಂಘದ ಕಾರ್ಯ ಚಟುವಟಿಕೆಗಳಲ್ಲಿಯೂ ಭಾಗಿಯಾಗಬೇಕು. ಸಂಘದ ಏಳಿಗೆಗಾಗಿ ಶ್ರಮಿಸುತ್ತೇನೆ ಎಂದು ಹೇಳಿದರು. ವಾರ್ಷಿಕ ಸಭೆಯಲ್ಲಿ ದೇವನೂರು ಗುರುಸ್ವಾಮೀಜಿ, ಹಂಚೀಪುರ ತೋಂಟದಾರ್ಯ ಸ್ವಾಮೀಜಿ ಹಾಗೂ ಸಂಘದ ಮಾಜಿ ಅಧ್ಯಕ್ಷ ಡಿ.ಜಿ. ಶಿವರಾಜು, ಹಂಚೀಪುರ ಗಣಪತಿ ಮಾತನಾಡಿದರು.

ವೀರಶೈವ ಸಹಕಾರ ಸಂಘವನ್ನು ಮುಂದಿನ ದಿನಗಳಲ್ಲಿ ವೀರಶೈವ ಲಿಂಗಾಯತ ಪತ್ತಿನ ಸಹಕಾರ ಸಂಘವೆಂದು ನಾಮಕರಣ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಕಾರ್ಯದರ್ಶಿ ಶೇಖರ್, ವಾರ್ಷಿಕ ವರದಿ ಮಂಡಿಸಿದರು. ಸಂಘ ಉಪಾಧ್ಯಕ್ಷ ಮಂಜುಳಾ ದೇವಣ್ಣ, ನಿರ್ದೇಶಕರಾದ ಡಿ.ಜಿ.ಶಿವರಾಜು, ಹಂಚೀಪುರ ಗಣಪತಿ, ಎಸ್.ಎನ್.ಪ್ರಕಾಶ್, ಕೆ.ಬಸವರಾಜು, ಬಿ.ಜ್ಯೋತಿ ಶ್ರೀಕಂಠಸ್ವಾಮಿ, ಹಂಚೀಪುರ ನಟರಾಜ್, ಬಿ.ಮಾದಪ್ಪ, ಮಲ್ಲೇಶ್, ಕಾರ್ಯದರ್ಶಿ ಶೇಖರ್ ಸೇರಿದಂತೆ ಷೇರುದಾರರು ಹಾಜರಿದ್ದರು.



ಲಾಭದಲ್ಲಿ ಚಂದ್ರವಾಡಿ ಕೃಷಿ ಪತ್ತಿನ ಸಂಘ



ಮಲ್ಕುಂಡಿ, ಸೆ28– ಸಂಘದ ಸದಸ್ಯರ ಸಹಕಾರದಿಂದ ಚಂದ್ರವಾಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ 4.9 ಲಕ್ಷ ರೂ. ನಿವ್ವಳ ಲಾಭ ದೊರಕಿದೆ ಎಂದು ಚಂದ್ರವಾಡಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಎಂ.ಕೆಂಡಗಣ್ಣಪ್ಪ ತಿಳಿಸಿದ್ದಾರೆ.

ನಂಜನಗೂಡು ತಾಲೂಕಿನ ಚಂದ್ರವಾಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2022–23 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂಘದಲ್ಲಿ ಪಡೆದ ಸಾಲವನ್ನು ರೈತರು ಸಕಾಲಕ್ಕೆ ಮರುಪಾವತಿ ಮಾಡಿದರೆ ಮತ್ತಷ್ಟು ಲಾಭಾಂಶ ಕಾಣಬಹುದು. ಈಗಾಗಲೇ 77 ಸದಸ್ಯರಿಗೆ ಸಾಲ ನೀಡಲು ತೀರ್ಮಾನಿಸಲಾಗಿದೆ ಎಂದರು. ಸಂಘಕ್ಕೆ ಹೆಚ್ಚಿನ ಲಾಭಾಂಶ ಬಂದರೆ ಹಸು ಸಾಲ, ಯಶಸ್ವಿನಿ ಕಾರ್ಡ್‌ಗಳನ್ನು ಮಾಡಿಸಲಾಗುವುದು. ಸಹಕಾರ ಸಂಘದಲ್ಲಿ ರೈತರ ಅನುಕೂಲಕ್ಕಾಗಿ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡಲಾಗುವುದು. ಆದ್ದರಿಂದ ರೈತರು ಸುಸ್ತಿದಾರರಾಗದೆ ಸಕಾಲಕ್ಕೆ ಸಾಲ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಿ ಎಂದು ತಿಳಿಸಿದರು.

2022–23ನೇ ಸಾಲಿನ ಸಂಘದ ವಾರ್ಷಿಕ ವರದಿಯನ್ನು ಸಿಇಓ ಭಾರತಿ ಭಾಯಿ ಅವರು ಮಂಡಿಸಿದರು, ಉಪಾಧ್ಯಕ್ಷ ಕೂಸೇಗೌಡ, ನಿರ್ದೇಶಕರಾದ ವೀರಭದ್ರಪ್ಪ, ಚಿಕ್ಕವೆಂಕಟ ಶೆಟ್ಟಿ, ಹನುಮೇಶ, ಸುಧಾಮಣಿ, ರಾಮದಾಸಯ್ಯ, ಮಹದೇವಯ್ಯ, ಪುಟ್ಟಸ್ವಾಮಿ, ಅಂಗಡಿ ನಾಗಣ್ಣ, ಮಾದನಹಳ್ಳಿ ಮೂರ್ತಿ, ಕಡಬೂರು ನಂದೀಶ್ ಸೇರಿದಂತೆ ಪ್ರಮುಖರು ಹಾಜರಿದ್ದರು

ವಿಕಲಚೇತನರಿಗೆ ಬ್ಯಾಗ್, ಟೀ ಶರ್ಟ್ ವಿತರಣೆ

ಹುಣಸೂರು, ಸೆ.28– 45 ವಿಕಲಚೇತನರಿಗೆ ಸಮೃದ್ಧಿ ಸೇವಾ ಟ್ರಸ್ಟ್ ವತಿಯಿಂದ ಬ್ಯಾಗ್ ಮತ್ತು ಟೀ ಶರ್ಟ್‌ಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀಮತಿ ಸಿ.ವೀಣಾ, ದೇವರಾಜು, ಸವಿತಾ, ಅವಿನಾಶ್ ಪಾಲ್ಗೊಂಡಿದ್ದರು.



ಮೈಸೂರಿನ ಕುವೆಂಪುನಗರದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಮದ್ಯ ವರ್ತಕರ ಸಂಘದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ಕಳೆದ ಸೋಮವಾರ ನಡೆಯಿತು. ಈ ವೇಳೆ ಅಬಕಾರಿ ಜಂಟಿ ಆಯುಕ್ತ ಡಾ. ವಿಜಯಕುಮಾರ್, ಅಧ್ಯಕ್ಷ ಎಸ್. ಗುರುಸ್ವಾಮಿ, ಉಪಾಧ್ಯಕ್ಷರಾದ ಕೆ.ಪಿ. ಪರಮೇಶ್, ಎಲ್. ಭಾಸ್ಕರ್, ಪ್ರಧಾನ ಕಾರ್ಯದರ್ಶಿ ಆರ್. ಲಕ್ಷ್ಮಣ್, ಖಜಾಂಚಿ ಎಂ. ಶ್ರೀನಿವಾಸ, ನಿರ್ದೇಶಕರಾದ ಕೆ. ವಾಸುದೇವ್, ಎ.ಎಸ್. ನಿಂಗರಾಜು, ಸದಸ್ಯರಾದ ವಿ. ಲೋಕೇಶ್, ಬಸವರಾಜು, ಕುಮಾರ್, ಧನುಷ್ ಮತ್ತಿತರರು ಉಪಸ್ಥಿತರಿದ್ದರು.

ಉಚಿತ ತಪಾಸಣಾ ಶಿಬಿರ

ಮೈಸೂರು, ಸೆ. 28 –ಮೈಸೂರಿನ ಎನ್‌ಜೆಎಸ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಅ. 3ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 2.30 ರವರೆಗೆ ಅಶೋಕ ರಸ್ತೆಯಲ್ಲಿರುವ ಡಾ.ಗೌರಿರಮೇಶ್ ಮೊಳೆ ರೋಗ ಆಸ್ಪತ್ರೆಯಲ್ಲಿ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 99161 55453, 94487 38657 ಸಂಪರ್ಕಿಸಬಹುದು.

ಒಂದನೇ ಪುಟದಿಂದ

ಆಸ್ತಿ–ಪಾಸ್ತಿಗೆ ನಷ್ಟವಾದರೆ ಸಂಘಟಕರೇ ಹೊಣೆ

ಹಾಗೂ ಜನಸಾಮಾನ್ಯರ ಹಕ್ಕು ವಿರೋಧಿ ಎಂದು ಕೇರಳ ಉಚ್ಚ ನ್ಯಾಯಾಲಯವು ಎಐಆರ್–1997 ಕೇರಳ 291 (ಪೂರ್ಣ ಪೀಠ)ನ ತೀರ್ಪಿನಲ್ಲಿ ತಿಳಿಸಿದೆ. ಸರ್ವೋಚ್ಚ ನ್ಯಾಯಾಲಯ ಕೂಡ 1998ರಲ್ಲಿ ಸಿಪಿಐ(ಎಂ) ವರ್ಸಸ್ ಭರತ್‌ಕುಮಾರ್ ಪ್ರಕರಣದಲ್ಲಿ ಬಂದ್‌ಗೆ ಕರೆ ನೀಡುವುದು ಅಸಂವಿಧಾನಿಕ ಮತ್ತು ಕಾನೂನು ಬಾಹಿರ ಎಂದು ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ಬಂದ್‌ಗೆ ಕರೆ ನೀಡಿದ ಸಂದರ್ಭದಲ್ಲಿ ಆಗುವ ಆಸ್ತಿ–ಪಾಸ್ತಿ ನಷ್ಟಕ್ಕೆ ಅಂತಹ ಬಂದ್‌ಗಳ ಆಯೋಜಕರು ಮತ್ತು ಸಂಘಟಕರನ್ನು ನೇರ ಹೊಣೆಗಾರರನ್ನಾಗಿ ಮಾಡಿ ನಷ್ಟವನ್ನು ವಸೂಲಿ ಮಾಡಿ ಸರ್ಕಾರಕ್ಕೆ ಮರು ಪಾವತಿಸಲಾಗುವುದು. ಇದನ್ನು ಉಲ್ಲಂಘಿಸಿ ಬಂದ್ ಅಥವಾ ಮೆರವಣಿಗೆ ಹಮ್ಮಿಕೊಂಡಲ್ಲಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ಆಯುಕ್ತರು ಎಚ್ಚರಿಸಿದ್ದಾರೆ. ಈ ಹಿನ್ನೆಲೆ ಮೈಸೂರು ನಗರದಲ್ಲಿ ಯಾವುದೇ ರೀತಿಯ ಮೆರವಣಿಗೆಗೆ ಅವಕಾಶ ನೀಡಲು ಸಾಧ್ಯವಿಲ್ಲ. ಆದರೆ ರಾಜಕೀಯ ಪಕ್ಷಗಳು ಮತ್ತು ಸಂಘಟನೆಯವರು ಹಳೇ ಜಿಲ್ಲಾಧಿಕಾರಿ ಕಚೇರಿ ಬಳಿ ಧರಣಿ ಮಾಡಲು ಅವಕಾಶ ನೀಡಲಾಗಿದೆ ಎಂದು ಅವರು ತಿಳಿಸಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಮೈಸೂರು ನಗರದಲ್ಲಿ ಎರಡು ಸಾವಿರ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗುವುದು. ಪ್ರಮುಖ ಹಾಗೂ ಸೂಕ್ಷ್ಮ ಸ್ಥಳಗಳಲ್ಲಿ ಹೆಚ್ಚಿನ ನಿಗಾ ವಹಿಸಲಾಗುವುದು ಎಂದು ರಮೇಶ್ ತಿಳಿಸಿದ್ದಾರೆ.

ವ್ಯಾಪಕ ಬೆಂಬಲ

ಇದರಿಂದ ಕಳೆದ ಮೂರು ತಿಂಗಳಿಂದ ಪ್ರತಿ ದಿನ ಸಾವಿರಾರು ಕ್ಯುಸೆಕ್ ನೀರು ತಮಿಳುನಾಡಿಗೆ ಹರಿದು ಹೋಗುತ್ತಿದೆ. ಈ ಹಿನ್ನೆಲೆಯಲ್ಲಿ ತಮಿಳುನಾಡಿಗೆ ಕಾವೇರಿ ನೀರು ಬಿಡುತ್ತಿರುವ ಸರ್ಕಾರದ ಧೋರಣೆ ವಿರೋಧಿಸಿ ರೈತ ಹಾಗೂ ಕನ್ನಡ ಪರ ಸಂಘಟನೆಗಳು ಬೀದಿಗಿಳಿದು ಹೋರಾಟ ಆರಂಭಿಸಿವೆ. ಮಂಗಳವಾರ ಕರೆ ನೀಡಿದ್ದ 'ಬೆಂಗಳೂರು ಬಂದ್' ಯಶಸ್ವಿಯಾದ ತರುವಾಯ ಕಾವೇರಿ ನೀರು ಬಿಡದಂತೆ ಸರ್ಕಾರದ ಮೇಲೆ ಮತ್ತಷ್ಟು ಒತ್ತಡ ಹೇರಲು ರೈತ ಹಾಗೂ ಕನ್ನಡ ಪರ ಸಂಘಟನೆಗಳು 'ಕರ್ನಾಟಕ ಬಂದ್'ಗೆ ಕರೆ ನೀಡಿವೆ.

ಮೈಸೂರಿನಲ್ಲಿ ಕೂಡ ಕರ್ನಾಟಕ ಬಂದ್‌ಗೆ ಸಂಪೂರ್ಣ ಬೆಂಬಲ ವ್ಯಕ್ತವಾಗಿದೆ. ಈಗಾಗಲೇ ಹಲವು ಸಂಘಟನೆಗಳ ಜೊತೆ ಸಭೆಗಳನ್ನು ನಡೆಸಿರುವ ಕಾವೇರಿ ಕ್ರಿಯಾ ಸಮಿತಿ, ಬಂದ್‌ಗೆ ಬೆಂಬಲ ನೀಡುವಂತೆ ಮನವಿ ಮಾಡಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಹಲವು ಸಂಘ–ಸಂಸ್ಥೆಗಳು ಅಂಗಡಿ–ಮುಂಗಟ್ಟುಗಳನ್ನು ಮುಚ್ಚಿ ಸ್ವಯಂ ಪ್ರೇರಣೆಯಿಂದ ಬಂದ್ ಆಚರಣೆ ಮಾಡಲು ತೀರ್ಮಾನಿಸಿವೆ. ತಮಿಳುನಾಡಿಗೆ ಕಾವೇರಿ ನೀರು ಬಿಡುವುದನ್ನು ವಿರೋಧಿಸಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯ ಗೌರಿಪುರ ಗೇಟ್ ಹಾಗೂ ಗೆಜ್ಜಲಗೆರೆ ಬಳಿ ಹೆದ್ದಾರಿ ಬಂದ್ ಮಾಡಲಾಗುವುದು. ಜೊತೆಗೆ ರೈಲು ತಡೆ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘ ತಿಳಿಸಿದೆ.

ವ್ಯಾಪಕ ಬೆಂಬಲ: ನಾಳೆ ಕರೆ ನೀಡಿರುವ ಕರ್ನಾಟಕ ಬಂದ್‌ಗೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಸಂಪೂರ್ಣ ಬೆಂಬಲ ನೀಡಿದೆ ಎಂದು ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು ತಿಳಿಸಿದ್ದಾರೆ. ಮೈಸೂರಿನ ಕೈಗಾರಿಕೆಗಳು, ವ್ಯಾಪಾರಸ್ಥರು ಹಾಗೂ ವಾಣಿಜ್ಯೋದ್ಯಮಿಗಳು ವ್ಯಾಪಾರ–ವಹಿವಾಟು ಬಂದ್ ಮಾಡುವಂತೆ ಅವರು ಮನವಿ ಮಾಡಿದ್ದಾರೆ. 'ಕರ್ನಾಟಕ ಬಂದ್'ಗೆ ನಮ್ಮ ಸಂಪೂರ್ಣ ಬೆಂಬಲವಿದೆ ಎಂದು ದೇವರಾಜ, ಮಂಡಿ, ವಾಣಿವಿಲಾಸ ಮಾರುಕಟ್ಟೆಗಳ ಸಂಘಗಳ ಒಕ್ಕೂಟದ ಅಧ್ಯಕ್ಷ ಎಸ್.ಮಹದೇವ್ ಹಾಗೂ ಮೈಸೂರು ಸಂಘ–ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ತಿಳಿಸಿದ್ದಾರೆ. ತಮಿಳುನಾಡಿಗೆ ಕಾವೇರಿ ನೀರು ಬಿಡುತ್ತಿರುವ ರಾಜ್ಯ ಸರ್ಕಾರದ ಕ್ರಮ ವಿರೋಧಿಸಿ ಮೈಸೂರು ನಾಗರಿಕ ಸಾಂಸ್ಕೃತಿಕ ವೇದಿಕೆಯ ಕಾರ್ಯಕರ್ತರು ಶುಕ್ರವಾರ ಬೆಳಗ್ಗೆ ನ್ಯಾಯಾಲಯದ ಮುಂದಿನ ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಿದ್ದಾರೆ. ಮೈಸೂರು ಜಿಲ್ಲಾ ನೃತ್ಯ ನಿರ್ದೇಶಕರು, ನೃತ್ಯ ಕಲಾವಿದರ ಸಂಘ ಹಾಗೂ ವಾಣಿಯರ್ ಸಂಘಂನವರು 'ಕರ್ನಾಟಕ ಬಂದ್'ಗೆ ನಮ್ಮ ಸಂಪೂರ್ಣ ಬೆಂಬಲವಿದೆ ಎಂದು ತಿಳಿಸಿದ್ದಾರೆ.

ಕಾವೇರಿ ಹೋರಾಟಕ್ಕೆ ಸಂಪೂರ್ಣ ಬೆಂಬಲ ಸೂಚಿಸಿರುವ ಆರ್ಯ ವೈಶ್ಯ ಸಮಾಜದವರು ಸಂಜೆ 6 ಗಂಟೆಗೆ ಮೈಸೂರು ಅರಮನೆ ಉತ್ತರ ದ್ವಾರದಿಂದ ಗಾಂಧಿ ವೃತ್ತದ ತನಕ ಮೇಣದ ಬತ್ತಿ ಮೆರವಣಿಗೆ ಮಾಡಲು ತೀರ್ಮಾನಿಸಿದ್ದಾರೆ.

ಮೈಸೂರು ಅರಮನೆ ಆಂಜನೇಯಸ್ವಾಮಿ ದೇವಸ್ಥಾನದ ಮುಂದೆ ಜಮಾವಣೆಗೊಂಡ ಕಾವೇರಿ ಕ್ರಿಯಾ ಸಮಿತಿಯ ಕಾರ್ಯಕರ್ತರು ಬಂದ್ ಯಶಸ್ವಿಗೊಳಿಸಲು ಕೆಲವು ತೀರ್ಮಾನ ಕೈಗೊಂಡರು. ಬೆಳಗ್ಗೆ 6 ಗಂಟೆಯಿಂದಲೇ ಬೀದಿಗಿಳಿದು ಹೋರಾಟ ಆರಂಭಿಸಲು ನಿರ್ಧರಿಸಿದರು. ನಗರ ಹಾಗೂ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಪ್ರತಿಭಟನೆ ನಡೆಸಲು ನಿರ್ಧಾರ ಕೈಗೊಂಡರು. ನಂತರ ನಗರದಾದ್ಯಂತ ಸಂಚರಿಸಿ ಸ್ವಯಂ ಪ್ರೇರಣೆಯಿಂದ ಬಂದ್‌ಗೆ ಬೆಂಬಲ ನೀಡುವಂತೆ ಮನವಿ ಮಾಡಲು ತೀರ್ಮಾನಿಸಲಾಯಿತು. ಸುಮಾರು 11 ಗಂಟೆಗೆ ಅರಮನೆಯ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಸಾವಿರಾರು ಜನರೊಂದಿಗೆ ಜಿಲ್ಲಾಧಿಕಾರಿ ಕಚೇರಿ ತನಕ ಮೆರವಣಿಗೆಯಲ್ಲಿ ಸಾಗಿ ಮನವಿ ಪತ್ರ ನೀಡಲು ನಿರ್ಧಾರ ಕೈಗೊಳ್ಳಲಾಯಿತು.

'ಕರ್ನಾಟಕ ಬಂದ್'ಗೆ ಬೆಂಬಲ ನೀಡುವಂತೆ ಈ ವೇಳೆ ಕಾವೇರಿ ಕ್ರಿಯಾ ಸಮಿತಿ ಕಾರ್ಯಕರ್ತರು ದೇವರಾಜ ಅರಸ್ ರಸ್ತೆ, ಶಿವರಾಂಪೇಟೆ ಸೇರಿದಂತೆ ಇತರೆಡೆ ಭೇಟಿ ನೀಡಿ ಬಂದ್‌ಗೆ ಸ್ವಯಂ ಪ್ರೇರಣೆಯಿಂದ ಬೆಂಬಲ ನೀಡುವಂತೆ ಕರಪತ್ರ ವಿತರಿಸಿದರು. ಕಾವೇರಿ ಹೋರಾಟ ಯಶಸ್ವಿಗೊಳಿಸಲು ಸ್ವಯಂ ಪ್ರೇರಣೆಯಿಂದ ಅಂಗಡಿ–ಮುಂಗಟ್ಟು ಮುಚ್ಚುವಂತೆಯೂ ಮನವಿ ಮಾಡಿದರು.

ಕಾವೇರಿ ಕ್ರಿಯಾ ಸಮಿತಿ ಗೌರವಾಧ್ಯಕ್ಷರೂ ಆದ ಶಾಸಕ ಸಿ.ಎನ್.ಮಂಜೇಗೌಡ, ಅಧ್ಯಕ್ಷ ಎಸ್.ಜಯಪ್ರಕಾಶ್, ಉಪಾಧ್ಯಕ್ಷ ಸುರೇಶ್‌ಗೌಡ, ಮೂಗೂರು ನಂಜುಂಡಸ್ವಾಮಿ ಸೇರಿದಂತೆ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸಂಚಾರ ವ್ಯತ್ಯಯ ಸಾಧ್ಯತೆ: ಸಾರಿಗೆ ಸಂಸ್ಥೆ ಬಸ್‌ಗಳು ಎಂದಿನಂತೆ ಸಂಚರಿಸಲಿವೆ ಎಂದು ಹೇಳಲಾಗಿದೆಯಾದರೂ, ಹೋರಾಟದ ಬಿಸಿ ಹೆಚ್ಚಾದರೆ ಬಸ್ ಸಂಚಾರ ವ್ಯತ್ಯಯವಾಗಲಿದೆ. ಇನ್ನು ಆಟೋ, ಟ್ಯಾಕ್ಸಿ, ಓಲಾ, ಊಬರ್ ಅಸೋಸಿಯೇಷನ್ ಬೆಂಬಲ ನೀಡಿರುವುದರಿಂದ ಆಟೋ, ಟ್ಯಾಕ್ಸಿ ಸಿಗುವುದು ಅನುಮಾನವಾಗಿದೆ. ಖಾಸಗಿ ವಾಹನಗಳ ಓಡಾಟಕ್ಕೆ ಅಡ್ಡಿಯಿಲ್ಲ. ಆದರೆ ಬಂದ್‌ಗೆ ಕರೆ ನೀಡಿರುವ ಸಂಘಟನೆಗಳು ಸ್ವಯಂ ಪ್ರೇರಣೆಯಿಂದ ಬಂದ್‌ಗೆ ಬೆಂಬಲ ಕೋರಿದ್ದಾರೆ.

ಆಸ್ಪತ್ರೆ, ಮೆಡಿಕಲ್ ಸ್ಟೋರ್, ಹಾಲು ಮಾರಾಟಕ್ಕಿಲ್ಲ ಅಡ್ಡಿ

'ಕರ್ನಾಟಕ ಬಂದ್'ನಲ್ಲಿ ಕೆಲವೊಂದಕ್ಕೆ ವಿನಾಯಿತಿ ನೀಡಲಾಗಿದೆ. ಆಸ್ಪತ್ರೆ, ಮೆಡಿಕಲ್ ಸ್ಟೋರ್ ಹಾಗೂ ಹಾಲು ಮಾರಾಟಕ್ಕೆ ಅವಕಾಶ ನೀಡಲಾಗಿದೆ. ಇವುಗಳನ್ನು ಯಾವುದೇ ಕಾರಣಕ್ಕೂ ಬಂದ್ ಮಾಡಲಾಗುವುದಿಲ್ಲ. ಇದರಿಂದ ಜನರು ಆತಂಕಪಡುವ ಪ್ರಮೇಯವಿಲ್ಲ.

ಸರ್ಕಾರಿ ಕಚೇರಿ ತೆರೆದಿರುತ್ತವೆ

ಸರ್ಕಾರಿ ಕಚೇರಿಗಳು ಎಂದಿನಂತೆ ಶುಕ್ರವಾರ ಕಾರ್ಯ ನಿರ್ವಹಿಸಲಿವೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ. ಸದ್ಯದ ಮಟ್ಟಿಗೆ ಯಾವುದೇ ಅಹಿತಕರ ಘಟನೆಗಳು ನಡೆಯುವ ಬಗ್ಗೆ ಪೊಲೀಸ್ ಹಾಗೂ ಗುಪ್ತಚರ ದಳದ ವರದಿ ಬಂದಿಲ್ಲ. ಆದ ಕಾರಣ ಸರ್ಕಾರಿ ಕಚೇರಿಗಳು ಎಂದಿನಂತೆ ಕಾರ್ಯ ನಿರ್ವಹಿಸುತ್ತವೆ ಎಂದು ಅವರು ತಿಳಿಸಿದ್ದಾರೆ.

ಕಬಿನಿ ಜಲಾಶಯದ ಸುತ್ತ ನಿಷೇಧಾಜ್ಞೆ

ಕರ್ನಾಟಕ ಬಂದ್ ಹಿನ್ನೆಲೆ ಮೈಸೂರಿನ ಹೆಚ್.ಡಿ.ಕೋಟೆಯ ಕಬಿನಿ ಜಲಾಶಯದ ಸುತ್ತ ಮುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಹೆಚ್.ಡಿ. ಕೋಟೆ ತಾಲೂಕಿನ ಅಂತರಸಂತೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇಂದಿನಿಂದ ನಾಳೆ ಸಂಜೆ 5 ಗಂಟೆ ತನಕ ನಿಷೇದಾಜ್ಞೆ ಜಾರಿಗೊಳಿಸ ಲಾಗಿದೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಸಲುವಾಗಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ಜಿಲ್ಲಾಧಿ ಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಪರಿಸ್ಥಿತಿ ಆಧರಿಸಿ ಇತರೆ ನಿರ್ಧಾರ

ಸಂಚರಿಸುತ್ತವೆ. ಆದರೆ 'ಕರ್ನಾಟಕ ಬಂದ್' ಹಿನ್ನೆಲೆಯಲ್ಲಿ ಬಸ್‌ಗಳ ಸಂಚಾರವನ್ನು ಸ್ಥಗಿತಗೊಳಿಸಲಾಗುವುದು. ಆದರೆ ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳು ಎಂದಿನಂತೆ ಸಂಚರಿಸಲಿವೆ. ಒಂದು ವೇಳೆ ಏನಾದರೂ ವ್ಯತ್ಯಾಸವದರೆ ಪರಿಸ್ಥಿತಿ ನೋಡಿಕೊಂಡು ಬಸ್‌ಗಳ ಸಂಚಾರ ಸ್ಥಗಿತ ಮಾಡಲಾಗುವುದು. ಆದರೆ ಕೆಎಸ್‌ಆರ್‌ಟಿಸಿ ಸಿಬ್ಬಂದಿ ಕಡ್ಡಾಯವಾಗಿ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚನೆ ನೀಡಲಾಗಿದೆ ಎಂದು ಶ್ರೀನಿವಾಸ್ ತಿಳಿಸಿದ್ದಾರೆ.

ರುದ್ರಾಕ್ಷಿ ಮಾಲೆಯ ಚಿನ್ನ ಮಾರಿ ದಾಸೋಹ ಕಲ್ಪಿಸಿದ ಶಿವರಾತ್ರಿ ರಾಜೇಂದ್ರ ಶ್ರೀಗಳು ಮಹಾ ಸಂತರು

● ಮೈಸೂರು ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಬಣ್ಣನೆ ● ಜೆಎಸ್‌ಎಸ್ ವಿದ್ಯಾಪೀಠದ ನೌಕರರಿಂದ ರಾಜೇಂದ್ರ ಶ್ರೀಗಳ ಜಯಂತ್ಯೋತ್ಸವ ಆಚರಣೆ

ಮೈಸೂರು, ಸೆ.28(ಎಸ್‌ಬಿಡಿ)– ರುದ್ರಾಕ್ಷಿ ಮಾಲೆಯಲ್ಲಿನ ಚಿನ್ನವನ್ನು ಮಾರಾಟ ಮಾಡಿ, ಬಡ ವಿದ್ಯಾರ್ಥಿಗಳಿಗೆ ಅನ್ನ ಹಾಗೂ ಅಕ್ಷರ ದಾಸೋಹ ಕಲ್ಪಿಸಿದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು, ಸಮಾಜಕ್ಕೆ ಪ್ರೇರಣಾ ಶಕ್ತಿ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಹಾಗೂ ಸಹಕಾರ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸ್ಮರಿಸಿಕೊಂಡರು.



ಜೆಎಸ್‌ಎಸ್ ಮಹಾವಿದ್ಯಾಪೀಠದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ಮೈಸೂರಿನ ಜೆಎಸ್‌ಎಸ್ ಬಡಾವಣೆ 2ನೇ ಹಂತದಲ್ಲಿ ಗುರುವಾರ ಆಯೋಜಿಸಿದ್ದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 108ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉದಾತ್ತರಾಗಿದ್ದ ರಾಜೇಂದ್ರ ಶ್ರೀಗಳು ವಿದ್ಯಾರ್ಜನೆಗಿದ್ದ ನಿರ್ಬಂಧವನ್ನು ಎದುರಿಸಿ ನಿಂತು ಸಮಾಜದ ಎಲ್ಲ ವರ್ಗದವರಿಗೂ ವಿದ್ಯಾದಾನ ಮಾಡಿದರು. ಇಂತಹ ಸಂತರು ತೋರಿಸಿಕೊಟ್ಟ ಮಾರ್ಗದಲ್ಲಿ ಎಲ್ಲರೂ ಸಾಗಬೇಕು. ಬಸವಣ್ಣನ ಸಾಮೂಹಿಕ ವಿವಾಹದ ಪರಿಕಲ್ಪನೆಯನ್ನು ಸುತ್ತೂರು ಮಠ ಪಾಲಿಸುತ್ತಿದೆ ಎಂದರು.

ಮಾನವತಾವಾದ ಹೊರತುಪಡಿಸಿ ನನಗೆ ಯಾವ ಧರ್ಮ, ಜಾತಿಯ ಕಲ್ಪನೆಯೇ ನನಗಿಲ್ಲ. ಬುದ್ಧ, ಬಸವ ತತ್ವ ಹಾಗೂ ಸಂವಿಧಾನದ ಅಡಿಯಲ್ಲಿ ನಾನು ಬದುಕುತ್ತಿದ್ದೇನೆ. ಅಂತೆಯೇ ನಮ್ಮ ಮಕ್ಕಳನ್ನು ಜಾತಿ, ಮತ, ಪಂಥದಿಂದ ದೂರವಾಗಿಸಿ ವಿಶ್ವಮಾನವರನ್ನಾಗಿಸಬೇಕು. ಜಾತಿ ವಿನಾಶವಾಗಬೇಕಾದರೆ ರಕ್ತ ಸಂಬಂಧಗಳು ಬೆಳೆಯಬೇಕು. ಆಗ ಹುಟ್ಟುವಂತಹ ಮಗು ಜಾತಿ, ಧರ್ಮಗಳನ್ನು ಮೀರಿ ಬೆಳೆಯಲು ಸಾಧ್ಯವಿದೆ ಎಂದು ಅಭಿಪ್ರಾಯಿಸಿದರು.

ಬಸವಧರ್ಮದಲ್ಲಿ ತಾರತಮ್ಯಕ್ಕೆ ಅವಕಾಶವೇ ಇಲ್ಲ. ಇಂದಿಗೂ ವೀರಶೈವ ಧರ್ಮದಲ್ಲಿ ಮಹಿಳೆಯರಿಗೆ ಮುಕ್ತವಾದ ಸ್ವಾತಂತ್ರ್ಯವಿದೆ. ಅವರಿಗೆ ವಿಶೇಷವಾದ ಸ್ಥಾನಮಾನಗಳಿವೆ. ಬಹಳ ಮಾನವೀಯತೆಯಿಂದ ವರ್ತಿಸುತ್ತಾರೆ. ಇದು ಬಸವಣ್ಣ ಸಾಹಿತ್ಯ ಚಳುವಳಿ ಹಾಗೂ ಸಾವಿತ್ರಿಬಾಯಿ ಫುಲೆ ಅವರು ಹಾಕಿಕೊಟ್ಟ ಮಾರ್ಗದಿಂದ ಸಾಧ್ಯವಾಗಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಮಹಿಳೆಯರ ಸ್ಥಾನಮಾನಕ್ಕಾಗಿ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಎಲ್ಲರೂ ಸಮಾನದಿಂದ ಬದುಕಬೇಕೆಂಬ ಉದ್ದೇಶಕ್ಕಾಗಿ ಅಹರ್ನಿಶಿ ದುಡಿದರು. ಅವರು ಹಾಕಿದ ಮಹಿಳಾ ಸಮಾನತೆ ಬುನಾದಿಯಿಂದಲೇ ಇಂದು ರಾಜಕೀಯವಾಗಿಯೂ ಮೀಸಲಾತಿ ಸಿಗುವಂತಾಗಿದೆ.

ವರುಣ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಸಮಾಜದ ಎಲ್ಲಾ ಜನರ ಬಗ್ಗೆ ಕಳಕಳಿ ಇಟ್ಟುಕೊಂಡು ಆಧ್ಯಾತ್ಮಿಕವಾಗಿ ಮಾತ್ರವಲ್ಲದೆ, ಎಲ್ಲಾ ಕ್ಷೇತ್ರದಲ್ಲೂ ಸಮಾಜ ಮುಖಿಯಾಗಿ ಕೆಲಸ ಮಾಡಿದ್ದಾರೆ ಎಂದು ಸ್ಮರಿಸಿಕೊಂಡರು.

ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿದ ಸಂಘದ ಸದಸ್ಯರ ಮಕ್ಕಳನ್ನು ಪುರಸ್ಕರಿಸಲಾಯಿತು. ಕಾರ್ಯಕ್ರಮದಲ್ಲಿ ರಾಮಕೃಷ್ಣ ವಿದ್ಯಾಶಾಲೆಯ ಸ್ವಾಮಿ ಯುಕ್ತೇಶಾನಂದಾಜಿ, ಮಹಾರಾಣಿ ಕಲಾ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ವಿ.ವಸಂತಕುಮಾರ್, ಸಂಘದ ಅಧ್ಯಕ್ಷ ಎಂ.ಎಸ್.ಸರ್ಪಭೂಷಣ್, ಉಪಾಧ್ಯಕ್ಷ ಡಿ.ಎಸ್. ಮಹೇಶ್, ನಿರ್ದೇಶಕರಾದ ಗಂಗಾಧರಪ್ಪ, ಡಾ.ಪ್ರಭು ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

> ಬಸವಣ್ಣನವರು ದಯೆ ಇಲ್ಲದ ಧರ್ಮ ಯಾವುದಯ್ಯ, ದಯೆಯೇ ಧರ್ಮದ ಮೂಲವಯ್ಯ ಎಂಬ ಸಂದೇಶವನ್ನು ಜಗತ್ತಿಗೆ ಸಾರಿದರು. ಆದರೆ ಅನೇಕರು ಬಸವ ತತ್ವ ಹಾಗೂ ಸಂವಿಧಾನ ಓದಿದ್ದರೂ ಕೂಡ ತಾರತಮ್ಯದ ಜಂಜಾಟದಲ್ಲಿದ್ದಾರೆ. ಅಸ್ಪೃಶ್ಯತೆ ಮತ್ತು ಲಿಂಗ ತಾರತಮ್ಯ, ದೇಶವೇ ತಲೆ ತಗ್ಗಿಸುವಂಥ ವಿಚಾರ. ಉತ್ತಮ ಸಮಾಜ ನಿರ್ಮಾಣಕ್ಕಾಗಿ ಮೊದಲು ಇಂತಹ ನಡವಳಿಕೆಗಳು ಬದಲಾಗಬೇಕು ಎಂದು ಆಶಿಸಿದರು.
>
> -ಡಾ.ಹೆಚ್.ಸಿ.ಮಹದೇವಪ್ಪ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ

ಕೋರ್ಟ್ ಆದೇಶದಂತೆ ಕಲಾಮಂದಿರ ಬಳಿ ಉದ್ದೇಶಿತ ಪಿಟೀಲು ಚೌಡಯ್ಯ ಪ್ರತಿಮೆ ಪ್ರತಿಷ್ಠಾಪನೆಗೆ ಆಗ್ರಹ

ತಪ್ಪಿದರೆ ನ್ಯಾಯಾಲಯ ನಿಂದನೆ ಪ್ರಕರಣ ದಾಖಲಿಸುವ ಎಚ್ಚರಿಕೆ

ಮೈಸೂರು, ಸೆ.28(ಜಿಎ)–ನಗರದ ಹುಣಸೂರು ರಸ್ತೆಯ(ಕಲಾಮಂದಿರದ ಬಳಿ) ಸಂಗೀತ ರತ್ನ ಮೈಸೂರು ಪಿಟೀಲು ಚೌಡಯ್ಯ ವೃತ್ತದಲ್ಲಿ ಉದ್ದೇಶಿತ ಪಿಟೀಲು ಚೌಡಯ್ಯ ಹೊರತುಪಡಿಸಿ, ಬೇರೆ ಯಾವುದೇ ಗಣ್ಯರ ಪ್ರತಿಮೆ ಸ್ಥಾಪಿಸದಂತೆ ಪಾಲಿಕೆ ವಿರುದ್ಧ ಮೈಸೂರಿನ ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಆದೇಶ ನೀಡಿದೆ ಎಂದು ಹೈ ಕೋರ್ಟ್ ನ್ಯಾಯವಾದಿಯೂ ಆದ ಎಸ್.ಎಸ್.ಗೌಡ ಲಾ ಅಸೋಸಿಯೇಷನ್‌ನ ಎನ್.ಪಿ.ಅಮೃತೇಶ್ ತಿಳಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಿಟೀಲು ಚೌಡಯ್ಯ ವೃತ್ತಕ್ಕೆ ಮಹಾನಗರ ಪಾಲಿಕೆ ಹೊಸದಾಗಿ ನಾಡಪ್ರಭು ಕೆಂಪೇಗೌಡರ ಹೆಸರು ಮತ್ತು ಪ್ರತಿಮೆ ನಿರ್ಮಾಣ ಮಾಡುತ್ತಿರುವ ವಿರುದ್ಧ ಎಸ್.ಎಸ್.ಗೌಡ ಲಾ ಅಸೋಸಿಯೇಷನ್ ಸಲ್ಲಿಸಿದ್ದ ಸಾರ್ವಜನಿಕ ಹಿತಸಕ್ತಿ ಅರ್ಜಿ ವಿಚಾರಣೆ ನಡೆದು ಅಲ್ಲಿ ಬೇರೆ ಯಾವುದೇ ಗಣ್ಯರ ಪ್ರತಿಮೆ ಸ್ಥಾಪಿಸದಂತೆ ಪಾಲಿಕೆ ವಿರುದ್ಧ ಆದೇಶ ಹೊರಡಿಸಿದೆ ಎಂದರು.

ಯಾವುದೇ ವೃತ್ತಗಳಿಗೆ ನಾಮಕರಣ ಮಾಡುವ ಸಂದರ್ಭದಲ್ಲಿ ಆ ಸ್ಥಳದ ಸುತ್ತ ಇರುವ ಪ್ರದೇಶದ ಇತಿಹಾಸಕ್ಕೆ ಅನುಗುಣವಾಗಿ ಹೆಸರು ಇಡುವುದು ಸಮಂಜಸವಾದುದು ಈ ಹಿನ್ನೆಲೆಯಲ್ಲಿ ಕಲಾಮಂದಿರದ ಬಳಿ ಇರುವ ವೃತ್ತಕ್ಕೆ ಕಲೆ ಮತ್ತು ಸಂಗೀತಕ್ಕೆ ಸಂಬಂಧಿಸಿದ ವಿಷಯ ಪರಿಗಣಿಸಿ ಪಿಟೀಲು ಚೌಡಯ್ಯನವರ ಹೆಸರು ಈ ವೃತ್ತಕ್ಕೆ ಇಡಲಾಗಿತ್ತು. ಆದರೆ ಇದೀಗ ಪಾಲಿಕೆ ಕೆಂಪೇಗೌಡರ ಪ್ರತಿಮೆ ಅನಾವರಣಕ್ಕೆ ಮುಂದಾಗಿರುವುದು ಸರಿಯಲ್ಲ ಎಂದರು.

ವೃತ್ತಕ್ಕೆ ಈಗಾಗಲೇ ಪಾಲಿಕೆ ವತಿಯಿಂದ 2018ರಲ್ಲಿ ಪಿಟೀಲು ಚೌಡಯ್ಯನವರ ಹೆಸರು ಇಡಲಾಗಿದೆ. ಆದರೆ ಇದೀಗ ಸದರಿ ವೃತ್ತದಲ್ಲಿದ್ದ ನಾಮಫಲಕ ತೆಗೆದುಹಾಕಿ, ಕೆಂಪೇಗೌಡ ಪ್ರತಿಮೆ ಸ್ಥಾಪಿಸಲು ಮುಂದಾಗಿರುವ ಕಾರಣ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು, ಪಿಟೀಲು ಚೌಡಯ್ಯನವರ ಹೊರತುಪಡಿಸಿ ಬೇರೆ ಯಾವುದೇ ಗಣ್ಯ ವ್ಯಕ್ತಿಗಳ ಪ್ರತಿಮೆ ಪ್ರತಿಷ್ಠಾಪಿಸದಂತೆ ಪಾಲಿಕೆ ವಿರುದ್ಧ ಆದೇಶ ಹೊರಡಿಸಿದೆ ಎಂದು ತಿಳಿಸಿದರು.

ನ್ಯಾಯಾಲಯ ಹೊರಡಿಸಿರುವ ಆದೇಶವನ್ನು ಪಾಲಿಕೆ ಪಾಲಿಸದಿದ್ದರೆ, ನ್ಯಾಯಾಲಯ ನಿಂದನೆ ಕೇಸ್ ದಾಖಲಿಸುತ್ತೇವೆ. ಆದ್ದರಿಂದ ಸದರಿ ವೃತ್ತಕ್ಕೆ ಉದ್ದೇಶಿತ ಪಿಟೀಲು ಚೌಡಯ್ಯನವರ ಹೆಸರು ಮುಂದುವರೆಸಬೇಕು. ಜೊತೆಗೆ ಆ ಜಾಗದಲ್ಲಿ ಅವರ ಪ್ರತಿಮೆಯನ್ನೇ ಅನಾವರಣ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ವಕೀಲರಾದ ಸಾ.ತಿ.ಸದಾನಂದಗೌಡ, ಎಂ.ಸತೀಶ, ಪಿ.ಸತೀಶ, ಅರ್.ರಘು, ದೀಕ್ಷಾ ಅಮೃತೇಶ್ ಉಪಸ್ಥಿತರಿದ್ದರು.

ನಾಳೆ ಬಹುಮಾನ ವಿತರಣೆ

ಮೈಸೂರು, ಸೆ.28–ನಗರದ ನೈಪುಣ್ ಸ್ಕೂಲ್ ಆಫ್ ಎಕ್ಸಲೆನ್ಸ್ ಆಯೋಜಿಸಿದ್ದ ಅಂತರ ಶಾಲಾ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಹಾಗೂ ಬಹುಮಾನ ವಿತರಣಾ ಸಮಾರಂಭವನ್ನು ಸೆ.30 ರಂದು ನಗರದ ರಮಾಗೋವಿಂದ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ.

ಅಂದು ಸಂಜೆ 5ಗಂಟೆಗೆ ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಖ್ಯಾತ ಕಿರುತೆರೆ ನಟಿ ನಿಖಿಲಾ ಸುಮನ್ ಭಾಗವಹಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ನೈಪುಣ್ಯ ಶಾಲೆಯ ವಿದ್ಯಾರ್ಥಿಗಳು ಅಭಿನಯಿಸಿರುವ 'ಪಂಜರ ಶಾಲೆ' ನಾಟಕವನ್ನು ಪ್ರದರ್ಶಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಪ್ರಾಣಾಯಾಮ, ಸುದರ್ಶನ ಕ್ರಿಯೆ ಶಿಬಿರ

ಮೈಸೂರು, ಸೆ. 28 – ಮೈಸೂರಿನ ಶ್ರೀ ರವಿಶಂಕರ್ ಗುರೂಜಿ ಅವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಅ. 3 ರಿಂದ 7 ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆ ಕಲಿಸುವ ಶಿಬಿರವನ್ನು ಏರ್ಪಡಿಸಲಾಗಿದೆ ಹೆಚ್ಚಿನ ಮಾಹಿತಿಗೆ ಮೊ. 9480476825 ಸಂಪರ್ಕಿಸಬಹುದು.

ಮೈಸೂರು ಪ್ರವಾಸೋದ್ಯಮ ಅಭಿವೃದ್ಧಿಗೆ ಕೇಂದ್ರದ ನೆರವು

● ಕೇಂದ್ರ ರಕ್ಷಣಾ, ಪ್ರವಾಸೋದ್ಯಮ ಸಚಿವ ಅಜಯ್ ಭಟ್ ಭರವಸೆ ● ಖಾಸಗಿ ಹೋಟೆಲ್‌ನಲ್ಲಿ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಸಭೆ

ಮೈಸೂರು, ಸೆ28(ಎಸ್‌ಬಿಡಿ)– ಮೈಸೂರು ಪ್ರವಾಸೋದ್ಯಮ ಅಭಿವೃದ್ಧಿಗೆ ಕೇಂದ್ರ ಪ್ರವಾಸೋದ್ಯಮ ಇಲಾಖೆ ನೆರವಾಗಲಿದೆ ಎಂದು ಕೇಂದ್ರ ರಕ್ಷಣಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವ ಅಜಯ್ ಭಟ್ ಭರವಸೆ ನೀಡಿದರು.



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮೈಸೂರು ಸೇರಿದಂತೆ ಸುತ್ತ ಮುತ್ತಲ ಪ್ರೇಕ್ಷಣೀಯ ಸ್ಥಳಗಳ ವಿಡಿಯೋ ದೃಶ್ಯಗಳನ್ನು ವಿಶ್ವದೆಲ್ಲೆಡೆ ಪ್ರಚುರ ಪಡಿಸುವ ಮೂಲಕ ಮೈಸೂರಿನ ಪ್ರವಾಸೋದ್ಯಮದ ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದರು.

ಕೇಂದ್ರ ಸರಕಾರ ನಾನಾ ಯೋಜನೆಯಡಿ ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿಗೆ ಸಾಕಷ್ಟು ಅನುದಾನ ನೀಡಲಾಗಿದೆ. ಪ್ರಸಾದ್ ಯೋಜನೆಯಡಿ ಚಾಮುಂಡಿ ಬೆಟ್ಟದ ಅಭಿವೃದ್ಧಿಗೆ 45.7 ಕೋಟಿ ರೂ. ಅನುದಾನ ನೀಡಿದೆ. ಸ್ವದೇಶಿ ದರ್ಶನ್ ಯೋಜನೆಯಡಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದ ಅಭಿವೃದ್ಧಿಗೂ ಆದ್ಯತೆ ನೀಡಲಾಗಿದೆ. ಮೈಸೂರು ಮಾತ್ರವಲ್ಲದೆ ಸುತ್ತಮುತ್ತಲ ಪ್ರೇಕ್ಷಣೀಯ ಸ್ಥಳಗಳ ಮತ್ತಷ್ಟು ಅಭಿವೃದ್ಧಿಗೆ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಸಲಹೆ ನೀಡಿದರೆ ಪರಿಗಣಿಸಲಾಗುವುದು. ಜೊತೆಗೆ ವ್ಯಾಪಕ ಪ್ರಚಾರದ ಮೂಲಕ ವಿದೇಶಿ ಪ್ರವಾಸಿಗರನ್ನು ಆಹ್ವಾನಿಸಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಮೈಸೂರು ಸಂಘ–ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಪಿ.ಎಸ್.ಪ್ರಶಾಂತ್ ಮಾತನಾಡಿ, ಪ್ರವಾಸೋದ್ಯಮ ಅಭಿವೃದ್ಧಿಗೆ ಸಮರ್ಪಕ ಸಂಪರ್ಕ ವ್ಯವಸ್ಥೆ ಅತ್ಯಗತ್ಯ. ಈ ನಿಟ್ಟಿನಲ್ಲಿ ಮೈಸೂರಿನಿಂದ ನೆರೆ ರಾಜ್ಯಗಳ ಪ್ರಮುಖ ನಗರಗಳಿಗೆ ವಿಮಾನ ಸೇವೆ ವಿಸ್ತರಣೆ ಮಾಡಿದರೆ ತುಂಬಾ ಅನುಕೂಲವಾಗಲಿದೆ ಎಂದರು. ವಿಶ್ವಕ್ಕೆ ಯೋಗ ಕಲಿಸಿದ ಕೀರ್ತಿ ಹೊಂದಿರುವ ಮೈಸೂರಿನಲ್ಲಿ ಯೋಗ ವಿಶ್ವವಿದ್ಯಾಲಯ ಸ್ಥಾಪಿಸಲು ಕ್ರಮ ಕೈಗೊಳ್ಳಬೇಕು ಮೈಸೂರು ಯೋಗ ಫೌಂಡೇಷನ್ ಅಧ್ಯಕ್ಷ ಶ್ರೀಹರಿ ಮನವಿ ಮಾಡಿದರು. ಪ್ರವಾಸಿ ವಾಹನಗಳ ಚಾಲಕರ ಸಂಘದ ಅಧ್ಯಕ್ಷ ನಾಗರಾಜ್, ಅಂತಾರಾಜ್ಯ ಪ್ರವಾಸಿ ವಾಹನಗಳ ಮೇಲಿನ ತೆರಿಗೆ ಕಡಿಮೆ ಮಾಡಿದರೆ ಪ್ರವಾಸೋದ್ಯಮಕ್ಕೆ ಅನುಕೂಲವಾಗಲಿದೆ ಎಂದರು. ಸಂಘ ಸಂಸ್ಥೆಗಳ ಪ್ರತಿನಿಧಿಗಳ ಸಲಹೆ ಆಲಿಸಿದ ಸಚಿವ ಅಜಯ್ ಭಟ್, ಈ ಬಗ್ಗೆ ಕೇಂದ್ರ ಸರ್ಕಾರದ ಗಮನಕ್ಕೆ ತಂದು ಪ್ರವಾಸೋದ್ಯಮ ಅಭಿವೃದ್ಧಿಗೆ ಕ್ರಮ ವಹಿಸುವುದಾಗಿ ಭರವಸೆ ನೀಡಿದರು. ಸಭೆಯಲ್ಲಿ ಕೇಂದ್ರ ಪ್ರವಾಸೋದ್ಯಮ ಇಲಾಖೆ ಪ್ರಾದೇಶಿಕ ನಿರ್ದೇಶಕ ವೆಂಕಟೇಶನ್ ದತ್ತಾತ್ರೇಯ, ರಾಜ್ಯ ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ ಗೌಡ, ಕಾರ್ಯದರ್ಶಿ ರವೀಂದ್ರ ಭಟ್, ಕ್ರೈಡಾಯ್ ಕಾರ್ಯದರ್ಶಿ ಅರುಣ್ ಪಂಡಿತ್ ಮತ್ತಿತರರು ಉಪಸ್ಥಿತರಿದ್ದರು.

ಬಂದ್‌ಗೆ ಹಿಂದೂಸ್ಥಾನ ಜನತಾ ಪಕ್ಷದ ಬೆಂಬಲ



ಮೈಸೂರು, ಸೆ.28(ಜಿಎ)–ನಾಳೆ(ಸೆ.29)ನ ಕರ್ನಾಟಕ ಬಂದ್‌ಗೆ ಹಿಂದೂಸ್ಥಾನ ಜನತಾ ಪಕ್ಷದ ಸಂಪೂರ್ಣ ಬೆಂಬಲವಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಎನ್.ಪ್ರಮೋದ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮಿಳುನಾಡಿಗೆ ಕಾವೇರಿ ನೀರು ಬಿಡುವ ವಿಚಾರದಲ್ಲಿ ರಾಜ್ಯಕ್ಕೆ ನಿರಂತರವಾಗಿ ಅನ್ಯಾಯವಾಗುತ್ತಿದ್ದು, ಈ ಬಗ್ಗೆ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಬೇಕು. ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಕ್ಕೆ ಆಗುತ್ತಿರುವ ಅನ್ಯಾಯ ಸರಿಪಡಿಸಬೇಕು ಎಂದು ಮನವಿ ಮಾಡಿದರು.

ಕರ್ನಾಟಕ ಬಂದ್‌ಗೆ ರಾಜ್ಯದ ಎಲ್ಲ ರಾಜಕೀಯ ಪಕ್ಷಗಳು ಒಗ್ಗಟ್ಟಾಗಿ ಹೋರಾಟ ಮಾಡಬೇಕಿದ್ದು, ಪ್ರತಿಯೊಂದು ಸಂಘ ಸಂಸ್ಥೆಗಳು ಹಾಗೂ ವೇದಿಕೆಯವರು ಪ್ರತಿಭಟನೆಯಲ್ಲಿ ಪಾಲ್ಗೊಂಡು ಸಹಕಾರ ನೀಡಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಉಪಾಧ್ಯಕ್ಷ ಡಿ.ಸಿ.ಕುಮಾರ, ಪ್ರಧಾನಕಾರ್ಯದರ್ಶಿ ಎಸ್.ಬಸವರಾಜು, ಪತ್ರಿಕಾ ಸಲಹೆಗಾರ ಜೆ.ಕುಮಾರ್, ಬೋರಪ್ಪ ಉಪಸ್ಥಿತರಿದ್ದರು.

ಈ ಬಾರಿ ಅ.1ರಿಂದ ಎಂಟು ದಿನ ಎಚ್‌ಆರ್ ದಸರಾ

ಮೈಸೂರು ಕೈಗಾರಿಕಾ ಸಮೃದ್ಧಿಯ ಒಳನೋಟ

ಮೈಸೂರು, ಸೆ.28(ಜಿಎ)–ದಸರಾ ಮಹೋತ್ಸವದ ಅಂಗವಾಗಿ ಪ್ರತಿ ವರ್ಷದಂತೆ ಈ ಬಾರಿಯೂ ಅಕ್ಟೋಬರ್ 1ರಿಂದ ಡಿಸೆಂಬರ್ 8ರವರೆಗೆ ಮೈಸೂರು ಕೈಗಾರಿಕಾ ಸಮೃದ್ಧಿಯ ಒಳನೋಟಕ್ಕಾಗಿ 'ಎಚ್‌ಆರ್ ದಸರಾ' ಹಮ್ಮಿಕೊಳ್ಳಲಾಗಿದ್ದು, ಒಂಬತ್ತು ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಎಡಿನ್ ಬ್ರಿಡ್ಜ್ ಫೌಂಡೇಶನ್ ಮುಖ್ಯಸ್ಥ ಎಂ.ಫಣೀಶ್ ತಿಳಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಎರಡು ವರ್ಷಗಳಿಂದ 'ಎಚ್‌ಆರ್ ದಸರಾ' ಕಾರ್ಯಕ್ರಮ ಆಯೋಜಿಸುತ್ತಿದೆ. ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಅದರಂತೆ ಮೊದಲ ಬಾರಿ ಸಂಸದ ಪ್ರತಾಪ್ ಸಿಂಹ ಮತ್ತು ಎರಡನೇ ಬಾರಿಗೆ ರಾಜವಂಶಸ್ಥ ಯದುವೀರ್ ಅವರು ಕಾರ್ಯಕ್ರಮಕ್ಕೆ ಸಾಥ್ ನೀಡಿದ್ದರು ಎಂದರು.

ಈ ಬಾರಿಯ 'ಎಚ್‌ಆರ್ ದಸರಾ' ಮೈಸೂರು ಎಚ್‌ಆರ್ ಫೋರಮ್ ಹಾಗೂ ಎಡಿನ್ ಬ್ರಿಡ್ಜ್ ಫೌಂಡೇಶನ್ ವತಿಯಿಂದ ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್ ಮತ್ತು ಕಾಂಗರೂ ಕೇರ್ ಸೇರಿದಂತೆ ಇನ್ನಿತರ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ನಡೆಯಲಿದ್ದು, ಮೊದಲ ದಿನವಾದ ಅ.1ರಂದು ಬೆಳಿಗ್ಗೆ 10ಕ್ಕೆ ನಗರದ ಅರಮನೆಯ ಬಲರಾಮ ದ್ವಾರದಲ್ಲಿ 'ಮೆಗಾ ವಿಷ್ ಬಾಕ್ಸ್ –ಮಕ್ಕಳೊಂದಿಗೆ ದಸರಾ ಸಂಭ್ರಮಾಚರಣೆ' ಆಯೋಜಿಸಿದ್ದು ಇದರಲ್ಲಿ ಮೈಸೂರಿನ ಸುತ್ತಮುತ್ತ ವಿರುವ ಹಾಡಿಯ 63 ಮಕ್ಕಳು ಭಾಗವಹಿಸಲಿದ್ದಾರೆ. ಅವರಿಗೆ ಉಚಿತ ಬಟ್ಟೆ ವಿತರಣೆ ಮಾಡಿ, ನಗರದ ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆ ಮಾಡಿಸಿ, ನಂತರ ನಗರದ 5 ಸ್ಟಾರ್ ಹೋಟೆಲ್‌ನಲ್ಲಿ ಊಟದ ವ್ಯವಸ್ಥೆ ಮಾಡಲಾಗಿದೆ ಎಂದರು.

ಎರಡನೇ ದಿನವಾದ ಅ.6ರಂದು ಮಧ್ಯಾಹ್ನ 2.30ಕ್ಕೆ ವೆಬಿನಾರ್ ವೇದಿಕೆಯಲ್ಲಿ ಜೂಮ್ ಆ್ಯಪ್ ಮೂಲಕ 'ವೆಬಿನಾರ್ ಚರ್ಚೆ ಎಚ್‌ಆರ್ ಮತ್ತು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಕುರಿತು ಚರ್ಚೆ ನಡೆಯಲಿದೆ. ಅ.11ರಂದು ರೋಟರಿ ಸಂಸ್ಥೆಯಲ್ಲಿ ಬೆಳಿಗ್ಗೆ 9.30ಕ್ಕೆ 'ಎನ್‌ಸಿಸಿ ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಕ್ರಮವಿದೆ.

ಅ.13ರಂದು ಬೆಳಿಗ್ಗೆ 9.30ಕ್ಕೆ ನಗರದ ಕಡಕೋಳ ಕೈಗಾರಿಕಾ ವಲಯದಲ್ಲಿ ಎಚ್‌ಆರ್‌ಗಳು ಮತ್ತು ಅಧ್ಯಾಪಕರ ಕೈಗಾರಿಕಾ ಪ್ರವಾಸ ಹಮ್ಮಿಕೊಳ್ಳಲಾಗಿದ್ದು, ನಂಜನಗೂಡಿನ 3 ಪ್ರಮುಖ ಕಾರ್ಖಾನೆಗಳಿಗೆ ಸುಮಾರು 50ಕ್ಕೂ ಹೆಚ್ಚು ಮಾನವ ಸಂಪನ್ಮೂಲ ಅಧಿಕಾರಿಗಳು ಮತ್ತು ವಿದ್ಯಾಸಂಸ್ಥೆಗಳ ಪ್ರಾಧ್ಯಾಪಕರು ಭಾಗವಹಿಸಲಿದ್ದಾರೆ ಎಂದರು.

ಅ.27ರಂದು ಬೆಳಿಗ್ಗೆ 9.30ಕ್ಕೆ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನಲ್ಲಿ 'ಎಚ್‌ಆರ್ ಮತ್ತು ಕೈಗಾರಿಕಾ ವಿಚಾರ ಸಂಕಿರಣ' ನಡೆಯಲಿದೆ. ನ.3ರಂದು ಬೆಳಿಗ್ಗೆ 9.30ಕ್ಕೆ ಹೆಬ್ಬಾಳಿನಲ್ಲಿರುವ ನಾರ್ತ್ ಅವೆನ್ಯೂ ಹೋಟೆಲ್‌ನಲ್ಲಿ ಎಚ್‌ಆರ್ ಆಯುಷ್–ಕಾರ್ಪೊರೇಟ್ ಸ್ವಾಸ್ಥ್ಯ ಸಮ್ಮೇಳನ ಆಯೋಜಿಸಲಾಗಿದ್ದು, ಈ ಕಾರ್ಯಕ್ರಮದಲ್ಲಿ ಮಾನವ ಸಂಪನ್ಮೂಲ ಅಧಿಕಾರಿಗಳಿಗೆ ಆರೋಗ್ಯ ಕಾರ್ಡ್ ನೀಡಲಾಗುತ್ತದೆ. ನ.8ರಂದು ಮಾನಸಗಂಗೋತ್ರಿಯ ಇಎಂಎಂಆರ್‌ಸಿ ಸಭಾಂಗಣದಲ್ಲಿ ಬೆಳಿಗ್ಗೆ 9.30ಕ್ಕೆ 'ಫೈನಾನ್ಸ್ ಫಾರ್ ಎಚ್‌ಆರ್ ಕಾರ್ಯಾಗಾರ' ಆಯೋಜಿಸಲಾಗಿದೆ ಎಂದರು.

ನ.17ರಂದು ಹೆಬ್ಬಾಳದ ನಾರ್ತ್ ಅವೆನ್ಯೂ ಹೋಟೆಲ್‌ನಲ್ಲಿ ಮಧ್ಯಾಹ್ನ 2ಕ್ಕೆ ರಾಜ್ಯಮಟ್ಟದ ಎಚ್‌ಆರ್ ಮತ್ತು ಟಿಪಿಒ ಸಮಾವೇಶ ಹಾಗೂ ಡಿ.8ರಂದು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಎಸ್‌ಡಿಎಂಐಎಂಡಿ ಕಾಲೇಜಿನಲ್ಲಿ ಬೆಳಿಗ್ಗೆ 9.30ಕ್ಕೆ ಎಚ್‌ಆರ್ ದಸರಾ ಕೈಗಾರಿಕಾ ಸಮೃದ್ಧಿಯ ಒಳನೋಟ ಚರ್ಚೆ ಕಾರ್ಯಕ್ರಮ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ : 7022036998 ಸಂಪರ್ಕಿಸಿ ಎಂದು ಅವರು ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್ ಸುಬ್ರಹ್ಮಣ್ಯಂ, ಕಾಂಗರೂ ಕೇರ್ ಆಸ್ಪತ್ರೆಯ ನಿವೇದಿತಾ ಶ್ರೀನಿವಾಸ್, ಕಾಟ್ಕಿ ಇಂಡಸ್ಟ್ರೀಯಲ್ ಅಸೋಸಿಯೇಷನ್ ಜೆ.ಪ್ರಶಾಂತ್, ರೋಟರಿ ಕ್ಲಬ್‌ನ ಸ್ವಾಮ್ ಕಶ್ಯಪ್, ಟಿಪಿಒ ಫೋರಮ್‌ನ ಹರ್ಷಿತ್ ಕುಮಾರ್ ಉಪಸ್ಥಿತರಿದ್ದರು.

ವಿ.ಪೇಟೆ: ಅದ್ಧೂರಿ ಶೋಭಾಯಾತ್ರೆ ಮೂಲಕ ಗೌರಿ-ಗಣೇಶ ವಿಸರ್ಜನೆ

ಭವ್ಯ ಮಂಟಪಗಳಲ್ಲಿ ಮೆರವಣಿಗೆ, ಚಂಡೆ-ಮದ್ದಳೆ, ವಾದ್ಯಗೋಷ್ಠಿಗಳ ಝೇಂಕಾರ







ವಿರಾಜಪೇಟೆ, ಸೆ.28– ವಿರಾಜಪೇಟೆಯಲ್ಲಿ ವಿಜೃಂಭಣೆಯಿಂದ ಪ್ರತಿಷ್ಠಾಪನೆಗೊಂಡು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ನಡೆದ ಶ್ರೀ ಗೌರಿ–ಗಣೇಶ ಮೂರ್ತಿಯನ್ನು ವಿದ್ಯುತ್ ದೀಪಾಲಂಕೃತ 22 ಭವ್ಯ ಹೂವಿನ ಮಂಟಪಗಳ ಶೋಭಾಯಾತ್ರೆಯ ಮೂಲಕ ಮುಖ್ಯಬೀದಿಗಳಲ್ಲಿ ಚಂಡೆ ಮದ್ದಳೆ ವಾದ್ಯಗೋಷ್ಠಿಯೊಂದಿಗೆ ಮೆರವಣಿಗೆ ಮೂಲಕ ಮುಖ್ಯ ಬೀದಿಯಲ್ಲಿ ಸಾಗಿ ಖಾಸಗಿ ಬಸ್ ನಿಲ್ದಾಣದ ಬಳಿಯ ಪವಿತ್ರ ಗೌರಿಕೆರೆಯಲ್ಲಿ ವಿಸರ್ಜಿಸಲಾಯಿತು.

ಮೆರವಣಿಗೆಯಲ್ಲಿ ಗಡಿಯಾರ ಕಂಬದ ಬಳಿಯಿರುವ ಶ್ರೀ ಮಹಾಗಣಪತಿ ದೇವಾಲಯದ ಗಣಪತಿ ಉತ್ಸವ ಮೂರ್ತಿ, ಶ್ರೀ ಬಸವೇಶ್ವರ ಗೌರಿ–ಗಣೇಶ ಉತ್ಸವ ಸಮಿತಿ, ಶ್ರೀ ವಿಘ್ನೇಶ್ವರ ಸೇವಾ ಸಮಿತಿ ಅರಸು ನಗರ, ಶ್ರೀ ವಿನಾಯಕ ಯುವಕ ಭಕ್ತ ಮಂಡಳಿ ಅಂಗಾಳ ಪರಮೇಶ್ವರಿ ದೇವಸ್ಥಾನ ತೆಲುಗರ ಬೀದಿ, ಶ್ರೀ ವಿಜಯ ವಿನಾಯಕ ಉತ್ಸವ ಸಮಿತಿ ದಖ್ಖನಿ ಮೊಹಲ್ಲಾ, ಕಾವೇರಿ ಶ್ರೀ ಗಣೇಶ ಉತ್ಸವ ಸಮಿತಿ ಮೂರ್ನಾಡು ರಸ್ತೆ, ನೇತಾಜಿ ಉತ್ಸವ ಸಮಿತಿ ನೆಹರುನಗರ, ಶ್ರೀ ಮಹಾ ಗಣಪತಿ ಸೇವಾ ಸಂಘ ಗಣಪತಿ ಬೀದಿ ಪಂಜರುಪೇಟೆ, ಶ್ರೀ ವಿನಾಯಕ ಸೇವಾ ಸಮಿತಿ ಪಂಜರುಪೇಟೆ, ಶ್ರೀ ಜಲದರ್ಶಿನಿ ವಿನಾಯಕ ಸೇವಾ ಸಮಿತಿ ಶ್ರೀ ಆಂಜನೇಯ ದೇವಸ್ಥಾನ ಚಿಕ್ಕಪೇಟೆ, ಶ್ರೀ ವಿಘ್ನೇಶ್ವರ ಸೇವಾ ಸಮಿತಿ ಕುಂದ ಕುಕ್ಲೂರು, ಶ್ರೀ ಸರ್ವಸಿದ್ದಿ ವಿನಾಯಕ ಉತ್ಸವ ಸಮಿತಿ ಸುಂಕದಕಟ್ಟೆ, ಶ್ರೀ ಕಣ್ಮಣಿ ವಿನಾಯಕ ಉತ್ಸವ ಸೇವಾ ಸಮಿತಿ ಮಲೆತಿರಿಕೆ ಬೆಟ್ಟ, ಶ್ರೀ ಗಣಪತಿ ಸೇವಾ ಸಮಿತಿ ಗಾಂಧಿನಗರ, ಶ್ರೀ ದೊಡ್ಡಮ್ಮ ಚಿಕ್ಕಮ್ಮ ತಾಯಿ ವಿನಾಯಕ ಸೇವಾ ಸಮಿತಿ ಹರಿಕೇರಿ ಸುಣ್ಣದಬೀದಿ, ಶ್ರೀ ವಿಘ್ನೇಶ್ವರ ಗಣಪತಿ ಸೇವಾ ಸಮಿತಿ ಕೆ.ಬೋಯಿಕೇರಿ, ವಿಶ್ವ ವಿನಾಯಕ ಗಣೇಶೋತ್ಸವ ಸಮಿತಿ ಮೀನುಪೇಟೆ, ಶ್ರೀ ಗೌರಿಕೆರೆ ಗಣಪತಿ ಸೇವ ಸಮಿತಿ, ಶ್ರೀ ವಿಘ್ನೇಶ್ವರ ಉತ್ಸವ ಸಮಿತಿ ಪಟ್ಟಣ ಪಂಚಾಯಿತಿ, ಶ್ರೀ ವರದ ವಿನಾಯಕ ಸೇವಾ ಸಮಿತಿ ಅಯ್ಯಪ್ಪ ಬೆಟ್ಟ, ಶ್ರೀ ವಿನಾಯಕ ಯುವ ಸಮಿತಿ ಶಿವಕೇರಿ, ಶ್ರೀ ಬಾಲಂಜನೇಯ ವಿನಾಯಕ ಉತ್ಸವ ಸಮಿತಿ ಅಪ್ಪಯ್ಯಸ್ವಾಮಿ ರಸ್ತೆ ಸೇರಿದಂತೆ ಒಟ್ಟು 22 ಶ್ರೀ ಗೌರಿ ಗಣೇಶನ ಉತ್ಸವ ಮೂರ್ತಿಗಳನ್ನು ಗೌರಿ ಕೆರೆಯಲ್ಲಿ ವಿಸರ್ಜಿಸಲಾಯಿತು.

ಗುರುವಾರ ರಾತ್ರಿ ಗಡಿಯಾರ ಕಂಬದಬಳಿಯ ಶ್ರೀ ಮಹಾ ಗಣಪತಿ ದೇವಾಲಯ ಸಮಿತಿ ಪಟಾಕಿ ಸಿಡಿಮದ್ದು ಸಿಡಿಸಿ ಬಳಿಕ ಗಣೇಶ ಮೂರ್ತಿಯನ್ನು ಹೂವಿನ ಮಂಟಪದಲ್ಲಿ ಕೂರಿಸಿ ವಿಘ್ನೇಶ್ವರನಿಗೆ ಪೂಜೆ ಸಲ್ಲಿಸಿ ಮೆರವಣಿಗೆ ಹೊರಟು ಮುಖ್ಯ ಬೀದಿಯಲ್ಲಿ ಸಾಗಿತು. ನಗರದ ತೆಲುಗರ ಬೀದಿಯಲ್ಲಿರುವ ಮಾರಿಯಮ್ಮ ದೇವಾಲಯದ ಬಳಿಯ ಅಮ್ಮತ್ತಿ ರಸ್ತೆ ತಿರುವುವರೆಗೂ ಬಂದು ನಂತರ ಹಿಂದಿರುಗಿ ಜೈನರ ಬೀದಿ ದೊಡ್ಡಟ್ಟಿ ಚೌಕಿ ಮಾರ್ಗವಾಗಿ ಗಡಿಯಾರ ಕಂಬದ ಬಳಿಯಿಂದ ಗೌರಿಕೆರೆವರೆಗೆ ಮೆರವಣಿಗೆ ಸಾಗಿತು.

ಮೆರವಣಿಗೆಯಲ್ಲಿ ಕೇರಳದ ಚಂಡೆ ಮದ್ದಳೆ, ದಕ್ಷಿಣ ಕನ್ನಡ ಜಿಲ್ಲೆಯ ಗೊಂಬೆ ಕುಣಿತ, ಡೊಳ್ಳು ಕುಣಿತ, ವಾದ್ಯ ಗೋಷ್ಠಿ, ಭಜನಾ ನೃತ್ಯಗಳು, ಕಲಾತಂಡ ಗಳು, ಶ್ರೀ ಅಂಗಳ ಪರಮೇಶ್ವರಿ ದೇವಸ್ಥಾನ ಸಮಿತಿಯಿಂದ ಆನೆ ಅಂಬಾರಿಯ ಚಲನ ವಲನ ಇರುವ ಚಿತ್ರಗಳು ಭಾಗವಹಿಸಿ ನೆರೆದಿದ್ದ ಸಾವಿರಾರು ಜನರ ಗಮನ ಸೆಳೆದವು. ಮುಂಜಾನೆ ವೇಳೆಗೆ ಗೌರಿ–ಗಣೇಶ ಉತ್ಸವ ಮೂರ್ತಿಯನ್ನು ವಿಸರ್ಜಿಸಲಾಯಿತು.

ಗೌರಿ–ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದ ಸಮಿತಿಗಳು 10 ದಿನಗಳ ಕಾಲ ಬೆಳಗ್ಗೆ ಮತ್ತು ಸಂಜೆ ವಿಶೇಷ ಪೂಜೆ ಪುನಸ್ಕಾರಗಳನ್ನು ಸಲ್ಲಿಸಿ, ಅನ್ನ ಸಂತರ್ಪಣೆ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಪ್ರತಿಷ್ಠಾಪನಾ ಮಂಟಪದ ವೇದಿಕೆ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳಿಂದ ನೃತ್ಯ, ಭರತನಾಟ್ಯಗಳು, ಕೊಡಗಿನ ಸಾಂಸ್ಕೃತಿಕ ನೃತ್ಯ ಕಾರ್ಯಕ್ರಮ, ಗಣ್ಯರಿಗೆ ಮತ್ತು ಸಾಧಕರಿಗೆ ಸನ್ಮಾನ, ಸಂಗೀತ ರಸಮಂಜರಿ ಮತ್ತು ವಿವಿಧ ಮನೋರಂಜನಾ ಕಾರ್ಯಕ್ರಮಗಳು ನಡೆದವು.





ಶ್ರೀ ಗೌರಿ–ಗಣೇಶ ವಿಸರ್ಜನೆ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು. 3 ಡಿವೈಎಸ್‌ಪಿ, 12 ವೃತ್ತನಿರೀಕ್ಷಕರು, 31 ಎಸ್‌ಐಗಳು, 54 ಎಎಸ್‌ಐಗಳು, 357 ಪೊಲೀಸ್ ಸಿಬ್ಬಂದಿಗಳು, 62 ಮಹಿಳಾ ಸಿಬ್ಬಂದಿಗಳು, 65 ಹೋಂಗಾರ್ಡ್‌ಗಳು, ಗೃಹರಕ್ಷಕದಳ, ಕೆಎಸ್‌ಆರ್‌ಪಿ ಮತ್ತು ಡಿಎಆರ್‌ಪಿ, ತುಕಡಿಗಳು ಸೇರಿದಂತೆ ಕೊಡಗು, ಮೈಸೂರು, ಚಾಮರಾಜನಗರ, ಮಂಡ್ಯದಿಂದಲೂ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗಿತ್ತು.

ಗೌರಿ–ಗಣೇಶ ಮೂರ್ತಿಗಳ ಶೋಭಾಯಾತ್ರೆ ವಿಸರ್ಜನೆ ಮೆರವಣಿಗೆ ಹಿನ್ನೆಲೆಯಲ್ಲಿ ನಗರದಲ್ಲಿ ಮದ್ಯದಂಗಡಿಗಳನ್ನು ಒಂದು ದಿನ ಮೊದಲೇ ಬಂದ್ ಮಾಡಲಾಗಿತ್ತು. ಮೆರವಣಿಗೆಯ ಮಂಟಪಗಳು ಬರುವ ಬೀದಿಗಳಲ್ಲಿ ವಾಹನ ನಿಲುಗಡೆ ನಿಷೇಧಿಸಲಾಗಿತ್ತು. ನಗರದ ಒಳಗೆ 6 ಗಂಟೆ ನಂತರ ಯಾವುದೇ ವಾಹನಗಳ ಪ್ರವೇಶ ಇರಲಿಲ್ಲ, ಹೊರಜಿಲ್ಲೆಗಳಿಂದ ಹಾಗೂ ಕೇರಳ ರಾಜ್ಯದಿಂದ ಬರುವ ವಾಹನಗಳಿಗೆ ಬದಲಿ ವ್ಯವಸ್ಥೆ ಮಾಡಲಾಗಿತ್ತು. 22 ಮಂಟಪಗಳ ಗೌರಿ–ಗಣೇಶ ಮೂರ್ತಿಯ ಮೆರವಣಿಗೆ ಮತ್ತು ವಿಸರ್ಜನೆಯ ವೀಕ್ಷಣೆಗೆ ಜಿಲ್ಲೆಯ ಇತರೆಡೆಗಳಿಂದ ನಗರ ಮತ್ತು ಗ್ರಾಮೀಣ ಪ್ರದೇಶದ ಜನತೆ ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಸಿಎನ್‌ಸಿಯಿಂದ 2ನೇ ಹಂತದ ಪಾದಯಾತ್ರೆ ಆರಂಭ

ಬೇಡಿಕೆ ಈಡೇರುವವರೆಗೂ ಹೋರಾಟ ಮುಂದುವರಿಕೆ: ನಾಚಪ್ಪ



ಮಡಿಕೇರಿ, ಸೆ.28– ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆ ಸೇರಿದಂತೆ 9 ಪ್ರಮುಖ ಬೇಡಿಕೆಗಳ ಕುರಿತು ಸರ್ಕಾರದ ಗಮನ ಸೆಳೆಯಲು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಆರಂಭಿಸಿರುವ ಪಾದಯಾತ್ರೆಯ 2ನೇ ಹಂತ 'ಕುರುಳಿ ಅಂಬಲ' ಮಂದ್‌ನಿಂದ ಆರಂಭಗೊಂಡಿತು.

ಮಡಿಕೇರಿ ತಾಲೂಕು 'ಕುರುಳಿ ಅಂಬಲ' ಮಂದ್, ನೆಲ್ಲಿಯುಪುದಿಕೇರಿ ನಾಡ್ ಕಟ್ಟೆಮಾಡ್ ಮತ್ತು ಅರೆಕಾಡ್ ಮಂದ್‌ನಲ್ಲಿ ಪಾದಯಾತ್ರೆ ಹಾಗೂ ಕೊಡವ ಜಾಗೃತಿ ಸಭೆ ನಡೆಯಿತು. ನೆರೆದಿದ್ದವರನ್ನುದ್ದೇಶಿಸಿ ಮಾತನಾಡಿದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ, ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆಯ ಬೇಡಿಕೆ ಈಡೇರುವವರೆಗೆ ಸಿಎನ್‌ಸಿಯ ಹೋರಾಟ ಮುಂದುವರೆಯಲಿದೆ. ಸರ್ವ ಕೊಡವರು ಹೋರಾಟದೊಂದಿಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು. ದೇಶದ ಸಂವಿಧಾನದಡಿ ಸೂಕ್ಷ್ಮ ಬುಡಕಟ್ಟು ಜನಾಂಗವಾಗಿರುವ ಕೊಡವರು ತಮ್ಮ ಹಕ್ಕುಗಳನ್ನು ಪಡೆಯಲು ಸ್ವತಂತ್ರರು, ಆದರೆ ಪ್ರತಿಯೊಬ್ಬರು ಜಾಗೃತರಾಗಬೇಕು ಎಂದರು.

2002ರಲ್ಲಿ ಕೊಡವರಿಗೆ ಸ್ವಾಯತ್ತ ಪರಿಷತ್ತನ್ನು ರಚಿಸಲು ಭಾರತದ ಸಿಎನ್‌ಸಿಯ ಮನವಿ ಮೇರೆಗೆ ಸಂವಿಧಾನ ಪರಿಶೀಲನಾ ಆಯೋಗ ಶಿಫಾರಸು ಮಾಡಿದೆ. ಆನಂದ್ ಶರ್ಮಾ ಸಮಿತಿಯ ವರದಿಯು ಸ್ವಾಯತ್ತ ಪ್ರದೇಶಗಳು ಮತ್ತು ಅದರ ಕೌನ್ಸಿಲ್‌ಗಳಿಗೆ ಹೆಚ್ಚಿನ ಅಧಿಕಾರ ನೀಡಲು ತಿಳಿಸಿದೆ.

ಸಿಎನ್‌ಸಿ ಮೂಲಕ ಜನರ ಆಕಾಂಕ್ಷೆಗಳನ್ನು ಪ್ರತಿಧ್ವನಿಸಲು, ಮೂಲೆ ಮೂಲೆಗಳಲ್ಲಿ ವಿಶ್ವ ರಾಷ್ಟ್ರ ಸಂಸ್ಥೆ ಚಾರ್ಟರ್‌ನಲ್ಲಿ ಪ್ರತಿಪಾದಿಸಿರುವ ಸಾರ್ವತ್ರಿಕ ಕಾನೂನಿನ ಪ್ರಕಾರ ಮತ್ತು ಭಾರತದ ಸಂವಿಧಾನದ ಅಡಿಯಲ್ಲಿ ಸ್ವಯಂ ಆಡಳಿತ ಹಾಗೂ ಸ್ವಯಂ ನಿರ್ಣಯದ ಹಕ್ಕುಗಳನ್ನು ಸ್ಥಾಪಿಸಲು ಆರ್ಟಿಕಲ್ 32 ಅನ್ನು ಈ ಮೂಲಕ ಪ್ರಚಾರ ಮಾಡುತ್ತಿದ್ದೇವೆ. ಕೊಡವ ಲ್ಯಾಂಡ್ ಭೂರಾಜಕೀಯ ಸ್ವಾಯತ್ತತೆಯೂ ಕರ್ನಾಟಕದ ಸ್ವಾಧೀನದ ಅಡಿಯಲ್ಲಿ ಭಾರತದ ಸಾರ್ವಭೌಮತ್ವಕ್ಕೆ ಪೂರಕವಾಗಿರುತ್ತದೆ ಎಂದು ನಾಚಪ್ಪ ಹೇಳಿದರು.

ಜನಸಂಖ್ಯಾ ಪಲ್ಲಟವನ್ನು ತಡೆಗಟ್ಟಲು, ನಮ್ಮ ಅನುವಂಶಿಕ ಸಮುದಾಯ ಆಸ್ತಿಗಳನ್ನು ಮತ್ತು ನಮ್ಮ ಆಧ್ಯಾತ್ಮಿಕ ಪಾರಮಾರ್ಥಿಕ ನೆಲೆಗಳಾದ ಮಂದ್, ದೇವಕಾಡ್, ತೂಟ್‌ಂಗಲ, ಕ್ಯಾಕೊಳಗಳನ್ನು ರಕ್ಷಿಸಬೇಕು. ಕೊಡವರ ಜನ್ಮಭೂಮಿಯಲ್ಲಿ ನಮ್ಮ ಐತಿಹಾಸಿಕ ನಿರಂತರತೆಗೆ ಶಾಸನಬದ್ಧ ಅನುಮೋದನೆಗಾಗಿ, ಮಣಿಪುರ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ ಮತ್ತು ಮಿಜೋರಾಂನ ಮಾದರಿಯಲ್ಲಿ ಇನ್ನರ್ ಲೈನ್ ಪರ್ಮಿಟ್ ಮತ್ತು ಹೊಸ ಸಂಸತ್ತಿನಲ್ಲಿ ಕೊಡವ ಪ್ರಾತಿನಿಧ್ಯವನ್ನು ನೀಡಬೇಕು ಎಂದು ನಾಚಪ್ಪ ಒತ್ತಾಯಿಸಿದರು.

ಅಜ್ಜಂಡ ಅಪ್ಪಯ್ಯ, ಅಚ್ಚಕಳೇರ ಸಂತು ಅಯ್ಯಪ್ಪ, ಅಚ್ಚಕಳೇರ ನವೀನ್ ಮೊಣ್ಣಪ್ಪ, ನಂದೇಟಿರ ರವಿ ಸುಬ್ಬಯ್ಯ, ನಂದೇಟಿರ ಕಾಜು ಕಾರ್ಯಪ್ಪ, ಅಚ್ಚಕಳೇರ ಕಾವೇರಪ್ಪ, ಅಚ್ಚಕಳೇರ ಪಳಂಗಪ್ಪ, ನಂದೇಟಿರ ನೀರಜ್ ವೀರಪ್ಪ, ನಂದೇಟಿರ ರಿಷ್ಮಾ ಕಾವೇರಮ್ಮ, ನಂದೇಟಿರ ರಾಜ ಮಾದಪ್ಪ, ನಂದೇಟಿರ ನೀನಾ, ಸಾದೇರ ಮಧು ಗಣಪತಿ, ನಂದೇಟಿರ ಕೌಶಿಕ್ ಕುಶಾಲಪ್ಪ, ತಂಶಿ ತಮ್ಮಯ್ಯ, ಅಚ್ಚಕಳೇರ ಸಜನ್, ಅಚ್ಚಕಳೇರ ಬೋಪಣ್ಣ, ನಂದೇಟಿರ ನಿಶು ನಂಜಪ್ಪ, ಬಡಕಡ ನಿಗು ಸುಬ್ರಮಣಿ, ಸಾದೇರ ಜೀವನ್, ಬೊಡ್ಡಂಡ ಮಂದಣ್ಣ, ಪುತ್ತೇರಿರ ಕರುಣ್ ಕಾಳಯ್ಯ, ಅಪ್ಪಚೆಟ್ಟೋಳಂಡ ಹರೀಶ್ ಸೋಮಯ್ಯ ಮತ್ತಿತರರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ತಮಿಳುನಾಡಿಗೆ ನೀರು ಬಿಡುಗಡೆ: ಬಿಜೆಪಿ ಪ್ರತಿಭಟನೆ



ಚಾಮರಾಜನಗರ, ಸೆ. 28– ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ಜಿಲ್ಲಾ ಬಿಜೆಪಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಕರ್ನಾಟಕ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಶಾಸಕ ಎಸ್.ಬಾಲರಾಜು ಮಾತನಾಡಿ, ರಾಜ್ಯ ಸರ್ಕಾರವು ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ನೀರು ಹರಿಸುವುದರಿಂದ ಜಲಾಶಯಗಳು ಬರಿದಾಗಿ ಕುಡಿಯುವ ನೀರಿಗೂ ಸಂಕಷ್ಟ ಎದುರಾಗಲಿದೆ. ಹೀಗಾಗಿ ತಮಿಳುನಾಡಿನ ರೈತರು 3ನೇ ಫಸಲು ಬೆಳೆಯುತ್ತಿದ್ದಾರೆ. ಅವರಿಗೇಕೆ ನೀರು ಬಿಡಬೇಕು ಎಂದು ಪ್ರಶ್ನಿಸಿದರು.

ರಾಜ್ಯ ಸರ್ಕಾರ ಇಂಡಿಯಾ ಮೈತ್ರಿ ಕೂಟದಲ್ಲಿರುವ ಡಿಎಂಕೆಗೆ ಬೆಂಬಲ ನೀಡಿ ನೀರು ಹರಿಸಿದೆ. ಕಾವೇರಿ ನೀರಿನ ವಿವಾದ ತಾರಕಕ್ಕೇರಿದರೂ ಸರ್ಕಾರ ಏಕೆ ರೈತರು, ಹೋರಾಟಗಾರರು, ಸಂಘಟನೆಗಳ ಮುಖಂಡರ ಸಭೆ ನಡೆಸುತ್ತಿಲ್ಲ ಎಂದು ಪ್ರಶ್ನಿಸಿದರು.

ರಾಜ್ಯ ಸರ್ಕಾರ ಕಾವೇರಿ ಅಚ್ಚುಕಟ್ಟು ಪ್ರದೇಶದ ರೈತರಿಗೆ ಎಕರೆಗೆ 25 ಸಾವಿರ ರೂ. ಬೆಳೆ ನಷ್ಟ ಪರಿಹಾರ ನೀಡಬೇಕು. ರೈತರ ಎಲ್ಲ ಸಾಲ ಮನ್ನಾ ಮಾಡಬೇಕು ಎಂದು ಆಗ್ರಹಿಸಿದ ಅವರು ನಾಳಿನ ಕರ್ನಾಟಕ ಬಂದ್‌ಗೆ ಬಿಜೆಪಿ ಸಂಪೂರ್ಣ ಬೆಂಬಲವಿದೆ ಎಂದರು. ಮಾಜಿ ಶಾಸಕ ಎನ್.ಮಹೇಶ್ ಮಾತನಾಡಿ, ರಾಜ್ಯದಲ್ಲಿ ಮಳೆಯಾಗಿಲ್ಲ. ಜಲಾಶಯಗಳಲ್ಲಿ ನೀರಿನ ಮಟ್ಟದ ಕ್ಷೀಣಿಸುತ್ತಿದೆ. ಇಂತಹ ಸಂದರ್ಭ ತಮಿಳುನಾಡಿಗೆ ಒಂದು ಹನಿ ನೀರನ್ನು ಬಿಡಬಾರದೆಂದು ಆಗ್ರಹಿಸಿದರು.

ಕಾವೇರಿ ನೀರಿನ ವಿಚಾರದಲ್ಲಿ ಕೇಂದ್ರ ಸರ್ಕಾರ ಸಂಪೂರ್ಣ ಬೆಂಬಲ ನೀಡುತ್ತಿದೆ. ಕಾವೇರಿ ನೀರು ನಿರ್ವಹಣಾ ಮಂಡಳಿ 3 ಸಾವಿರ ಕ್ಯುಸೆಕ್ ನೀರು ಬಿಡಲು ಹೇಳಿರುವುದನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ಸಮರ್ಥಿಸಿಕೊಂಡಿರುವುದು ಸರಿಯಲ್ಲ. ಇದನ್ನು ನೋಡಿದರೆ ಕಾಂಗ್ರೆಸ್ ತಮಿಳುನಾಡು ಸರ್ಕಾರ ಒಪ್ಪಂದ ಮಾಡಿಕೊಂಡು ಈ ರೀತಿ ಮಾಡುತ್ತಿದ್ದಾರೆ ಎಂದು ಅಪಾದಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕ ಸಿ.ಎಸ್.ನಿರಂಜನ್‌ಕುಮಾರ್, ಕೇಂದ್ರ ಬರ ಪರಿಹಾರ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಬಿಜೆಪಿ ಜಿಲ್ಲಾಧ್ಯಕ್ಷ ನಾರಾಯಣ ಪ್ರಸಾದ್, ಉಪಾಧ್ಯಕ್ಷ ವೃಷಬೇಂದ್ರ, ಜಿಲ್ಲಾ ವಕ್ತಾರ ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ನಾಗಶ್ರೀ, ನಿಜಗುಣರಾಜು, ನೂರೊಂದುಶೆಟ್ಟಿ, ಡಾ.ಎ.ಆರ್.ಬಾಬು, ಸುರೇಶ್‌ನಾಯಕ, ಮಹದೇವನಾಯಕ, ಶಿವುವಿರಾಟ್, ಶಾಂತಮೂರ್ತಿ ಕುಲಗಾಣ, ಬಾಲರಾಜ್, ಮೂಡ್ನಾಕೂಡು ಪ್ರಕಾಶ್, ನಗರಸಭಾ ಸದಸ್ಯರಾದ ಶಿವರಾಜ್, ಆಶಾ, ಕುಮುದ ಇತರರಿದ್ದರು.

ಕರ್ನಾಟಕ ಬಂದ್‌ಗೆ ಚಾ.ನಗರದಲ್ಲೂ ಬೆಂಬಲ

ಚಾಮರಾಜನಗರ, ಸೆ.28– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಸೆ.29ರ ಶುಕ್ರವಾರ ಕರೆ ನೀಡಿರುವ ಕರ್ನಾಟಕ ಬಂದ್‌ಗೆ ಕಾವೇರಿ ಹೋರಾಟ ಕ್ರಿಯಾ ಸಮಿತಿ ಸೇರಿದಂತೆ ವಿವಿಧ ಸಂಘಟನೆಗಳು ಬೆಂಬಲ ಸೂಚಿಸಿವೆ.

ಶಾಲಾ ಕಾಲೇಜುಗಳಿಗೆ ರಜೆ: ಡಿಸಿ ಆದೇಶ



ನಗರದಲ್ಲಿ ತುರ್ತು ಸೇವೆಗಳಾದ ಮೆಡಿಕಲ್, ಆಸ್ಪತ್ರೆ, ಹಾಲಿನ ಬೂತ್ ಮಾತ್ರ ತೆರೆದಿರಲಿದ್ದು, ಎಲ್ಲಾ ಅಂಗಡಿ ಮುಂಗಟ್ಟುಗಳು, ಹೋಟೆಲ್‌ಗಳು, ಚಿತ್ರಮಂದಿರಗಳು, ಆಟೋ, ಟ್ಯಾಕ್ಸಿ ಸಂಚಾರ, ಖಾಸಗಿ ಬಸ್ ಸಂಚಾರ ಬಂದ್ ಆಗಲಿದೆ. ಇನ್ನು ಜಿಲ್ಲೆಯಲ್ಲಿ ಪೊಲೀಸ್ ಬಂದೋಬಸ್ತ್‌ನಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳು ಸಂಚರಿಸಲು ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಅಶೋಕ್‌ಕುಮಾರ್ ತಿಳಿಸಿದ್ದಾರೆ. ಕಾವೇರಿ ಹೋರಾಟವನ್ನು ಎಲ್ಲರೂ ಬೆಂಬಲಿಸಬೇಕು ಎಂದು ವಿವಿಧ ಸಂಘಟನೆಗಳು ನಗರದ ಸಾರ್ವಜನಿಕರಲ್ಲಿ ಮನವಿ ಮಾಡಿವೆ.

ಶಾಲಾ ಕಾಲೇಜುಗಳಿಗೆ ರಜೆ: ಕಾವೇರಿ ನದಿ ನೀರು ಹಂಚಿಕೆ ವಿಚಾರವಾಗಿ ವಿವಿಧ ಸಂಘಟನೆಗಳು ಕರ್ನಾಟಕ ಬಂದ್‌ಗೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಸೆ.29ರಂದು ಚಾಮರಾಜನಗರ ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಆದೇಶಿಸಿದ್ದಾರೆ. ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜಿಗೆ ಬರಲು ಸಾರಿಗೆ ವ್ಯವಸ್ಥೆಯಲ್ಲಿ ವ್ಯತ್ಯಯ ಉಂಟಾಗಬಹುದೆಂದು ಮನಗಂಡು ಹಾಗೂ ಮುಂಜಾಗ್ರತಾ ಕ್ರಮವಾಗಿ ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಿ ಆದೇಶಿಸಲಾಗಿದೆ. ಅಲ್ಲದೇ ಶುಕ್ರವಾರದ ರಜೆಯನ್ನು ಭಾನುವಾರದಂದು ಶಾಲಾ ಕಾಲೇಜುಗಳನ್ನು ತೆರೆದು ಸರಿದೂಗಿಸುವಂತೆ ಶಾಲಾ ಕಾಲೇಜುಗಳ ಆಡಳಿತ ಮಂಡಳಿಗೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ತಿಳಿಸಿದ್ದಾರೆ.

ಬಿಗಿ ಬಂದೋಬಸ್ತ್: ಶುಕ್ರವಾರ ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಜಿಲ್ಲಾದ್ಯಂತ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು 'ಮೈಸೂರು ಮಿತ್ರ' ನಿಗೆ ತಿಳಿಸಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಎಲ್ಲೆಡೆ ಬಿಗಿ ಬಂದೋಬಸ್ತ್ ಮಾಡಲಾಗಿದೆ. ಅಲ್ಲದೇ ತಮಿಳುನಾಡಿಗೆ ಸಂಪರ್ಕ ಕಲ್ಪಿಸುವ ಚೆಕ್‌ಪೋಸ್ಟ್‌ಗಳಿಗೆ ಹೆಚ್ಚಿನ ಬಂದೋಬಸ್ತ್ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ತ.ನಾಡಿಗೆ ನೀರು ಹರಿಸುವ ಸರ್ಕಾರದ ಕ್ರಮ ಸರಿಯಲ್ಲ

ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್



ಗುಂಡ್ಲುಪೇಟೆ, ಸೆ.28– ಬರದ ನಡುವೆಯೂ ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ಕ್ರಮ ಸರಿಯಲ್ಲ ಎಂದು ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಶುಕ್ರವಾರದ ಕರ್ನಾಟಕ ಬಂದ್ ಬೆಂಬಲಿಸಿ ಪಟ್ಟಣದಲ್ಲೂ ವಿವಿಧ ಕನ್ನಡ ಪರ ಸಂಘಟನೆಗಳ ಸಹಯೋಗದಲ್ಲಿ ಬಂದ್ ನಡೆಸಿ ನೀರು ನಿಲ್ಲಿಸುವಂತೆ ಒತ್ತಾಯಿಸಲಾಗುವುದು ಎಂದರು.

ಶುಕ್ರವಾರ ಬಂದ್: ಪಟ್ಟಣ ಹಾಗೂ ತಾಲೂಕಿನಾದ್ಯಂತ ಬಿಜೆಪಿ ಹಾಗೂ ವಿವಿಧ ಕನ್ನಡಪರ ಸಂಘಟನೆಗಳು ಮತ್ತು ವಕೀಲರ ಸಂಘ, ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಶುಕ್ರವಾರ ಬೆಳಗ್ಗೆ 6 ರಿಂದ ಸಂಜೆ 6 ರವರೆಗೆ ಪಟ್ಟಣದ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡುವುದರೊಂದಿಗೆ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಲಾಗುವುದು ಎಂದು ಕರವೇ ಪ್ರವೀಣ್ ಶೆಟ್ಟಿ ಬಣದ ಜಿಲ್ಲಾಧ್ಯಕ್ಷ ಆರ್.ಮೋಹನ್ ಹೇಳಿದರು.

ಈಗಾಗಲೇ ವಕೀಲರ ಸಂಘ ಸೇರಿದಂತೆ ಹತ್ತು ಹಲವು ಸಂಘಟನೆಗಳ ಸಹಯೋಗದೊಂದಿಗೆ ಕರವೇ ಶುಕ್ರವಾರ ಬಂದ್ ಮಾಡಿಸಲಿದೆ. ಇದಕ್ಕೆ ಜನತೆ ಸಹಕಾರ ನೀಡಿ ನಾಡು, ನುಡಿ, ಜಲ ಸಂರಕ್ಷಣೆಗೆ ಕೈಜೋಡಿಸಬೇಕೆಂದು ಮನವಿ ಮಾಡಿದರು.

ಈ ವೇಳೆ ಪುರಸಭಾಧ್ಯಕ್ಷ ಪಿ.ಗಿರೀಶ್, ಮುಖಂಡರಾದ ಎಲ್.ಸುರೇಶ್, ರಿಯಾಜ್ ಪಾಷ, ತಮಿಳು ಸಂಘದ ಮುಖಂಡ ಬಾಲು, ಎಸ್.ಸಿ.ಮಂಜುನಾಥ್, ಪ್ರಣಯ್, ಮಲ್ಲಿಕಾರ್ಜುನ್, ನಾಗೇಂದ್ರ, ಕಿರಣ್ ಸೇರಿದಂತೆ ಕನ್ನಡಪರ ಸಂಘಟನೆಯ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಹಾಜರಿದ್ದರು.

ಸೇವಾಕಾರ್ಯಗಳೊಂದಿಗೆ ಡಾ.ರಾಜೇಂದ್ರ ಶ್ರೀಗಳ ಜಯಂತಿ

ಉಚಿತ ಆರೋಗ್ಯ ತಪಾಸಣೆ, ಸ್ವಯಂಪ್ರೇರಿತ ರಕ್ತದಾನ ಶಿಬಿರ ಆಯೋಜನೆ



ಚಾಮರಾಜನಗರ, ಸೆ.28– ವಿವಿಧ ಸೇವಾ ಕಾರ್ಯಗಳೊಂದಿಗೆ ಅ.2, 3 ರಂದು ಡಾ.ಶ್ರೀಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 108ನೇ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ತಾಪಂ ಮಾಜಿ ಅಧ್ಯಕ್ಷ ಬಿ.ಕೆ.ರವಿಕುಮಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ವಿವಿಧ ಸಂಘ ಸಂಸ್ಥೆಗಳು, ಭಕ್ತರು ಹಾಗೂ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಆಶ್ರಯದಲ್ಲಿ ನಗರದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಆವರಣದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು.

ಶ್ರೀಗಳ 108ನೇ ಜಯಂತಿ, ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಅಂಗವಾಗಿ ಅ.2ರಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 1.30ರವರೆಗೆ ಸ್ವಯಂಪ್ರೇರಿತ ರಕ್ತದಾನ ಶಿಬಿರ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದರು.

ಅ.3ರಂದು ಬೆಳಗ್ಗೆ 8.30ಕ್ಕೆ ನಗರದಲ್ಲಿ ರಾಜೇಂದ್ರ ಶ್ರೀಗಳ ಭಾವಚಿತ್ರದ ಮೆರವಣಿಗೆ ನಡೆಯಲಿದ್ದು, 10.30ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅಧ್ಯಕ್ಷತೆ ವಹಿಸಲಿದ್ದು, ಸಂಸದ ವಿ.ಶ್ರೀನಿವಾಸ ಪ್ರಸಾದ್ ನಿವೃತ್ತ ಸೈನಿಕರನ್ನು ಅಭಿನಂದಿಸಲಿದ್ದಾರೆ. ಶೋಭಾ ಕರಂದ್ಲಾಂಜೆ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದು ವಿವರಿಸಿದರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಸ್ಪರ್ಧಾ ವಿಜೇತರಿಗೆ ಪ್ರಶಸ್ತಿ ಪತ್ರ ವಿತರಿಸುವರು. ಡಾ.ಸಿ.ಸೋಮಶೇಖರ್ ನುಡಿನಮನ ಸಲ್ಲಿಸುವರು. ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಹೆಚ್.ಎಂ. ಗಣೇಶಪ್ರಸಾದ್, ಎಂ.ಆರ್. ಮಂಜುನಾಥ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ರೋಟರಿ ಸಿಲ್ಕ್ ಸಿಟಿ ಮಾಜಿ ಅಧ್ಯಕ್ಷ ದೊಡ್ಡರಾಯಪೇಟೆ ಗಿರೀಶ್ ಮಾತನಾಡಿ, ಯುವಕರು, ಯುವತಿಯರು ಸ್ವಯಂಪ್ರೇರಿತ ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡು ರಕ್ತದಾನ ಮಾಡುವ ಮೂಲಕ ಇತರರಿಗೆ ಮಾದರಿಯಾಗಬೇಕು. ಸಾರ್ವಜನಿಕರು ಉಚಿತ ಆರೋಗ್ಯ ತಪಾಸಣಾ ಶಿಬಿರ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಗೋಷ್ಠಿಯಲ್ಲಿ ಜಿಪಂ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ನಗರಸಭೆ ಮಾಜಿ ಅಧ್ಯಕ್ಷೆ ಚೆನ್ನಮ್ಮ, ಮುಖಂಡರಾದ ಮಹಮದ್ ಅಸ್ಗರ್ ಮುನ್ನಾ, ಮೂಡ್ಲುಪುರ ನಂದೀಶ್, ಪ್ರಾಂಶುಪಾಲರಾದ ಸಿದ್ದರಾಜು ಹಾಜರಿದ್ದರು.

ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಸೆ.28– ಸಮಾಜ ಕಲ್ಯಾಣ ಇಲಾಖೆ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕಾಗಿ (ಎಸ್‌ಎಸ್‌ಪಿ ಪೋರ್ಟಲ್) ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಲು ಪೋರ್ಟಲ್ ತೆರೆಯಲಾಗಿದೆ. ಪರಿಶಿಷ್ಟ ಜಾತಿಯ ಎಲ್ಲಾ ಅರ್ಹ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕಾಗಿ https://ssp.karnataka.gov.in/ssp2324homepage.aspx ವೆಬ್‌ಸೈಟ್ ಮೂಲಕ ಅ.20ರೊಳಗೆ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸುವ ಮುನ್ನ ಕಡ್ಡಾಯವಾಗಿ ವಿದ್ಯಾರ್ಥಿ ವೇತನದ ಬ್ಯಾಂಕ್ ಖಾತೆಗೆ ಹಾಗೂ ಎನ್‌ಪಿಸಿಐಗೆ ಆಧಾರ್ ಸೀಡಿಂಗ್ ಮಾಡಿಸಬೇಕು. ಹೆಚ್ಚಿನ ಮಾಹಿತಿಗೆ ಸಮಾಜ ಕಲ್ಯಾಣ ಇಲಾಖೆ ವೆಬ್‌ಸೈಟ್ ಅಥವಾ ಚಾಮರಾಜನಗರ ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.



ಚಾಮರಾಜನಗರ ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಎಂ.ಎಸ್.ರವಿಕುಮಾರ್ ಅವರಿಗೆ ಕ್ರಷರ್ ಮತ್ತು ಕ್ವಾರಿ ಮಾಲೀಕರ ಸಂಘದಿಂದ ಡಯಾಲಿಸಿಸ್ ಯಂತ್ರಗಳನ್ನು ಹಸ್ತಾಂತರಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಆರ್.ಮಧುಕುಮಾರ್, ಉಪಾಧ್ಯಕ್ಷ ನಂದಕುಮಾರ್, ಕಾರ್ಯದರ್ಶಿ ಎಚ್.ಎಸ್.ದಿನೇಶ್ ಇತರರಿದ್ದರು.

ಅರ್ಜಿ ಆಹ್ವಾನ

ಚಾಮರಾಜನಗರ, ಸೆ.28– ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಾವೀನ್ಯತೆ, ತಾರ್ಕಿಕ ಸಾಧನೆಗಳು, ಕ್ರೀಡೆ, ಕಲೆ, ಸಾಂಸ್ಕೃತಿಕ ಮತ್ತು ಸಂಗೀತ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿರುವ ಮಕ್ಕಳಿಗೆ ಜಿಲ್ಲಾ ಪ್ರಶಸ್ತಿ ನೀಡುವ ಸಲುವಾಗಿ ಅರ್ಹ ಮಕ್ಕಳಿಂದ ಅರ್ಜಿ ಆಹ್ವಾನಿಸಿದೆ. ಅರ್ಜಿಯನ್ನು ನಗರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರ ಕಚೇರಿಯಲ್ಲಿ ಪಡೆದು ಭರ್ತಿ ಮಾಡಿ ಸೆ. 30ರೊಳಗೆ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

ಕೋಡಿಮೋಳೆಯಲ್ಲಿ ಭಗತ್‌ಸಿಂಗ್ ಜಯಂತಿ ಆಚರಣೆ



ಚಾಮರಾಜನಗರ, ಸೆ.28– ತಾಲೂಕಿನ ಕೋಡಿಮೋಳೆ ಗ್ರಾಮದ ಭಗತ್ ಸಿಂಗ್ ವೃತ್ತದಲ್ಲಿ ಭಗತ್ ಯುವ ಯುವಸೇನೆ ಹಾಗೂ ಎಐಡಿವೈಓ ಘಟಕದಿಂದ ಭಗತ್ ಸಿಂಗ್ ಅವರ 116ನೇ ಜಯಂತಿ ಆಚರಿಸಲಾಯಿತು. ಭಗತ್ ಯುವ ಯುವಸೇನೆ ಅಧ್ಯಕ್ಷ ಕಾಂತರಾಜು ಮಾತನಾಡಿದರು. ಈ ವೇಳೆ ಕುಮಾರ್, ದೇವರಾಜು, ಶಿವು, ಮಹೇಶ್, ರವಿಕುಮಾರ್, ಮನು, ಚಂದ್ರಶೇಖರ್, ರಾಜೇಂದ್ರ, ಮಾರಪ್ಪ, ಗುರುಮೂರ್ತಿ, ನಿಂಗರಾಜು, ಆನಂದ ಸೇರಿದಂತೆ ಇತರರಿದ್ದರು.

ಒಂದನೇ ಪುಟದಿಂದ

ಇಂದು 'ಕರ್ನಾಟಕ ಬಂದ್'

ಕಾನೂನಿ ನಲ್ಲಿ ಇಂತಹ ಬಂದ್‌ಗೆ ಅವಕಾಶವಿಲ್ಲ. ಇದರಿಂದಾಗುವ ದುಷ್ಪರಿಣಾಮಗಳ ಬಗ್ಗೆ ವಿವಿಧ ನ್ಯಾಯಾಲಯಗಳು ತೀರ್ಪು ಗಳನ್ನು ನೀಡಿವೆ. ನ್ಯಾಯಾಲಯದ ಆದೇಶ ಗಳನ್ನು ವಿರೋಧಿಸಿ ಮಾಡಿದರೆ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ನಾಳೆ ಎಂದಿನಂತೆ ಸರ್ಕಾರಿ ಸೇವೆ ಪೂರ್ಣ ಪ್ರಮಾಣದಲ್ಲಿ ಲಭ್ಯವಿರುತ್ತದೆ. ರಾಜ್ಯದ ರಸ್ತೆ ಸಾರಿಗೆ ಬಸ್‌ಗಳು ಎಂದಿನಂತೆ ಸಂಚರಿಸಲಿವೆ. ಸಾರ್ವಜನಿಕ ಉದ್ದಿಮೆಗಳು, ಖಾಸಗಿ ಸಂಸ್ಥೆಗಳು ಎಂದಿನಂತೆ ಕಾರ್ಯ ನಿರ್ವಹಿಸಲಿದ್ದು, ಎಲ್ಲರಿಗೂ ಸರ್ಕಾರ ರಕ್ಷಣೆ ನೀಡಲಿದೆ. ಇದರ ನಡುವೆಯೂ ಯಾರಾದರೂ ಬಂದ್‌ಗೆ ಪ್ರಚೋದಿಸುವುದಾಗಲೀ ಅಥವಾ ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವವರ ವಿರುದ್ಧ ಕಠಿಣ ಕ್ರಮ ಜರುಗಿಸುವುದಾಗಿ ತಿಳಿಸಿದ್ದಾರೆ. ಕನ್ನಡಪರ ಸಂಘಟನೆಗಳು ಬಂದ್ ಮಾಡುವುದಾಗಿ ಹೇಳಿವೆ. ಬಂದ್ ಹಿನ್ನೆಲೆಯಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ. ಬಂದ್ ವೇಳೆ ಆಸ್ತಿ-ಪಾಸ್ತಿಗೆ ಹಾನಿಯಾದರೆ, ಬಂದ್ ಕರೆ ನೀಡಿದವರನ್ನೇ ಹೊಣೆ ಮಾಡುವ ಎಚ್ಚರಿಕೆ ನೀಡಲಾಗಿದೆ. ಅಲ್ಲದೆ, 'ಬೆಂಗಳೂರು ಬಂದ್' ಆಚರಿಸಿದ ಬೆನ್ನಲ್ಲೆ 'ಕರ್ನಾಟಕ ಬಂದ್'ಗೆ ಕರೆ ನೀಡಿರುವುದು ಕೂಡ ಸಾರ್ವಜನಿಕರಲ್ಲಿ ಅಸಮಾಧಾನ ಉಂಟು ಮಾಡಿದೆ. ಪದೇ ಪದೇ ಬಂದ್ ಮಾಡುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗಲಿದ್ದು, ಅದರ ಬಗ್ಗೆಯೂ ಗಮನ ಹರಿಸಬೇಕು ಎಂಬ ಮಾತುಗಳು ಸಾರ್ವಜನಿಕವಾಗಿ ಕೇಳಿಬಂದಿವೆ.

ಶುಕ್ರವಾರದಂದು ನಡೆಯುತ್ತಿರುವ ಅಖಂಡ ಕರ್ನಾಟಕ ಬಂದ್‌ಗೆ ನೂರಾರು ಸಂಘಟನೆಗಳು ಬೆಂಬಲ ಸೂಚಿಸಿವೆ. ಆದರೆ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್ಸುಗಳು ಸಂಚರಿಸಲಿವೆ. ನಿಗಮದ ನೌಕರರು ನಾಳೆ ಎಂದಿನಂತೆ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಲಾಗಿದೆ. ದೀರ್ಘಾವಧಿ, ವಾರದ ರಜೆ ಹೊರತುಪಡಿಸಿ ನೌಕರರು ಹೊರತುಪಡಿಸಿ ಉಳಿದ ಎಲ್ಲಾ ನೌಕರರು ಕಡ್ಡಾಯವಾಗಿ ನಾಳೆ ಕರ್ತವ್ಯಕ್ಕೆ ಹಾಜರಾಗಬೇಕು ಎಂದು ನೌಕರರಿಗೆ ಸಾರಿಗೆ ನಿಗಮಗಳು ಮೌಖಿಕ ಸೂಚನೆ ನೀಡಿವೆ.

ಸಾರಿಗೆ ನಿಗಮಗಳು ಅಗತ್ಯ ಸೇವೆಗಳ ಅಡಿಯಲ್ಲಿ ಬರುವುದರರಿಂದ ಸೇವೆ ನೀಡಬೇಕು. ಹೀಗಾಗಿ ಯಾರು ಸಹ ನಾಳಿನ ಬಂದ್ ನಲ್ಲಿ ಭಾಗಿಯಾಗುವಂತಿಲ್ಲ. ಒಂದು ವೇಳೆ ಕೆಲಸಕ್ಕೆ ಗೈರು ಆಗಿ ಬಂದ್‌ನಲ್ಲಿ ಭಾಗಿಯಾದರೆ ಅಂತವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ಸಹ ನೀಡಲಾಗಿದೆ. ಕರ್ನಾಟಕದ ಉತ್ತರ ಭಾಗದ ಬಳ್ಳಾರಿ, ಕಲಬುರಗಿ, ಬೀದರ್, ಬಾಗಲಕೋಟೆ, ವಿಜಯಪುರ, ಯಾದಗಿರಿ, ಹುಬ್ಬಳ್ಳಿ-ಧಾರವಾಡ, ಗದಗ, ಹಾವೇರಿ, ಕೊಪ್ಪಳ ಮತ್ತು ದಾವಣಗೆರೆಯ ರೈತರು ಮತ್ತು ವರ್ತಕರು ಬಂದ್‌ಗೆ ತಮ್ಮ ನೈತಿಕ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ ಆದರೆ ಬಂದ್ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಈ ಮಧ್ಯೆ, ತಮಿಳುನಾಡಿಗೆ ಕಾವೇರಿ ನೀರು ಬಿಡುವುದನ್ನು ವಿರೋಧಿಸಿ ಕೆಲ ಕಾರ್ಯಕರ್ತರು ಇಂದು ಕಾವೇರಿ ಹೃದಯ ಭಾಗವಾದ ಮಂಡ್ಯದಲ್ಲಿ ಪ್ರತಿಭಟನೆ ನಡೆಸಿದರು. ಇವರು ಕಳೆದ 15 ದಿನಗಳಿಂದ ಧರಣಿ ನಡೆಸುತ್ತಿದ್ದಾರೆ. ರಾಜ್ಯ ಸರ್ಕಾರ ತಮಿಳುನಾಡಿಗೆ ಮೃದು ಧೋರಣೆ ತಾಳಿದ್ದು, ಕಾವೇರಿ ವಿವಾದ ವಿಚಾರವನ್ನು ಸರಿಯಾಗಿ ನಡೆಸುತ್ತಿಲ್ಲ ಎಂದು ಆರೋಪಿಸಿದ್ದಾರೆ.

ಇಂದು ಸಿಎಂ ನೇತೃತ್ವದಲ್ಲಿ ತಜ್ಞರ ಸಭೆ

ರಾಜ್ಯಕ್ಕೆ ಸಂಕಷ್ಟ ಎದುರಾಗಿದೆ. ಕಾವೇರಿ ಜಲ ನಿರ್ವಹಣಾ ಸಮಿತಿ ಮತ್ತೆ ತಮಿಳು ನಾಡಿಗೆ ಮೂರು ಸಾವಿರ ಕ್ಯುಸೆಕ್ ಪ್ರತಿನಿತ್ಯ ನೀರು ಹರಿಸಲು ಸೂಚಿಸಿರುವ ಹಿನ್ನೆಲೆ ಯಲ್ಲಿ ಈ ಸಭೆ ನಡೆಸುತ್ತಿದ್ದಾರೆ. ನಮ್ಮ ಜಲಾನಯನ ಭಾಗದ ಅಣೆಕಟ್ಟುಗಳಲ್ಲಿ ಶೇಖರಣೆಗೊಂಡಿರುವ ನೀರಿನ ಪ್ರಮಾಣ ತೆರೆದಿಟ್ಟ ಪುಸ್ತಕ. ಇಷ್ಟಾದರೂ ಸಮಿತಿ, ಪ್ರಾಧಿಕಾರ ಹಾಗೂ ನ್ಯಾಯಾಲಯ ಪದೇ ಪದೆ ನೀರು ಹರಿಸುವಂತೆ ನೀಡುತ್ತಿರುವ ಆದೇಶ ರಾಜ್ಯದ ರೈತರ ಬೆಳೆ ಮತ್ತು ಜನರಿಗೆ ಕುಡಿಯುವ ನೀರಿಗೆ ತೊಂದರೆ ಆಗುತ್ತಿದೆ.

ಈ ಹಿನ್ನೆಲೆಯಲ್ಲಿ ಮುಂದೆ ಯಾವ ರೀತಿ ಕಾನೂನು ಹೋರಾಟ ನಡೆಸಬೇಕು ಎಂಬ ಬಗ್ಗೆ ಸಲಹೆ ಕೇಳಲು ಮುಖ್ಯಮಂತ್ರಿ ಕಾನೂನು ತಜ್ಞರ ಮೊರೆ ಹೋಗಿದ್ದಾರೆ.

ಈ ರೀತಿ ಸಂಬಂಧ ತಜ್ಞರ ಸಲಹೆ ಪಡೆದು ತೀರ್ಮಾನ ಕೈಗೊಳ್ಳಲು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸರ್ಕಾರಕ್ಕೆ ಸಲಹೆ ನೀಡಿದ್ದರು.

ಅವಕಾಶವಿಲ್ಲ; ಪ್ರತಿಭಟನೆ ತಡೆಯಲ್ಲ: ಡಿಕೆಶಿ

ಹೈಕೋರ್ಟ್ ಬಂದ್ ವಿಚಾರವಾಗಿ ಒಂದಷ್ಟು ಸೂಚನೆಗಳನ್ನು ನೀಡಿವೆ, ಅವನ್ನು ಪಾಲಿಸಬೇಕು. ದಯವಿಟ್ಟು ಕಾನೂನು ಪಾಲಿಸಿ, ಬಂದ್ ಮಾಡದೆ ಪ್ರತಿಭಟನೆ ಮಾಡಿ ಎಂದು ಜನರಲ್ಲಿ ಅವರು ಮನವಿ ಮಾಡಿದರು.

ಇಂದು ಕಾವೇರಿ ಪ್ರಾಧಿಕಾರ ಸಭೆ: ನಾಳೆ ನಡೆಯುವ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಗೆ ಆನ್‌ಲೈನ್ ಬದಲಿಗೆ ಖುದ್ದಾಗಿ ಭಾಗವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದರು. ತಮಿಳುನಾಡಿನವರು 11,000 ಸಾವಿರ ಕ್ಯುಸೆಕ್ ನೀರು ಬೇಡಿಕೆ ಇಟ್ಟಿದ್ದು, ರಾಜ್ಯದ ಅಧಿಕಾರಿಗಳು ಸಮರ್ಥವಾಗಿ ವಾದ ಮಂಡಿಸಲಿದ್ದಾರೆ. ರಾಜ್ಯದ ಬರ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡಲಿದ್ದಾರೆ. ಈಗ ಸಹಜವಾಗಿ 2,000 ಕ್ಯುಸೆಕ್ ನೀರು ಹೋಗುತ್ತಿರಬಹುದು ಎಂದು ತಿಳಿಸಿದರು.

ಹಿರಿಯ ಕೃಷಿ ತಜ್ಞರು, ನೀರಾವರಿ ತಂತ್ರಜ್ಞರ ಸಭೆ ಕರೆದಿದ್ದು ಅಲ್ಲಿ ಚರ್ಚೆ ಮಾಡಲಾಗುವುದು. ಯಾರು ಭಾಗವಹಿಸುತ್ತಾರೆ ಎಂದು ಹೆಸರು ಬಹಿರಂಗಪಡಿಸಲು ಆಗುವುದಿಲ್ಲ ಎಂದು ಹೇಳಿದರು. ನಾಳಿನ ಬೆಳವಣಿಗೆ ನೋಡಿಕೊಂಡು ನ್ಯಾಯಾಲಯಕ್ಕೆ ಹೋಗುತ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು,ಈಗಾಗಲೇ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿದೆ. ತಾಂತ್ರಿಕ ಸಮಿತಿಯವರು 3,000 ಕ್ಯುಸೆಕ್ ನೀರು ಬಿಡುಗಡೆಗೆ ಶಿಫಾರಸ್ಸು ಮಾಡಿದ್ದಾರೆ. ನಾಳೆ ಪ್ರಾಧಿಕಾರದವರು ಏನು ಸೂಚನೆ ನೀಡಲಿದ್ದಾರೆ ಎಂಬುದನ್ನು ಕಾದು ನೋಡಬೇಕು ಎಂದು ತಿಳಿಸಿದರು.

ಪದವೀಧರ, ಶಿಕ್ಷಕರ ಕ್ಷೇತ್ರಕ್ಕೆ ಅಭ್ಯರ್ಥಿಗಳ ಆಯ್ಕೆ: ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಶೀಘ್ರ ಆಯ್ಕೆ ಮಾಡಲು ಸಲಹೆ ಪಡೆಯಲಾಗುತ್ತಿದೆ. ಈಶ್ವರ ಖಂಡ್ರೆ, ರಾಮಲಿಂಗಾರೆಡ್ಡಿ, ಪ್ರಿಯಾಂಕ್ ಖರ್ಗೆ ಸೇರಿದಂತೆ ಎಲ್ಲಾ ಭಾಗದ ನಾಯಕರುಗಳ ಜತೆ ಎಂಎಲ್‌ಸಿ ಚುನಾವಣೆ ಬಗ್ಗೆ ಚರ್ಚೆ ನಡಸಲಾಗುತ್ತಿದೆ ಎಂದು ಹೇಳಿದರು. ಜಗದೀಶ್ ಶೆಟ್ಟರ್ ಅವರ ನೇತೃತ್ವದಲ್ಲಿ ಮಾಜಿ ಶಾಸಕರು ಭೇಟಿಯಾಗಿದ್ದರು ಎನ್ನುವ ಪ್ರಶ್ನೆಗೆ, ಮೈತ್ರಿ ವಿಚಾರವಾಗಿ ಬಹಳಷ್ಟು ಜನರಿಗೆ ಸಿಟ್ಟಿದೆ. ಮುಖ್ಯಮಂತ್ರಿ ಹಾಗೂ ನಾನು ನಾಳೆ ಈ ವಿಚಾರವಾಗಿ ಮಾತನಾಡುತ್ತೇವೆ ಎಂದರು. ಹರಿಪ್ರಸಾದ್ ಹಾಗೂ ಮುನಿಯಪ್ಪ ಅವರ ಭೇಟಿ ಬಗ್ಗೆ ಕೇಳಿದಾಗ, ಬಿ.ಕೆ.ಹರಿಪ್ರಸಾದ್ ಮತ್ತು ಮುನಿಯಪ್ಪ ಅವರು ಲೋಕಸಭೆ ಚುನಾವಣೆಯ ವಿಚಾರವಾಗಿ ಚರ್ಚೆ ನಡೆಸಲು ಬಂದಿದ್ದರು. ಇದೇ ವೇಳೆ ನಿಗಮ-ಮಂಡಳಿಗಳಿಗೆ ಅಧ್ಯಕ್ಷರನ್ನು ಆದಷ್ಟು ಬೇಗ ನೇಮಕ ಮಾಡಿ ಎಂದು ಮುನಿಯಪ್ಪ ಅವರು ಸಲಹೆ ನೀಡಿದರು ಎಂದು ತಿಳಿಸಿದರು.

ನಿಷೇಧಾಜ್ಞೆ ಜಾರಿ

ನಡೆಯಲಿದೆ. ಅಲ್ಲದೇ ಸಂಜಯ, ಮಹಾವೀರ ವೃತ್ತ, ವಿ.ವಿ.ರಸ್ತೆ, ವಿವೇಕಾನಂದ ಜೋಡಿ ರಸ್ತೆ, ನೂರಡಿ ರಸ್ತೆ ಸೇರಿದಂತೆ ಅನೇಕ ವಿವಿಧೆಡೆ ಬೈಕ್ ರ‍್ಯಾಲಿ ನಡೆಸಲು ತೀರ್ಮಾನಿಸಲಾಗಿದ್ದು, ಕಾವೇರಿಗಾಗಿ ಹೋರಾಟಕ್ಕೆ ಎಲ್ಲರೂ ಬೆಂಬಲ ನೀಡುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಲಾಗಿದೆ. ಬಂದ್‌ಗೆ ಕರೆ ಕೊಟ್ಟಿರುವ ಸಂಘಟನೆಗಳು: ನಾಳಿನ ಬಂದ್‌ಗೆ ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ, ಕರ್ನಾಟಕ ರಾಜ್ಯ ರೈತ ಸಂಘ, ಮಂಡ್ಯ ರಕ್ಷಣಾ ವೇದಿಕೆ, ದಲಿತಪರ ಸಂಘಟನೆಗಳು, ಒಕ್ಕಲಿಗರ ಸಂಘ, ಕನ್ನಡ ಸೇನೆ, ಜಯ ಕರ್ನಾಟಕ, ಪ್ರಗತಿಪರ ಸಂಘಟನೆ, ಜೆಡಿಎಸ್, ಬಿಜೆಪಿ, ಹಿಂದೂಪರ ಸಂಘಟನೆ ಸೇರಿದಂತೆ ಇನ್ನಿತರ ಸಂಘಟನೆಗಳು ಬೆಂಬಲ ಘೋಷಿಸಿವೆ.

ಹೆದ್ದಾರಿ, ರೈಲ್ವೆ ತಡೆಗೆ ಅವಕಾಶವಿಲ್ಲ: ಬಂದ್ ಹಿನ್ನಲೆಯಲ್ಲಿ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇ ಹಾಗೂ ರೈಲು ತಡೆಯಲು ಕೆಲವರು ನಿರ್ಧರಿಸಿದ್ದು, ಹೆದ್ದಾರಿ, ರೈಲ್ವೆ ತಡೆಗೆ ಅವಕಾಶ ಇಲ್ಲ. ಒಂದು ವೇಳೆ ತಡೆಗೆ ಮುಂದಾದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಎಸ್ಪಿ ಎನ್.ಯತೀಶ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೋರ್ಟ್ ನಿಯಮದ ಅನುಸಾರ ಬಂದ್ ಮಾಡಬೇಕು. ನಾವು ಸಂಘಟನೆಯವರಿಗೆ ಈ ಬಗ್ಗೆ ಸೂಚನೆ ನೀಡಿದ್ದೇವೆ. ಸಾರ್ವಜನಿಕರಿಗೆ ತೊಂದರೆ ಕೊಡಬಾರದು. ಬಲವಂತವಾಗಿ ಯಾರನ್ನು ಬಂದ್ ಮಾಡಿಸುವಂತಿಲ್ಲ. ಮಂಡ್ಯ ಜಿಲ್ಲಾದ್ಯಂತ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಅಗತ್ಯಬಿದ್ದಲ್ಲಿ ಡಿಸಿಯವರೊಂದಿಗೆ ಮಾತನಾಡಿ ನಗರ ವ್ಯಾಪ್ತಿಯಲ್ಲಿ 144 ಸೆಕ್ಷನ್ ಜಾರಿ ಮಾಡುತ್ತೇವೆ ಎಂದರು.

ಶಾಲಾ-ಕಾಲೇಜಿಗೆ ರಜೆ: ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಸರ್ಕಾರಿ, ಸರ್ಕಾರಿ ಅನುದಾನಿತ ಹಾಗೂ ಖಾಸಗಿ ಶಾಲಾ ಕಾಲೇಜುಗಳಿಗೆ ಶುಕ್ರವಾರ ರಜೆ ಘೋಷಿಸಿ ಜಿಲ್ಲಾಧಿಕಾರಿ ಡಾ.ಕುಮಾರ್ ಆದೇಶ ಹೊರಡಿಸಿದ್ದಾರೆ.

ಸಿಸಿಬಿ ಪೊಲೀಸರಿಂದ ಆರು ಮಂದಿ ಬಂಧನ

ತನಿಖೆ ನಡೆಸುತ್ತಿದ್ದಾರೆ. ಚಾಮರಾಜನಗರ ಪ್ರಾದೇಶಿಕ ಕೇಂದ್ರದಿಂದ ಮೊದಲು ಬಿಕಾಂ ಅಂತಿಮ ವರ್ಷದ ಕಂಪ್ಯೂಟರ್ ಇನ್ ಬ್ಯುಸಿನೆಸ್ ಪರೀಕ್ಷಾ ಪ್ರಶ್ನೆ ಪತ್ರಿಕೆಯು ಸೋರಿಕೆಯಾಗಿದ್ದು, ಮಂಗಳೂರಿನ ಇಬ್ಬರು ಅದನ್ನು ಪಡೆದು ಅಲ್ಲಿಂದ ಮೊಬೈಲ್ ವಾಟ್ಸಾಪ್ ಮೂಲಕ ಮೈಸೂರಿಗೆ ರವಾನಿಸಿದ್ದಾರೆ ಎಂಬುದು ತನಿಖಾ ಹಂತದಲ್ಲಿ ತಿಳಿದು ಬಂದಿದೆ.

ಈಗ ಪೊಲೀಸರಿಗೆ ಸಿಕ್ಕಿ ಬಿದ್ದಿರುವವರೆಲ್ಲರೂ ಮುಕ್ತ ವಿಶ್ವವಿದ್ಯಾನಿಲಯದ ಹಂಗಾಮಿ ನೌಕರ (Temporary Employees)ರಾಗಿದ್ದು, ಆ ಪೈಕಿ ಇಬ್ಬರು ನೌಕರು, ತಾವು ಕೆಲಸಕ್ಕೆ ಸೇರುವಾಗ ರಾಜಕಾರಣಿಯೊಬ್ಬರಿಗೆ ನೀಡಿದ ಲಕ್ಷಾಂತರ ರೂ. ಹಣವನ್ನು ಸಾಲವಾಗಿ ತಂದಿದ್ದರಿಂದ ಅದನ್ನು ತೀರಿಸುವ ಸಲುವಾಗಿ ಪ್ರಶ್ನೆ ಪತ್ರಿಕೆ ಮಾರಾಟ ಮಾಡಿದ್ದರು ಎಂಬ ಆಘಾತಕಾರಿ ವಿಷಯ ಕೇಳಿ ಬಂದಿದೆ ಎಂದು ಬಲ್ಲ ಮೂಲಗಳು ತಿಳಿಸಿವೆ.

ಯಾರಿಗೆ ಎಷ್ಟು ಹಣ ನೀಡಿದ್ದೇವೆ, ಆ ವ್ಯಕ್ತಿ ತಮಗೆ ಹಣಕ್ಕೆ ಬೇಡಿಕೆ ಇಟ್ಟಿದ್ದು ಹೇಗೆ? ಆ ಹಣವನ್ನು ತಾವು ಹೊಂದಿಸಿದ್ದು ಹೇಗೆ? ಹಣ ನೀಡಿದ್ದವರಿಂದ ವಾಪಸ್ ಕೇಳಿದ್ದರಿಂದ ತಾವು ಈ ದಂಧೆಗಿಳಿಯಬೇಕಾಯಿತು ಎಂಬುದನ್ನು ಬಂಧಿತರ ಪೈಕಿ ಇಬ್ಬರು ತಮ್ಮ ಸಮಸ್ಯೆಯನ್ನು ಹೇಳಿಕೊಂಡಿದ್ದಾರೆಂದು ತಿಳಿದು ಬಂದಿದೆ. ಆದರೆ ಕೇವಲ ಹಂಗಾಮಿ ನೌಕರರೇ ಮೇಲ್ನೋಟಕ್ಕೆ ಆರೋಪಿಗಳಾಗುತ್ತಿದ್ದು, ಖಾಯಂ ನೌಕರರು, ಅಧಿಕಾರಿಗಳು ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆಯೇ ಇಲ್ಲವೇ ಎಂಬುದರ ಬಗ್ಗೆ ಪೊಲೀಸರು ತೀವ್ರ ತನಿಖೆ ನಡೆಸುತ್ತಿದ್ದಾರೆ.

ಬಡತನ ನಿರ್ಮೂಲನೆಗೆ ಶಿಕ್ಷಣವೊಂದೇ ಪರಿಹಾರ

ಮೈಸೂರು ಜಿ.ಪಂ ಸಿಇಓ ಕೆ.ಎಂ. ಗಾಯತ್ರಿ ಅಭಿಮತ



ಮೈಸೂರು,ಸೆ.28(ಎಂಟಿವೈ)- ಬಡತನ ನಿರ್ಮೂಲನೆಗೆ ಶಿಕ್ಷಣವೇ ಪ್ರಧಾನ ಅಸ್ತ್ರವಾಗಿದ್ದು, ಎಲ್ಲರೂ ಉನ್ನತ ಶಿಕ್ಷಣ ಪಡೆಯುವತ್ತ ಗಮನ ಕೇಂದ್ರೀಕರಿಸಬೇಕು ಎಂದು ಮೈಸೂರು ಜಿಲ್ಲಾ ಪಂಚಾಯಿತಿ ಸಿಇಓ ಕೆ.ಎಂ.ಗಾಯತ್ರಿ ಸಲಹೆ ನೀಡಿದ್ದಾರೆ.

ಮೈಸೂರಿನ ಬೋಗಾದಿಯಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ಪದವಿ ಪೂರ್ವ ಕಾಲೇಜು ಬಾಲಕರ ವಿದ್ಯಾರ್ಥಿನಿಲಯದಲ್ಲಿ ಗುರುವಾರ ನಡೆದ ನೂತನ ಗ್ರಂಥಾಲಯ ಉದ್ಘಾಟನೆ ಹಾಗೂ ಸಾಹು ಮಹಾರಾಜ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಅಂಗವಾಗಿ ನಡೆದ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿ ಬಡ ಕುಟುಂಬದ ವಿದ್ಯಾರ್ಥಿಗಳೇ ಹೆಚ್ಚಾಗಿ ಸೇರುತ್ತಾರೆ. ಅದರಲ್ಲೂ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಸರ್ಕಾರಿ ವಿದ್ಯಾರ್ಥಿನಿಲಯವನ್ನೇ ಅವಲಂಬಿಸಿದ್ದಾರೆ. ಬಡತನವನ್ನು ಹೋಗಲಾಡಿಸಬೇಕಾದರೆ, ಶಿಕ್ಷಣ ಪಡೆದುಕೊಳ್ಳುವುದು ಮುಖ್ಯ.

ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ಜೀವನದಲ್ಲಿ ಸಂಸ್ಕಾರ, ಮೌಲ್ಯಗಳನ್ನು ಗಳಿಸಿಕೊಳ್ಳಬೇಕು. ಹೆಚ್ಚು ಪುಸ್ತಕಗಳನ್ನು ಓದುವ ಮುಖಾಂತರ ಜ್ಞಾನವನ್ನು ವೃದ್ಧಿಸಿಕೊಂಡು ನಿಮ್ಮ ಭವಿಷ್ಯವನ್ನು ನೀವೇ ರೂಪಿಸಿಕೊಳ್ಳಬೇಕು. ಸರ್ಕಾರ ಓದಲು ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ನಾನು ಯಾವ ಹಿನ್ನೆಲೆಯಲ್ಲಿ ಬಂದಿದ್ದೇನೆ. ನನ್ನ ಸಾಮಾಜಿಕ ಜವಾಬ್ದಾರಿ ಏನು? ಎಂಬ ಅರಿವು ನಿಮಗೆ ಇರಬೇಕು. ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸಾಹು ಮಹಾರಾಜರ ಆದರ್ಶ ತತ್ವಗಳನ್ನು ಅಳವಡಿಸಿಕೊಂಡು ನಿಮ್ಮ ಜೀವನವನ್ನು ರೂಪಿಸಿಕೊಳ್ಳಿ ಎಂದರು.

ಜಿ.ಪಂ ನಿವೃತ್ತ ಉಪಕಾರ್ಯದರ್ಶಿ ಡಾ.ಎಸ್. ಪ್ರೇಮ್‌ಕುಮಾರ್ ಮಾತನಾಡಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿದಿನ 14 ಗಂಟೆ ಓದುತ್ತಿದ್ದರು. ವಿದ್ಯಾರ್ಥಿಗಳು ಪ್ರತಿದಿನ 5 ಗಂಟೆ ಓದಿ 5 ವರ್ಷ ಕಷ್ಟಪಟ್ಟರೆ, ಉದ್ದೇಶಿತ ಗುರಿ ತಲುಪಿ ಮುಂದಿನ 50 ವರ್ಷ ಸುಖವಾಗಿರಬಹುದು. ನಿಮ್ಮ ಯಶಸ್ಸು ನಿಮ್ಮ ಕೈಯ್ಯಲ್ಲಿಯೇ ಇದೆ. ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲರಿಗೂ ಸರ್ಕಾರಿ ಕೆಲಸ ಸಿಗುವುದಿಲ್ಲ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯು ಇಂಗ್ಲಿಷ್ ಮತ್ತು ಕಂಪ್ಯೂಟರ್ ಜ್ಞಾನವನ್ನು ಗಳಿಸುವುದು ಅನಿವಾರ್ಯವಾಗಿದೆ ಎಂದರು.

> ಸರ್ಕಾರ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ಅಗತ್ಯ ಸೌಲಭ್ಯ ಕಲ್ಪಿಸಿದೆ. 2 ಸಾವಿರ ವರ್ಷದಿಂದ ಶಿಕ್ಷಣದಿಂದ ವಂಚಿತರಾಗಿದ್ದ ಶೋಷಿತ ಸಮುದಾಯಕ್ಕೆ ಇಂದು ಸಂವಿಧಾನ ಎಲ್ಲವನ್ನು ನೀಡಿದೆ. ವಿದ್ಯಾರ್ಥಿಗಳು ಟಿವಿ, ಮೊಬೈಲ್ ಬಳಕೆ ಚಟ, ಮೌಢ್ಯತೆ ಬಿಟ್ಟು, ದೃಢಸಂಕಲ್ಪ ಮಾಡಿ ಗುರಿ ಇಟ್ಟುಕೊಂಡು ಸಾಧನೆ ಮಾಡಿ ಯಶಸ್ಸು ಗಳಿಸಿ.
> - ಪುರುಷೋತ್ತಮ್, ಮಾಜಿ ಮೇಯರ್

ಸಮಾರಂಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಬಿ. ರಂಗೇಗೌಡ, ಸಹಾಯಕ ನಿರ್ದೇಶಕ ಕೆ. ಸಿದ್ದಲಿಂಗು, ಸರಸ್ವತಿಪುರಂ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಎಸ್.ಎಸ್. ಲತಾ, ಜಿಲ್ಲಾ ವಾರ್ಡನ್ ಸಂಘದ ಅಧ್ಯಕ್ಷ ಜಿ. ಶಿವಮಲ್ಲಯ್ಯ, ನಿಲಯಪಾಲಕ ಚಿಕ್ಕೀರಯ್ಯ ಹಾಗೂ ಎಲ್ಲಾ ನಿಲಯಪಾಲಕರು, ಸಿಬ್ಬಂದಿಗಳು ಉಪಸ್ಥಿತರಿದ್ದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ರಾಜ್ಯಾದ್ಯಂತ 650ಕ್ಕೂ ಹೆಚ್ಚು ಅಧಿಕ ಕೆರೆಗಳಿಗೆ ಕಾಯಕಲ್ಪ

ಇದರ ಫಲವಾಗಿ ಎಲ್ಲೆಡೆ ಅಂತರ್ಜಲದಲ್ಲಿ ಸುಧಾರಣೆ



ಮೈಸೂರು ತಾಲೂಕಿನ ದಂಡಿಕೆರೆ ಗ್ರಾಮದ ಕೆರೆ ಅಭಿವೃದ್ಧಿ ಬಳಿಕ ಪೂಜೆ ಮಾಡಿ ಹಸ್ತಾಂತರಿಸಲು ಪೂಜೆ ನೆರವೇರಿಸುತ್ತಿರುವುದು.

ಮೈಸೂರು, ಸೆ.28(ಎಂಟಿವೈ)- ಅಂತರ್ಜಲ ಮಟ್ಟ ಸುಧಾರಿಸುವುದರೊಂದಿಗೆ ರೈತರಿಗೆ ಕೃಷಿ ಚಟುವಟಿಕೆ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಲಭ್ಯತೆಗಾಗಿ ರಾಜ್ಯದಾದ್ಯಂತ 650ಕ್ಕೂ ಹೆಚ್ಚು ಕೆರೆಗಳನ್ನು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಅಭಿವೃದ್ಧಿ ಮಾಡಲಾಗಿದೆ ಎಂದು ಯೋಜನೆಯ ಕಾರ್ಯ ನಿರ್ವಾಹಕ ನಿರ್ದೇಶಕ ಡಾ.ಎಚ್. ಎಲ್. ಮಂಜುನಾಥ್ ತಿಳಿಸಿದ್ದಾರೆ.

ತಾಲೂಕಿನ ದಂಡಿಕೆರೆ, ವರುಣ ಸೇರಿದಂತೆ ವಿವಿಧೆಡೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ವಾತ್ಸಲ್ಯ ಮನೆ, ಕೆರೆ ಹಸ್ತಾಂತರ ಹಾಗೂ ಸಾಮೂಹಿಕ ಸತ್ಯನಾರಾಯಣ ಪೂಜೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಬರಗಾಲ ಆವರಿಸಿದೆ. ಇದರಿಂದ ಮುಂದಿನ ದಿನಗಳಲ್ಲಿ ಸಮಸ್ಯೆ ಬಿಗಡಾಯಿಸುವ ಸಾಧ್ಯತೆ ಇದೆ. ಹಾಗಾಗಿ ಜನರೇ ಮುಂದೆ ಬಂದು ಕೆರೆಗಳ ಅಭಿವೃದ್ಧಿಗೆ ಮುಂದಾಗಬೇಕು. ನಮ್ಮ ಕೆರೆಗಳನ್ನು ನಾವೇ ರಕ್ಷಣೆ ಮಾಡುವ ಕೆಲಸ ಆರಂಭಿಸಬೇಕು. ಕೆರೆ ಎಂದರೆ ಅದು ಊರಿನ ಆಸ್ತಿ ಎಂದು ಜನರು ತಿಳಿದುಕೊಳ್ಳುವವರೆಗೂ ನೀರಿನ ರಕ್ಷಣೆ ಮಾಡಲು ಸಾಧ್ಯವಿಲ್ಲ. ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಹಾಗೂ ಹೇಮಾವತಿ ಹೆಗ್ಗಡೆ ಅವರ ಮಾರ್ಗದರ್ಶನದಲ್ಲಿ ನಾಡಿನಲ್ಲಿ ಕೆರೆಗಳ ಪುನಶ್ಚೇತನ ಮಾಡುವ ಕಾರ್ಯಕ್ಕೆ ಮುಂದಾಗಿದ್ದು, ಅಂತರ್ಜಲ ಮಟ್ಟ ಸುಧಾರಿಸುತ್ತಿದೆ ಎಂದು ತಿಳಿಸಿದರು.

ದಂಡಿಕೆರೆಯಲ್ಲಿ ಸುಮಾರು ನಾಲ್ಕೂವರೆ ಎಕರೆ ಪ್ರದೇಶದ ಕೆರೆಯನ್ನು 8 ಲಕ್ಷ ರೂ ವೆಚ್ಚದಲ್ಲಿ ಅಭಿವೃದ್ಧಿ ಮಾಡಲಾಗಿದೆ. ಶ್ರೀ ಮಂಜುನಾಥ ಸ್ವಾಮಿಯ ಆಶೀರ್ವಾದದಿಂದ ಮಳೆ ಆಗಿ, ಈಗ ಕೆರೆ ತುಂಬಿದೆ. 2015ರಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಸಂಸ್ಥೆಯಿಂದ 'ನಮ್ಮೂರು ನಮ್ಮ ಕೆರೆ' ಕಾರ್ಯಕ್ರಮದಡಿ ನಾಡಿನ ಕೆರೆಗಳನ್ನು ಪುನಶ್ಚೇತನಗೊಳಿಸಲು ಆರಂಭಿಸಲಾಯಿತು. ಗ್ರಾಮಸ್ಥರ ಸಹಕಾರದಿಂದ ಕೆರೆಗಳ ಅಭಿವೃದ್ಧಿ ಮಾಡಲಾಗುತ್ತಿದೆ. ಇದರಿಂದ ಲಕ್ಷಾಂತರ ಬೋರ್‌ವೆಲ್‌ಗಳಲ್ಲಿ ಅಂತರ್ಜಲ ಮಟ್ಟ ಸುಧಾರಿಸಿದೆ ಎಂದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ವಾತ್ಸಲ್ಯ ಮನೆ ಹಸ್ತಾಂತರ ಮಾಡಿದರು. ದಂಡಿಕೆರೆಯ ಶ್ರೀ ಬಸವಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ವರುಣ ಗ್ರಾಪಂ ಅಧ್ಯಕ್ಷೆ ಗೌರಮ್ಮ ಕಾರ್ಯಕ್ರಮವನ್ನು ಉದ್ಘಾಟಿಸಿದರು. ವರುಣದಲ್ಲಿರುವ ದೇವಮ್ಮ ದೇವಸ್ಥಾನ ಆವರಣದಲ್ಲಿ ಸಾಮೂಹಿಕ ಸತ್ಯನಾರಾಯಣ ಪೂಜೆ ನೆರವೇರಿತು. ಇದೇ ಸಂದರ್ಭದಲ್ಲಿ ಪ್ರಾದೇಶಿಕ ನಿರ್ದೇಶಕ ಜಯರಾಮ ನೆಲ್ಲಿತ್ತಾಯ, ಜಿಲ್ಲಾ ನಿರ್ದೇಶಕ ಲಕ್ಷ್ಮಣ್, ತಾಲೂಕು ಯೋಜನಾಧಿಕಾರಿ ನಂದಿನಿ ಸೇಟ್, ವಲಯದ ಮೇಲ್ವಿಚಾರಕರು, ಸೇವಾ ಪ್ರತಿನಿಧಿಗಳು ಹಾಗೂ ಗ್ರಾಮಸ್ಥರು ಹಾಜರಿದ್ದರು.

'ಕರ್ನಾಟಕ ಬಂದ್'ಗೆ ಗುಲಾಬಿ ಹೂ ನೀಡಿ ವಿಷ್ಣುಸೇನಾ ಸಮಿತಿ ಬೆಂಬಲ ಕೋರಿಕೆ



ಮೈಸೂರು, ಸೆ. 28- ಮೈಸೂರು ನಗರದ ಪ್ರಮುಖ ದೇವರಾಜ ಅರಸು ರಸ್ತೆಯಲ್ಲಿ ಪ್ರತಿಯೊಂದು ಅಂಗಡಿ, ರಸ್ತೆ ಬದಿ ವ್ಯಾಪಾರಿಗಳು ಮತ್ತು ಪಾದಚಾರಿಗಳಿಗೆ ಗುಲಾಬಿ ಹೂ ನೀಡಿ, ಕರ್ನಾಟಕ ಬಂದ್ ಬೆಂಬಲಿಸುವಂತೆ ವಿಷ್ಣು ಸೇನಾ ಸಮಿತಿ ವತಿಯಿಂದ ಮನವಿ ಮಾಡಿದರು

ಈ ವೇಳೆ ವಿಷ್ಣುಸೇನಾ ಸಮಿತಿಯ ಅಧ್ಯಕ್ಷ ಎಂ.ಡಿ. ಪಾರ್ಥಸಾರಥಿ ಮಾತನಾಡಿ, ಕನ್ನಡ ನೆಲ, ಜಲ, ಭಾಷೆ ವಿಚಾರ ಬಂದಾಗ ಅಂದಿನಿಂದಲೂ ಡಾ.ರಾಜಕುಮಾರ್ ಹಾಗೂ ವಿಷ್ಣುವರ್ಧನ್ ಹೋರಾಟಕ್ಕೆ ನಿಲ್ಲುತ್ತಿದ್ದರು. ಅದರಂತೆ ನಾಳೆ ನಡೆಯುವ ಕರ್ನಾಟಕ ಬಂದ್ ಯಶಸ್ವಿಯಾಗಲು ಸಹಕರಿಸುವಂತೆ ಅಂಗಡಿ ಮಾಲೀಕರು ಹಾಗೂ ನೌಕರರಿಗೆ ಗುಲಾಬಿ ಹೂ ನೀಡಿ ಮನವಿ ಮಾಡಿದ್ದೇವೆ. ನಾಳೆಯೂ ನಮ್ಮ ವಿಷ್ಣುವರ್ಧನ್ ಸೇನಾ ಸಮಿತಿ ವತಿಯಿಂದ ಪ್ರಮುಖ ರಸ್ತೆ, ವೃತ್ತದಲ್ಲಿ ಮಳಿಗೆಗಳ ಬಂದ್ ಮಾಡಿಸಲು ಮುಂದಾಗುತ್ತೇವೆ ಎಂದು ಹೇಳಿದರು.

ಸಾಮಾಜಿಕ ಹೋರಾಟಗಾರ ವಿಕ್ರಮ ಅಯ್ಯಂಗಾರ್ ಮಾತನಾಡಿ, ಕಾವೇರಿ ನದಿ ನೀರು ಹಂಚಿಕೆಯಲ್ಲಿ ಹಿಂದಿನಿಂದಲೂ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಈ ವರ್ಷವೇ ಕಾವೇರಿ ನದಿ ನೀರು ಹಂಚಿಕೆಯ ವಿಷಯ ಶಾಶ್ವತವಾಗಿ ಪರಿಹಾರ ಕಾಣುವಂತೆ ಗೋಕಾಕ್ ಚಳವಳಿ ಮಾದರಿಯಲ್ಲಿ ಶಾಂತಿಯುತ ಹೋರಾಟ ಮಾಡಬೇಕು.

ಅಜಯ್ ಶಾಸ್ತ್ರಿ ಸಂತೋಷ್, ಮುಬಾರಕ್, ನಂಜಪ್ಪ, ವಾಲೆ ಕುಮಾರ್, ಮಹದೇವ್ ಸ್ವಾಮಿ, ಜಬಿ, ಬಸವಣ್ಣ, ಮುರಳಿ, ತಬ್ರೀಜ್ ವಿಷ್ಣು ಅಭಿಮಾನಿಗಳು ಹಾಜರಿದ್ದರು.

ಬಂದ್‌ಗೆ ಜಯ ಕರ್ನಾಟಕ ಬೆಂಬಲ



ಮೈಸೂರು, ಸೆ.28(ಜಿಎ)- ತಮಿಳುನಾಡಿಗೆ ಕಾವೇರಿ ನೀರು ಬಿಡದಂತೆ ಆಗ್ರಹಿಸಿ ವಿವಿಧ ಸಂಘ-ಸಂಸ್ಥೆಗಳು ಕರೆ ನೀಡಿರುವ ಕರ್ನಾಟಕ ಬಂದ್‌ಗೆ ಜಯ ಕರ್ನಾಟಕ ಸಂಘಟನೆ ಸಂಪೂರ್ಣ ಬೆಂಬಲ ನೀಡಲಿದೆ ಎಂದು ಸಂಘಟನೆಯ ಕಾರ್ಯಾಧ್ಯಕ್ಷ ಶ್ರೀನಿವಾಸ್ ರಾವ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಂದ್ ಬೆಂಬಲಿಸಿ ನಾಳೆ(ಶುಕ್ರವಾರ) ಬೆಳಗ್ಗೆ 11 ಗಂಟೆಗೆ ನಗರದ ಗಾಂಧಿ ವೃತ್ತದಲ್ಲಿ ಶಾಂತಿಯುತ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಎಲ್ಲಾ ಕನ್ನಡ ಪರ ಸಂಘಟನೆಗಳು, ಸಂಸ್ಥೆಗಳು, ಸಾರ್ವಜನಿಕರು ಸಹಕಾರ ನೀಡಬೇಕು' ಎಂದು ಮನವಿ ಮಾಡಿದರು.

ಪ್ರತಿ ವರ್ಷವೂ ಕಾವೇರಿ ವಿಚಾರದಲ್ಲಿ ತಮಿಳುನಾಡಿಗೆ ಹೆಚ್ಚು ಲಾಭವಾಗುತ್ತಿರುವುದು ದುರದೃಷ್ಟಕರ. ರಾಜ್ಯದಲ್ಲಿ ಬರಗಾಲದಿಂದ ರೈತರು, ಜನಸಾಮಾನ್ಯರಿಗೆ ನೀರಿನ ಹಾಹಾಕಾರ ಇದ್ದರೂ, ತಮಿಳುನಾಡಿಗೆ ನೀರು ಹರಿಸುತ್ತಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು.

ರಾಜ್ಯ ಸಂಘಟನಾ ಕಾರ್ಯದರ್ಶಿ ವಿಜಯಗೌಡ ಮಾತನಾಡಿ, ಈ ವಿಚಾರವಾಗಿ ಎಲ್ಲ ರಾಜಕೀಯ ಪಕ್ಷಗಳು ತಮಿಳುನಾಡಿನ ಧೋರಣೆ ಖಂಡಿಸುವಲ್ಲಿ ವಿಫಲವಾಗಿವೆ. ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿ, ನಂತರ ಅವರ ಆಶಯಗಳಿಗೆ ವಿರುದ್ಧವಾಗಿ ಆಡಳಿತ ನಡೆಸಲಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಸಂಘಟನೆ ನಗರ ಕಾರ್ಯಾಧ್ಯಕ್ಷ ರಾಜು ಮಾರ್ಕೆಟ್ ಮಾತನಾಡಿ, ನಮ್ಮ ರಾಜ್ಯದ ಸಂಸದರು ಇದರ ಬಗ್ಗೆ ಧ್ವನಿ ಎತ್ತದಿರುವುದು ವಿಪರ್ಯಾಸ. ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಅವರಿಗೆ ತಕ್ಕಪಾಠ ಕಲಿಸಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಶ್ರೀಧರನಾಯಕ, ಜಿಲ್ಲಾ ಉಪಾಧ್ಯಕ್ಷ ಕಾಂತರಾಜು, ನಗರ ಅಧ್ಯಕ್ಷ ಹರ್ಷ ಉಪಸ್ಥಿತರಿದ್ದರು.

ಕರ್ನಾಟಕ ಬಂದ್‌ಗೆ ರೈತ ಸಂಘದ ಬೆಂಬಲ

ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇ ಬಂದ್‌ಗೂ ನಿರ್ಧಾರ



ಮೈಸೂರು, ಸೆ.28(ಜಿಎ)-ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಶುಕ್ರವಾರ ವಿವಿಧ ಸಂಘಟನೆಗಳು ಕರೆ ನೀಡಿರುವ ಕರ್ನಾಟಕ ಬಂದ್‌ಗೆ ರಾಜ್ಯ ರೈತ ಸಂಘ ಸಂಪೂರ್ಣ ಬೆಂಬಲಿಸಲಿದ್ದು, ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇ ಅನ್ನು ಸಂಪೂರ್ಣ ಬಂದ್ ಮಾಡುತ್ತೇವೆಂದು ಸಂಘಟನೆಯ ಯುವ ಮುಖಂಡ ಪ್ರಸನ್ನ ಎನ್.ಗೌಡ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ 177 ತಾಲೂಕಿ ನಲ್ಲಿರುವ ಘಟಕಗಳಿಂದ ಬಂದ್‌ಗೆ ಬೆಂಬಲವಿದ್ದು, ಎಲ್ಲಾ ಹೆದ್ದಾರಿ ರಸ್ತೆ ತಡೆದು ಶಾಂತಿಯುತ ಪ್ರತಿಭಟನೆ ಮಾಡುತ್ತೇವೆ. ಈ ರಸ್ತೆ ತಡೆಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಮತ್ತು ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ನೇತೃತ್ವ ವಹಿಸಲಿದ್ದಾರೆ ಎಂದರು.

ರಾಜ್ಯದ ಪ್ರತಿಯೊಬ್ಬರೂ ಈ ಬಂದ್ ನಲ್ಲಿ ಸ್ವಯಂಪ್ರೇರಿತವಾಗಿ ಪಾಲ್ಗೊಳ್ಳಬೇಕು. ಈಗಿನ ಪರಿಸ್ಥಿತಿಯಲ್ಲಿ ತಮಿಳುನಾಡಿಗೆ ನೀರು ಬಿಡಲು ಸಾಧ್ಯವಿಲ್ಲ. ಒಂದು ವೇಳೆ ಸುಪ್ರೀಂಕೋರ್ಟ್ ತೀರ್ಪು ಪಾಲನೆ ಮಾಡಿದರೆ, ರಾಜ್ಯದಲ್ಲಿ ಕುಡಿಯುವ ನೀರಿಗೆ ತೊಂದರೆ ಎದುರಾಗಲಿದೆ. ಆದ್ದರಿಂದ ನೀರು ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ. ಕಾವೇರಿ ನೀರಿನ ವಿವಾದ ನಿನ್ನೆ ಮೊನ್ನೆಯ ವಿಚಾರವಲ್ಲ. ಇದು ಹಲವಾರು ವರ್ಷಗಳ ಸಮಸ್ಯೆಯಾಗಿದೆ. ಆದರೂ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವಲ್ಲಿ ರಾಜಕೀಯ ಪಕ್ಷಗಳೂ ಸೋತಿವೆ ಇದಕ್ಕೊಂದು ಶಾಶ್ವತ ಪರಿಹಾರ ಕಂಡುಕೊಳ್ಳಬೇಕು. ಅಲ್ಲದೆ ರಾಜ್ಯದಲ್ಲಿ ಬರಗಾಲ ಎದುರಾಗಬಹುದು ಎಂದು ಸರ್ಕಾರಕ್ಕೆ ಸಂಘಟನೆ ಜೂನ್ ತಿಂಗಳಲ್ಲೇ ಎಚ್ಚರಿಸಿದ್ದೂ, ಈ ಬಗ್ಗೆ ಸೂಕ್ತಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಮುಖಂಡರಾದ ಹೊಸಕೋಟೆ ಬಸವರಾಜು, ಮಂಡಕಳ್ಳಿ ಮಹೇಶ್, ಆನಂದೂರು ಪ್ರಭಾಕರ್, ನಾಗನಹಳ್ಳಿ ವಿಜಯೇಂದ್ರ, ಹೊಸೂರು ಕುಮಾರ್, ಮರಂಕಯ್ಯ ಉಪಸ್ಥಿತರಿದ್ದರು.

ಮೈಸೂರಲ್ಲಿ ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಜನ್ಮ ದಿನಾಚರಣೆ





ಮೈಸೂರು, ಸೆ.28(ಎಂಟಿವೈ)- ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಎಐಡಿಎಸ್‌ಓ ಕಾರ್ಯಕರ್ತರು ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಜನ್ಮದಿನ ಆಚರಿಸಿದರು.

ವಿವಿಧ ಕಾಲೇಜು ವಿದ್ಯಾರ್ಥಿಗಳು ಎಐಡಿಎಸ್‌ಓ ಕಾರ್ಯಕರ್ತರೊಂದಿಗೆ ಸೇರಿ ಭಗತ್‌ಸಿಂಗ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ನಮಿಸಿದರು. ಬಳಿಕ ಭಗತ್‌ಸಿಂಗ್ ಅವರಿಗೆ ಜೈಕಾರ ಹಾಕಿದರು. ದೇಶಕ್ಕೆ ಸ್ವಾತಂತ್ರ್ಯ ಕಲ್ಪಿಸಲು ಬ್ರಿಟಿಷರ ವಿರುದ್ಧ ಭಗತ್‌ಸಿಂಗ್ ನಡೆಸಿದ ಹೋರಾಟ ಸ್ಮರಣೀಯ. ಬ್ರಿಟಿಷರು ಎಷ್ಟೇ ತೊಂದರೆ ನೀಡಿದರೂ ಭಗತ್ ಸಿಂಗ್ ಅವರ ನಿಲುವಿನಲ್ಲಿ ಬದಲಾವಣೆ ಆಗಲಿಲ್ಲ. ಅವರ ಹೋರಾಟದ ತೀವ್ರತೆಗೆ ಬ್ರಿಟಿಷರೇ ಕಂಗೆಟ್ಟಿದ್ದರು. ಇಂತಹ ಮಹಾನ್ ನಾಯಕನನ್ನು ವಿದ್ಯಾರ್ಥಿಗಳು ಸ್ಮರಿಸಬೇಕು ಎಂದು ಎಐಡಿಎಸ್‌ಓ ಕಾರ್ಯಕರ್ತರು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯೆ ಸ್ವಾತಿ, ಜಿಲ್ಲಾ ಅಧ್ಯಕ್ಷ ಸುಭಾಷ್, ಕಾರ್ಯದರ್ಶಿ ಚಂದ್ರಕಲಾ, ಪದಾಧಿಕಾರಿಗಳಾದ ನಿತಿನ್, ಸ್ವಾತಿ, ಹೇಮಾ, ಚಂದ್ರಿಕಾ, ಚಂದನ, ಅಂಜಲಿ, ದಿಶಾ, ತೇಜು, ವಿದ್ಯಾರ್ಥಿಗಳಾದ ದರ್ಶನ್ ಶ್ರೀಶೈಲ್, ಸಿದ್ದರಾಜು, ರಕ್ಷಿತಾ, ಬಬಿತಾ ಹಾಗೂ ಮಹಾರಾಜ ,ಮಹಾರಾಣಿ, ಇಲವಾಲ ಕಾಲೇಜಿನ ವಿದ್ಯಾರ್ಥಿಗಳು ಹಾಜರಿದ್ದರು.

ಎಐಡಿವೈಓ: ಸ್ವಾತಂತ್ರ್ಯ ಹೋರಾಟಗಾರ ಭಗತ್‌ಸಿಂಗ್ ಅವರ ಜನ್ಮದಿನವನ್ನು ಓವಲ್ ಮೈದಾನ ಸೇರಿದಂತೆ ವಿವಿಧೆಡೆ ಕ್ರೀಡಾಸಕ್ತರೊಂದಿಗೆ ಭಗತ್‌ಸಿಂಗ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಎಐಡಿವೈಓ ಕಾರ್ಯಕರ್ತರು ನಮಿಸಿದರು. ಬಳಿಕ ತಮ್ಮ ಕಚೇರಿಯಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳಿಗೆ ಭಗತ್ ಸಿಂಗ್ ಜೀವನ, ಹೋರಾಟದ ಕುರಿತಾದ 'ದಿ ಲೆಜೆಂಡ್ ಆಫ್ ಭಗತ್‌ಸಿಂಗ್' ಸಿನಿಮಾವನ್ನು ಪ್ರದರ್ಶಿಸಲಾಯಿತು.

ಈ ವೇಳೆ ಸಂಘಟನೆಯ ಮೈಸೂರು ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ್ ಮೇಟಿ ಮಾತನಾಡಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ 'ರಾಜಿರಹಿತ' ಮತ್ತು 'ರಾಜಿಪರ' ಎರಡು ಪಂಥಗಳಿದ್ದವು. ವೈಚಾರಿಕ ಭಿನ್ನತೆಗಳು ಕಂಡುಬಂದವು. ಇಂದಿನ ಯುವಜನರು ಭಗತ್‌ಸಿಂಗ್‌ರ ಅಪೂರ್ಣಗೊಂಡ ಕನಸಿನ ಮಾರ್ಗವನ್ನು ಮುನ್ನಡೆಸುವ ಉತ್ತರಾಧಿಕಾರಿ ಗಳಾಗಿ ಮಾರ್ಪಾಡಾಗಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘಟನೆಯ ಕಾರ್ಯದರ್ಶಿ ಎಸ್. ಸುಮಾ ವಹಿಸಿದ್ದರು. ಸಂಘಟನೆಯ ಉಪಾಧ್ಯಕ್ಷ ನಿರಂಜನ್ ಹಿರೇಮಠ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘಟನೆಯ ಜಿಲ್ಲಾಧ್ಯಕ್ಷ ಸುನಿಲ್ ಟಿ.ಆರ್., ಜಂಟಿ ಕಾರ್ಯದರ್ಶಿ ನೀತುಶ್ರೀ, ಸದಸ್ಯರಾದ ಸೂರ್ಯ, ಸುಬ್ರಮಣಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಈ ವಾರ 'ತೋತಾಪುರಿ ಚಾಪ್ಟರ್-2' ತೆರೆಗೆ

ಹಿಂದೆ ಮಾಡಿದ ತೋತಾಪುರಿ ಚಿತ್ರಕ್ಕೆ ಅದ್ಭುತ ಪ್ರತಿಕ್ರಿಯೆ ಸಿಕ್ಕಿತ್ತು. ಈಗ ಆ ಚಿತ್ರದ ಎರಡನೇ ಭಾಗ ರಿಲೀಸಾಗಿದೆ. ನವರಸ ನಾಯಕ ಜಗ್ಗೇಶ್, ಅದಿತಿ ಪ್ರಭುದೇವ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದ ಆ ಚಿತ್ರಕ್ಕೆ ವಿಜಯಪ್ರಸಾದ್ ಆಕ್ಷನ್ ಕಟ್ ಹೇಳಿದ್ರು. ನಿರ್ಮಾಪಕ ಕೆ.ಎ.ಸುರೇಶ್ ಅವರು ಚಿತ್ರವನ್ನು ಅದ್ದೂರಿಯಾಗಿ ನಿರ್ಮಾಣ ಮಾಡಿದ್ದರು. ಈಗ ತೋತಾಪುರಿ ಚಿತ್ರದ ಸೀಕ್ವೆಲ್ ಬಿಡುಗಡೆಯಾಗಿದ್ದು, ಜನರನ್ನು ಸೆಳೆಯುತ್ತಿದೆ. ತೋತಾಪುರಿ ಚಿತ್ರದ ಎರಡನೇ ಭಾಗದ ಕಥೆ ಹೇಗಿರಬಹುದೆಂಬ ಕುತೂಹಲ ಪ್ರೇಕ್ಷಕರಲ್ಲಿದೆ, ಈ ಭಾಗದಲ್ಲಿ ಡಾಲಿ ಧನಂಜಯ್ ಅವರು ಸೇರ್ಪಡೆಯಾಗಿದ್ದಾರೆ, 'ತೋತಾಪುರಿ ಪಾರ್ಟ್-2'ನಲ್ಲಿ ಬೇರೆಯದೇ ಕಥೆಯಿದ್ದು, ಸಾಕಷ್ಟು ವಿಶೇಷತೆಗಳನ್ನು ಒಳಗೊಂಡಿದೆ. ಇಲ್ಲಿ ಜಗ್ಗೇಶ್, ಅದಿತಿ ಪ್ರಭುದೇವ ಅವರ ಜೊತೆ ಡಾಲಿ, ಸುಮನ್ ರಂಗನಾಥ್ ಅವರ ಪ್ರೇಮ ಕಥೆಯೂ ಸಾಗುತ್ತದೆ. ಅಲ್ಲದೆ ಕರ್ನಾಟಕ ಬಿಟ್ಟು ಹೊರ ರಾಜ್ಯಗಳಲ್ಲೂ ಸಹ ಚಿತ್ರವನ್ನು ಶೂಟ್ ಮಾಡಿದ್ದೇವೆ. ನಮ್ಮ ನಿರೀಕ್ಷೆಯಂತೆ ತೋತಾಪುರಿ ಸಿನಿಮಾದ ಸೀಕ್ವೆಲ್ ಕೂಡ ತುಂಬಾ ಚೆನ್ನಾಗಿಯೇ ಮೂಡಿಬಂದಿದೆ. ಪ್ರೇಕ್ಷಕರಿಗೆ ಇಷ್ಟವಾಗುವಂಥ ಸಾಕಷ್ಟು ಮನರಂಜನಾತ್ಮಕ ಕಂಟೆಂಟ್ ಈ ಚಿತ್ರದಲ್ಲಿದೆ. ಥೇಟರಿಗೆ ಬರುವ ಪ್ರೇಕ್ಷಕರಿಗೆ ಉತ್ತಮ ಮನರಂಜನೆ, ಕಾಮಿಡಿ ಪಂಚಿಂಗ್ ನೀಡಲಿದೆ ಎಂದು ನಿರ್ಮಾಪಕ ಕೆ.ಎ. ಸುರೇಶ್ ಅವರು ಹೇಳಿದ್ದಾರೆ. ಈ ಚಿತ್ರದಲ್ಲಿ ಡಾಲಿ ಧನಂಜಯ್, ಸುಮನ್ ರಂಗನಾಥ್, ಜಗ್ಗೇಶ್, ಅದಿತಿ ಪ್ರಭುದೇವ, ದತ್ತಣ್ಣ, ವೀಣಾ ಸುಂದರ್, ಹೇಮಾದತ್ ಇತರರು ಪ್ರಮುಖ ಪಾತ್ರಗಳಲ್ಲಿದ್ದಾರೆ.



'ಅಲೆಕ್ಸಾ'ದಲ್ಲಿ ಪವನ್‌ತೇಜ್, ಅದಿತಿ ಪ್ರಭುದೇವ್

ಜೋಡಿ ಕೊಲೆಯ ಸುತ್ತ 'ಅಲೆಕ್ಸಾ'

ಪವನ್‌ತೇಜ್ ಹಾಗೂ ಅದಿತಿ ಪ್ರಭುದೇವ ಪ್ರಮುಖ ಪಾತ್ರದಲ್ಲಿ ನಟಿಸಿರುವ ಥ್ರಿಲ್ಲರ್ ಕಥೆಯ ಅಲೆಕ್ಸಾ ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು. ಜೀವ ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಈ ಈ ಚಿತ್ರಕ್ಕೆ ವಿ.ಚಂದ್ರು ಅವರು ಬಂಡವಾಳ ಹೂಡಿದ್ದಾರೆ,

ಇದೊಂದು ಮರ್ಡರ್ ಮಿಸ್ಟರಿ ಸುತ್ತ ನಡೆಯುವ ತನಿಖೆಯ ಹಾದಿ ಹೇಳುವ ಚಿತ್ರ. ನಾನು ಹೇಳಿದ ಕಥೆ ಕೇಳಿದ ತಕ್ಷಣ ನಿರ್ಮಾಪಕರು ಇಷ್ಟಪಟ್ಟು ನಿರ್ಮಾಣಕ್ಕೆ ಮುಂದಾದರು. ಮೊದಲ ಬಾರಿಗೆ ಇನ್ವೆಸ್ಟಿಗೇಶನ್ ಆಫೀಸರ್ ಆಗಿ ಅದಿತಿ ಪ್ರಭದೇವ ಅವರು ನಟಿಸಿದ್ದಾರೆ. ಫಾರ್ಮಾಸೂಟಿಕಲ್ ಮಾಫಿಯಾ ಬಗ್ಗೆ ಕೂಡ ಚಿತ್ರದ ಕ್ಲೈಮ್ಯಾಕ್ಸ್‌ನಲ್ಲಿ ತೋರಿಸಿದ್ದೇವೆ. ಚಿತ್ರದ ಎರಡನೇ ಭಾಗವನ್ನು ಕೂಡ ತೆರೆಗೆ ತರುವ ಆಲೋಚನೆಯಿದೆ. ಮೈಸೂರು, ಮಡಿಕೇರಿ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದ್ದು, ಮೂರು ಹಾಡುಗಳು ಹಾಗೂ ನಾಲ್ಕು ಸಾಹಸ ಸನ್ನಿವೇಶಗಳು ಚಿತ್ರದಲ್ಲಿದೆ ಎಂದು ನಿರ್ದೇಶಕ ಜೀವ ತಿಳಿಸಿದರು.

ನನಗೆ ನಿಜಜೀವನದಲ್ಲಿ ಪೊಲೀಸ್ ಅಧಿಕಾರಿಯಾಗಬೇಕೆಂಬ ಕನಸಿತ್ತು. ಆದರೆ ಸಾಧ್ಯವಾಗಲಿಲ್ಲ. ಈ ಚಿತ್ರದಲ್ಲಿ ಆ ಆಸೆಯನ್ನು ಈಡೇರಿಸಿಕೊಂಡಿದ್ದೇನೆ, ನಿರ್ದೇಶಕರು ನೀವು ಈ ಚಿತ್ರದಲ್ಲಿ ಇನ್ವೆಸ್ಟಿಗೇಶನ್ ಆಫೀಸರ್ ಅಂದ ತಕ್ಷಣ ಒಪ್ಪಿಕೊಂಡೆ. ಸಾಹಸ ದೃಶ್ಯಗಳಲ್ಲಿ ಕಾಣಿಸಿಕೊಳ್ಳುವ ಕನಸೂ ಈ ಚಿತ್ರದಲ್ಲಿ ನನಸಾಗಿದೆ ಎಂದು ನಾಯಕಿ ಅದಿತಿ ಪ್ರಭುದೇವ ಹೇಳಿದರು. ನಾಯಕ ಪವನ್ ತೇಜ್ ಮಾತನಾಡುತ್ತ ಚಿತ್ರದಲ್ಲಿ ಗಂಡ – ಹೆಂಡತಿ ಇಬ್ಬರದೂ ಕೊಲೆಯಾಗಿರುತ್ತದೆ. ಆ ಕೊಲೆಯ ಹಿಂದೆ ಯಾರ್‍ಯಾರ ಕೈವಾಡವಿದೆ ಎಂದು ತನಿಖೆ ನಡೆಸುವ ಹಾದಿಯೇ ಕುತೂಹಲಕರವಾಗಿರುತ್ತದೆ, ಅದು ಹಲವಾರು ಟ್ವಿಸ್ಟ್ ಅಂಡ್ ಟರ್ನ್ ತೆಗೆದುಕೊಂಡು ಸಾಗುತ್ತದೆ ಎಂದು ಹೇಳಿದರು.

ನಿರ್ದೇಶಕರು ಹೇಳಿದ ಕಥೆ ಇಷ್ಟವಾಗಿ ಚಿತ್ರ ನಿರ್ಮಾಣಕ್ಕೆ ಮುಂದಾದೆ. ಸದ್ಯದಲ್ಲೇ ಚಿತ್ರವನ್ನು ಬಿಡುಗಡೆ ಮಾಡುವ ಯೋಜನೆಯಿದೆ ಎಂದು ನಿರ್ಮಾಪಕ ವಿ.ಚಂದ್ರು ಹೇಳಿದರು. ಪವನ್ ತೇಜ್, ಅದಿತಿ ಪ್ರಭುದೇವ, ನಾಗಾರ್ಜುನ್, ಮೇಘಶ್ರೀ, ಮಿಮಿಕ್ರಿ ಗೋಪಿ, ಚಂದ್ರಕಲಾ ಮೋಹನ್ ಮುಂತಾದವರು ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ. ಚಿತ್ರದಲ್ಲಿ ಒಟ್ಟು ಮೂರು ಹಾಡುಗಳಿದ್ದು, ಸತೀಶ್ ಬಿ. ಛಾಯಾಗ್ರಹಣ ನಿರ್ವಹಿಸಿದ್ದಾರೆ.

ಮೂರು ಆಯಾಮಗಳಲ್ಲಿ 'ಗರುಡ ಪುರಾಣ'


ಮಂಜುನಾಥ ಬಿ. ನಾಗಬಾ ಅವರ ನಿರ್ದೇಶನದ 'ಗರುಡ ಪುರಾಣ' ಚಿತ್ರದ ಟೀಸರ್ ಇತ್ತೀಚೆಗೆ ಅಶ್ವಿನಿ ಪುನೀತ್ ಅವರಿಂದ ಬಿಡುಗಡೆಯಾಯಿತು, ಸಿಂಧು ಕೆ.ಎಂ. ಮತ್ತು ಬಿ.ಎಲ್. ಯೋಗೇಶ್ ಕುಮಾರ್ ಅವರ ನಿರ್ಮಾಣದ ಈ ಚಿತ್ರಕ್ಕೆ ನಿರ್ದೇಶಕರೇ ಕಥೆ, ಚಿತ್ರಕಥೆ ಬರೆದು ನಾಯಕನಾಗೂ ಅಭಿನಯಿಸಿದ್ದಾರೆ, ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ಮಂಜುನಾಥ್ 'ಗರುಡ ಪುರಾಣ' ಚಿತ್ರದ ಕುರಿತು ಹೇಳಬೇಕಾದರೆ, ಇದೊಂದು ಕ್ರೈಂ, ಥ್ರಿಲ್ಲರ್ ಜಾನರ್ ಚಿತ್ರವಾಗಿದ್ದು, ತಪ್ಪು ಮಾಡಿದವರು ಶಿಕ್ಷೆ ಅನುಭವಿಸಲೇಬೇಕು ಎಂಬ ಕಾನ್ಸೆಪ್ಟ್ ಮೇಲೆ ಕಥೆ ಸಾಗುತ್ತದೆ, ಅದೇ ಕಾರಣದಿಂದ ಚಿತ್ರಕ್ಕೆ 'ಗರುಡ ಪುರಾಣ' ಎಂದು ಹೆಸರಿಟ್ಟಿದ್ದೇವೆ. ಮೂರು ಆಯಾಮಗಳಲ್ಲಿ ನಡೆಯುವ ಕುತೂಹಲಕರ ಕಥೆಯಿದು, ಕೊನೆಗೆ ಮೂರೂ ಟ್ರ್ಯಾಕ್ ಒಂದು ಕಡೆ ಎಂಡ್ ಆಗುತ್ತದೆ. ಅದಕ್ಕೆ 'ಗರುಡ ಪುರಾಣ' ಲಿಂಕ್ ಆಗುತ್ತದೆ. ಈಗಾಗಲೇ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ತೆರೆಗೆ ಬರಲು ಸಿದ್ದವಾಗಿದೆ. ನಮಗೆ ಮೊದಲಿನಿಂದಲೂ ಪ್ರೋತ್ಸಾಹ ನೀಡುತ್ತಿರುವ ರಾಜುಗೌಡ ಹಾಗೂ ತಿಪ್ಪರಾಜು ಅವರಿಗೆ ಧನ್ಯವಾದ ಎಂದರು. ಸಂಗೀತ ನಿರ್ದೇಶಕ ರಾಕೇಶ್ ಆಚಾರ್ಯ ಹಾಡುಗಳ ಬಗ್ಗೆ ಮಾತನಾಡುತ್ತ ಪ್ರಸಕ್ತ ವಿದ್ಯಮಾನಗಳಲ್ಲಿ ನಡೆಯುವ ಕ್ರೈಮ್, ಥ್ರಿಲ್ಲರ್ ಸಬ್ಜೆಕ್ಟ್ ಇದಾಗಿದ್ದು, ಚಿತ್ರದಲ್ಲಿ ಸಂದರ್ಭಕ್ಕೆ ತಕ್ಕಂತೆ ಕೇವಲ 2 ಹಾಡುಗಳಿವೆ ಎಂದರು. ಚಿತ್ರದಲ್ಲಿ ಮತ್ತೊಂದು ಪ್ರಮುಖ ಪಾತ್ರ ನಿರ್ವಹಿಸಿರುವ ಸಂತೋಷ್ ಕರ್ಕಿ ಮಾತನಾಡುತ್ತ ಈ ಚಿತ್ರದಲ್ಲಿ ನಾನು ಪೊಲೀಸ್ ಪಾತ್ರ ಮಾಡಿದ್ದು ಸಿನಿಮಾ ತುಂಬಾ ಚೆನ್ನಾಗಿ ಬಂದಿದೆ ಎಂದರು.

ನಿರ್ಮಾಪಕಿ ಸಿಂಧು ಮಾತನಾಡಿ ಇದು ನಮ್ಮ 2 ವರ್ಷಗಳ ಕನಸು, ನಿರ್ದೇಶಕ ಮಂಜು ಅವರ ಕನಸಿಗೆ ಎಲ್ಲರೂ ಸಪೋರ್ಟ್ ಮಾಡಿದ್ದರಿಂದಲೇ ಚಿತ್ರ ಇಷ್ಟು ಚೆನ್ನಾಗಿ ಮೂಡಿಬಂದಿದೆ ಎಂದು ಹೇಳಿದರು, ಚಿತ್ರದ ನಾಯಕಿ ದಿಶಾ ಶೆಟ್ಟಿ ಮಾತನಾಡುತ್ತ ನನ್ನ ಮೊದಲ ಚಿತ್ರ, ನಿರ್ದೇಶಕ ಮಂಜು, ಮಹೇಂದ್ರ ಬಂದು ನನಗೆ ಈ ಕಾನ್ಸೆಪ್ಟ್ ಹೇಳಿದರು, ಪಾತ್ರ ಕೇಳಿದ ತಕ್ಷಣ ಒಪ್ಪಿಕೊಂಡೆ ಎಂದರು. ಸಹನಿರ್ಮಾಪಕ ಬಿ.ಎಲ್. ಯೋಗೇಶ್ ಕುಮಾರ್ ಚಿತ್ರ ಕುರಿತು ಮಾತನಾಡಿದರು. ಸುನಿಲ್ ನರಸಿಂಹಮೂರ್ತಿ ಅವರ ಕ್ಯಾಮೆರಾ ವರ್ಕ್ ಈ ಚಿತ್ರಕ್ಕಿದೆ.



'ಗರುಡ ಪುರಾಣ'ದಲ್ಲಿ ಬಿ.ಎಲ್.ಯೋಗೇಶ್, ದಿಶಾಶೆಟ್ಟಿ

ಸಿನಿಪದಬಂಧ-493



ಹೆಸರು ______________________

ವಿಳಾಸ ______________________

____

ದೂರವಾಣಿ ಸಂಖ್ಯೆ ______________________

ಎಡದಿಂದ ಬಲಕ್ಕೆ

1. ಬಾಡದ ಹೂ ಚಿತ್ರದ ಕಥಾ ಲೇಖಕಿ 4
3. ರಾಧಾಕೃಷ್ಣರೆಡ್ಡಿ ನಿರ್ದೇಶನದ ಭ್ರಮೆಗಳ ಸಂತೆ 5
5. ಕುಮಾರ್ ಗೋವಿಂದ್-ಶಿಲ್ಪಾ ಅಭಿನಯದ ಕೊಳ 3
7. ವಿಷ್ಣುವರ್ಧನ್-ಅಂಬಿಕಾಳ ಸಂಗಮ 5
8. ವಿಷ್ಣುವರ್ಧನ್-ಗೀತಾ ಅಭಿನಯಕ್ಕೆ ವಿ.ಸೋಮಶೇಖರ್ ನಿರ್ದೇಶಕ 5
9. ನವರಸ ನಾಯಕ ಜಗ್ಗೇಶ್ ಶ್ರೀಮಂತ 3
10. ಜಯಮಾಲಾ ಹಠ ಬಿಡದ ದುರ್ಗೆ 5
12. ಮಾವನ ಗೃಹದಲ್ಲೇ ಇರುವ ಮಗಳ ಗಂಡ 5
17. ಚಂದ್ರ _ _ _ 3
18. ಸೂರ್ಯವರ್ಧನ್ ಅಭಿನಯದ ಶ್ರೀಗಂಧ 5
19. ಮುಯ್ಯಿಗೆ ಮುಯ್ಯಿ ಎನ್ನುವರ್ಥದ ಚಿತ್ರ 5

ಮೇಲಿನಿಂದ ಕೆಳಕ್ಕೆ

1. ವಿಷ್ಣುವರ್ಧನ್ ಅಶೋಕನನ್ನು ನೆನಪಿಸುತ್ತಾನೆ 3
2. ರಾಜೇಶ್ ಅಭಿನಯದ ಚಿನ್ನದ ನೆಲ 5
3. ರವಿಚಂದ್ರನ್, ಸುದೀಪ್ ಅಭಿನಯದ ಚಿತ್ರ 3
4. ವಿಶುಕುಮಾರ್ ನಿರ್ದೇಶನದ ಆಂಗ್ಲ ತಾಯಿ ಇಲ್ಲಿ ತಲೆಕೆಳಗು 3
5. ವಿಷ್ಣು, ಅಂಬಿ, ಸಿತಾರ ಅಭಿನಯದ ಚಿತ್ರ 6
6. ನವೀನ್ ಕೃಷ್ಣನಿಗೆ ಜಂಭವಿದ್ದರೂ ಇಲ್ಲಿ ತಲೆಕೆಳಗು 3
8. ಕಲ್ಲಿನ ಕೋಟೆ ನೆನಪಿಸುವ ಸುದೀಪ್ 6
11. ಗೋಪಾಲಕೃಷ್ಣ ಹಾಕಿದ ಸವಾಲ್ 3
13. ಅಂಬಿ ಅಭಿನಯದಲ್ಲಿ ಶಾಶ್ವತವಾಗಿ ಉಳಿದ ಹಣತೆ 5
14. ಮಾಲಾಶ್ರೀ ಧೈರ್ಯವಂತೆ 3
15. ಬಬ್ರುವಾಹನ ಚಿತ್ರದ ನಾಯಕಿ ಚಿನ್ನದಂತವಳು 3
16. ದೇವು- ಶಿವಣ್ಣ ನಡುವಿನ ಯುದ್ಧ 3

ವಿಜೇತರು: ಶ್ರೀಮತಿ ರುಕ್ಮೀಣಿ
ನಂ.476, ರಾಮಕೃಷ್ಣನಗರ, ಮೈಸೂರು.



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 492ರ ಉತ್ತರ

ಪೆಂ	ಟ	ಗ	ನ್			ಗಾ	ಜಿ	ನ	ಮ	ನೆ
ಗ್ವಿ		ಲ್ಲಾ		ವಿ	ಸ್ಮ	ಯ				ರ
ನ್		ಪೆ		ರ		ತ್ರಿ		ಬಂ		ಳು
		ಟ್ಟಿ		ಹ				ಧ		
ಮ	ಲ್ಲಿ	ಗೆ	ಹೂ	ವೇ		ಮೂ	ಗ	ನ	ಸೇ	ಡು
				ದ	ರ್ಶ	ನ್				
ದೇ	ವ	ರ	ಮ	ನೆ		ಮೂ	ರು	ಒಂ	ಭ	ತ್ತು
		ವ				ನ್		ಟಿ		
ಮ		ಳಿ		ಹ		ಮೂ		ಸ		ಸು
ದ				ಶಿ	ಮ್ರಾ	ನ್		ಲ		ಕ
ನ	ನ್ನ	ದೇ	ವ	ರು			ನಾ	ಗ	ಕ	ನ್ಯೆ

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಸೌತ್ ಸಿನಿ ಇಂಡಸ್ಟ್ರಿಗೆ ಮತ್ತೊಂದು ಸುಸಜ್ಜಿತ ಸ್ಟುಡಿಯೋ

ಕನ್ನಡ ಚಿತ್ರರಂಗ ಬಾಲಿವುಡ್, ಮಾಲಿವುಡ್, ಕಾಲಿವುಡ್ ಸೇರಿದಂತೆ ಎಲ್ಲಾ ರಾಜ್ಯಗಳ ಚಿತ್ರರಂಗದವರು ಚಿತ್ರಿಕರಣ ನಡೆಸಲು ಅದ್ಭುತವಾದ ಲೊಕೇಶನ್ ಒಳಗೊಂಡ 'ಜಾಲಿವುಡ್' ಎಂಬ ಸುಸಜ್ಜಿತ ಸ್ಟುಡಿಯೋ ಬಿಡದಿಯ ಬಳಿ ನಿರ್ಮಾಣವಾಗಿದೆ. ಈ ಹಿಂದೆ ಇದ್ದ ಇನ್ನೋವೇಟೀವ್ ಫಿಲ್ಮ್ ಸಿಟಿಯನ್ನು ಈಗ ಐಸಿರಿ ಗಣೇಶ್ ಅವರು ನವೀಕರಿಸಿ ಈಗ "ಜಾಲಿವುಡ್" ಎಂದು ಮರುನಾಮಕರಣ ಮಾಡಿದ್ದಾರೆ. ಹಲವು ವಿಶೇಷಗಳಿಂದ ಕೂಡಿರುವ ಜಾಲಿವುಡ್ ಸ್ಟುಡಿಯೋದಲ್ಲಿ ಚಿತ್ರೀಕರಣಕ್ಕೆ ಬೇಕಾದ ಎಲ್ಲಾ ರೀತಿಯ ಸೌಲಭ್ಯಗಳಿವೆ.

ಚಿತ್ರೀಕರಣಕಷ್ಟೇ ಅಲ್ಲ, ಬಿಡುವಿನ ಸಮಯ ಕಳೆಯಲು ಬಯಸುವವರಿಗೆ ಸೂಕ್ತ ಸ್ಥಳವೂ ಹೌದು. ಇಲ್ಲಿ ಮಿನಿ ಗೋವಾ ನಿರ್ಮಾಣ ಮಾಡಿದ್ದು, ಗೋವಾಕ್ಕೆ ಹೋದರೆ ಯಾವ ಅನುಭವ ಸಿಗುತ್ತದೆಯೋ ಅದನ್ನು ಜಾಲಿವುಡ್‌ನಲ್ಲಿ ಕಟ್ಟಿಕೊಡುವ ಕೆಲಸ ಮಾಡಲಾಗಿದೆ ಎಂದು ಪಾರ್ಟನರ್ ನವರಸನ್ ಮಾಹಿತಿ ಹಂಚಿಕೊಂಡರು. 'ಜಾಲಿವುಡ್' ಕಳೆದ ತಿಂಗಳು ಅದ್ದೂರಿಯಾಗಿ ಉದ್ಘಾಟನೆಯಾಗಿತ್ತು.

ಜಾಲಿವುಡ್ ಸ್ಟುಡಿಯೋದಲ್ಲಿ ಚಿತ್ರೀಕರಣ, ಫೋಟೋ ಶೂಟ್, ಟಿವಿ ಸೀರಿಯಲ್ ಶೂಟಿಂಗ್ ಸೇರಿದಂತೆ ಚಿತ್ರೀಕರಣಕ್ಕೆ ಬೇಕಾದ ಎಲ್ಲಾ ಅನುಕೂಲತೆಗಳು ಹಾಗೂ ಬೃಹತ್ ಹಾಲ್‌ಗಳು, ಸುಮಾರು 2,500 ಜನರ ಸಾಮರ್ಥ್ಯದ ಬೃಹತ್ ವೇದಿಕೆ ಸೇರಿದಂತೆ ಹಲವು ಸೌಲಭ್ಯಗಳಿವೆ.

ಮೈಸೂರು ಮಿತ್ರ

ಸಪ್ತಪದಿ ತುಳಿದ ಬುಡಕಟ್ಟು ಜನಾಂಗದ 60 ಜೋಡಿಗಳು

ಹುಣಸೂರಿನ ಶ್ರೀ ಕೆಂಡಗಣ್ಣೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಯಶಸ್ವಿ ಸಾಮೂಹಿಕ ವಿವಾಹ



ಹುಣಸೂರು, ಸೆ.28– ಮೈಸೂರು ಗ್ರಾಮಾಂತರ ಜಿಲ್ಲಾ ವಿಶ್ವ ಹಿಂದೂ ಪರಿಷತ್ ಘಟಕ ಮತ್ತು ಬೆಂಗಳೂರು ಎಸ್‌ಎಸ್ ಫೌಂಡೇಶನ್ ಸಹಯೋಗದಲ್ಲಿ ತಾಲೂಕಿನ ಶ್ರೀ ಕೆಂಡಗಣ್ಣೇಶ್ವರ ಸ್ವಾಮಿ ಗದ್ದಿಗೆ ಸನ್ನಿಧಾನದಲ್ಲಿ ಕಾಡಂಚಿನ 60 ಜೋಡಿ ಬುಡಕಟ್ಟು ಜನಾಂಗದವರು ಸಪ್ತಪದಿ ತುಳಿದರು.

ಹುಣಸೂರು, ಪಿರಿಯಾಪಟ್ಟಣ, ಹೆಚ್.ಡಿ. ಕೋಟೆ, ಸರಗೂರು ತಾಲೂಕುಗಳ ಕಾಡಂಚಿನ 18 ಹಾಡಿಗಳಿಂದ ಬಂದಿದ್ದ 60 ಜೋಡಿ ಬುಡಕಟ್ಟು ಜನಾಂಗದ ವಧು–ವರರಿಗೆ ಸಾಮೂಹಿಕ ವಿವಾಹವನ್ನು ಪುರೋಹಿತರು ನೆರವೇರಿಸಿದರು.

ಶ್ರೀ ಸಾಂಬ ಸದಾಶಿವ ಸ್ವಾಮಿಗಳು ಮತ್ತು ಗವಿಸಿದ್ದೇಶ್ವರ ಸ್ವಾಮಿಗಳ ಸಾನಿಧ್ಯದಲ್ಲಿ ಭಜರಂಗದಳದ ರಾಷ್ಟ್ರೀಯ ಸಹ ಸಂಯೋಜಕ ಸೂರ್ಯ ನಾರಾಯಣಾಜಿಯವರ ನೇತೃತ್ವದಲ್ಲಿ ಬೆಂಗಳೂರಿನ ಉದ್ಯಮಿಗಳಾದ ಕಿಶನ್‌ಜೀ, ಬಾಬು ಲಾಲ್‌ಜೀ, ಶಕಿಲಾ ಶೆಟ್ಟಿಯವರ ಸಹಾಯ ಮತ್ತು ವಿಹೆಚ್‌ಪಿಯ ಪ್ರಾಂತೀಯ ಕಾರ್ಯದರ್ಶಿ ಜಗನ್ನಾಥಶಾಸ್ತ್ರಿ, ಮೈಸೂರಿನ ಹಿರಿಯ ನ್ಯಾಯವಾದಿಗಳಾದ ಸಿ.ವಿ. ಕೇಶವಮೂರ್ತಿ, ಜಿಲ್ಲಾ ಸೇವಾ ಪ್ರಮುಖ ಕುಂಟೇಗೌಡರು, ಜಿಲ್ಲಾ ಕಾರ್ಯದರ್ಶಿಗಳಾದ ಮಹದೇವಪ್ಪ ಜಿಲ್ಲಾಧ್ಯಕ್ಷ ಸೋಮಣ್ಣ ಮಾತೃಶಕ್ತಿ ಸಂಯೋಜಕರುಗಳಾದ ಶ್ರೀಮತಿ ಭಾರತಿ, ಸವಿತಾ ಘಾಟ್ಕೆ ಕಮಲಮ್ಮ, ವಿಭಾಗ ಕಾರ್ಯದರ್ಶಿ ಸತೀಶ್, ಉಪಾಧ್ಯಕ್ಷ ವಿ.ಎನ್.ದಾಸ್ ಮತ್ತು ಭಜರಂಗದಳ ಮತ್ತು ವಿ.ಹೆಚ್.ಪಿ. ಯುವ ಕಾರ್ಯಕರ್ತರ ಪಡೆಯ ಸಹಕಾರದೊಂದಿಗೆ ಸಾಮೂಹಿಕ ವಿವಾಹ ಯಶಸ್ವಿಯಾಗಿ ನಡೆಯಿತು.

ಸಾಮೂಹಿಕ ವಿವಾಹದಲ್ಲಿ ಪಾಲ್ಗೊಂಡಿದ್ದ 60 ಜೊತೆ ವಧು–ವರರೊಂದಿಗೆ ತಂದೆ–ತಾಯಿ, ಕುಟುಂಬದ ಇತರೆ ಸದಸ್ಯರಿಗೆ ಉಳಿದುಕೊಳ್ಳಲು ವ್ಯವಸ್ಥೆ ಮಾಡಲಾಗಿತ್ತು. ಸೆ.27 ರಂದು ಬೆಳಗ್ಗೆ 8 ಗಂಟೆಗೆ ಕೆಂಡಗಣ್ಣ ಸ್ವಾಮಿ ದೇವಸ್ಥಾನದಿಂದ ಮಂಗಳ ವಾದ್ಯ, ವೀರಗಾಸೆಯೊಂದಿಗೆ ಕಳಸದಿಂದ ಗಂಗೆ ತಂದು ಗೋ ಪೂಜೆ, ಕಂಬಪೂಜೆ ಮಾಡಿಸಿ, ಕಂಕಣ ಕಟ್ಟಿಸಿ, 10 ರಿಂದ 11.30 ಗಂಟೆಯೊಳಗೆ ಸಾಮೂಹಿಕವಾಗಿ ಶುಭಲಗ್ನದಲ್ಲಿ ಮಾಂಗಲ್ಯಧಾರಣೆ ಮಾಡಿಸಲಾಯಿತು.

ಉಚಿತ ಸಾಮೂಹಿಕ ವಿವಾಹದಲ್ಲಿ ಪಾಲ್ಗೊಂಡ ವಧು–ವರರಿಗೆ ಮಾಂಗಲ್ಯ, ಎರಡೆರಡು ಜೊತೆ ಬಟ್ಟೆ ನೀಡಲಾಗಿತ್ತು. ಇದಲ್ಲದೆ ಒಂದು ಚಿಕ್ಕ ಸಂಸಾರಕ್ಕೆ ಬೇಕಾಗುವಂತಹ 15000 ರೂ. ಮೌಲ್ಯದ ಅಡುಗೆ ಪಾತ್ರೆ, ತಟ್ಟೆ, ಬಕೇಟು, ಲೋಟಗಳು, ಚಾಪೆ, ರಗ್ಗು, ಅಲಂಕಾರಕ್ಕೆ ಫ್ಯಾನ್ಸಿ ಕಿಟ್, ದೇವರ ಫೋಟೋ ಎಲ್ಲವನ್ನು ನೀಡಲಾಯಿತು.

ಅನ್ಯ ಮತಕ್ಕೆ ಮತಾಂತರ ಆಗುವುದನ್ನು ತಪ್ಪಿಸುವ ದೃಷ್ಟಿಯಿಂದ ನಾವೆಲ್ಲರೂ ಹಿಂದೂಗಳು, ಹಿಂದುವಾಗಿಯೇ ಉಳಿಯಬೇಕು ಎಂಬ ಉದ್ದೇಶದಿಂದ ಮತ್ತು ವಿಶ್ವ ಹಿಂದೂ ಪರಿಷತ್ ಸ್ಥಾಪನೆ ಆಗಿ 60 ವರ್ಷಗಳು ಕಳೆದಿರುವುದರಿಂದ ಅದರ ನೆನಪಿಗಾಗಿ 60 ಜೋಡಿಗಳ ಉಚಿತ ಸಾಮೂಹಿಕ ಮದುವೆ ನಡೆದಿದೆ ಎಂದು ಸೂರ್ಯನಾರಾಯಣ್ ಜೀ ಅವರು ವಧು–ವರರಿಗೆ ತಿಳಿಸಿದರು.

ಈ ಸಾಮೂಹಿಕ ಮದುವೆ ಕಾರ್ಯದಲ್ಲಿ 2000 ಜನರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಅಂತಿಮವಾಗಿ ಸ್ವಾಮೀಜಿಗಳಿಂದ ವಧು–ವರರಿಗೆ ಆಶೀರ್ವಚನ, ನಂತರ ಭಗವದ್ಗೀತೆ ಪುಸ್ತಕ ವಿತರಣೆ ಮಾಡಲಾಯಿತು. ಪ್ರಧಾನ ಕಾರ್ಯದರ್ಶಿ ಮಹದೇವಪ್ಪನವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು.

ಕರ್ನಾಟಕ ಬಂದ್ ಬೆಂಬಲಿಸಿ ಬನ್ನೂರು ಬಂದ್

ಬನ್ನೂರು, ಸೆ.28– ಕಾವೇರಿ ನೀರಿಗಾಗಿ ನಡೆಯುತ್ತಿರುವ ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಬನ್ನೂರು ಬಂದ್ ಮಾಡಲು ಕರ್ನಾಟಕ ರಾಜ್ಯ ರೈತ ಸಂಘಟನೆ (ಮೂಲ ಸಂಘಟನೆ) ಮತ್ತು ವರ್ತಕರ ಸಂಘ ನಿರ್ಧರಿಸಿದ್ದು, ಎಲ್ಲರೂ ಸಹಕರಿಸುವ ಮೂಲಕ ಬನ್ನೂರು ಬಂದ್‌ನ್ನು ಯಶಸ್ವಿಗೊಳಿಸಲು ಕರೆ ನೀಡಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ರೈತ ಸಂಘಟನೆ (ಮೂಲ ಸಂಘಟನೆ)ಯ ಜಿಲ್ಲಾಧ್ಯಕ್ಷ ನಾರಾಯಣ್, ತಮಿಳುನಾಡಿಗೆ ಈಗಾಗಲೇ ಸಾಕಷ್ಟು ನೀರನ್ನು ಬಿಡುಗಡೆ ಮಾಡಿದ್ದರೂ ರಾಜ್ಯ ಸರ್ಕಾರದ ನಾಯಕರು ತಮ್ಮ ರಾಜಕೀಯ ಕುಟೀಲತೆಯಿಂದ ನೀರು ಬಿಡಲು ಮುಂದಾಗುತ್ತಿದೆ. ಕಾವೇರಿ ಪ್ರಾಧಿಕಾರಕ್ಕೂ ರಾಜ್ಯದ ವಾಸ್ತವಾಂಶವನ್ನು ಸರಿಯಾಗಿ ನೀಡದೇ ಪದೇ ಪದೇ ಹಿನ್ನಡೆ ಅನುಭವಿಸುವಂತಾಗಿರುವುದು ಖಂಡನೀಯ ಎಂದರು.

ವರ್ತಕ ಸಂಘದ ಕೃಷ್ಣ ಮಾತನಾಡಿ, ಕಾವೇರಿ ವಿಚಾರ ಬಂದಾಗ ಎಲ್ಲರೂ ಒಟ್ಟುಗೂಡಿ ರಾಜ್ಯದ ಪರವಾಗಿ ಕಾರ್ಯವನ್ನು ನಿರ್ವಹಿಸಬೇಕು. ಈ ಹಿನ್ನೆಲೆಯಲ್ಲಿ ಬನ್ನೂರು ಬಂದ್‌ಗೆ ಪ್ರತಿಯೊಬ್ಬ ಅಂಗಡಿ ಮಾಲೀಕರು, ಬೀದಿ ಬದಿ ವ್ಯಾಪಾರಿಗಳು, ವಿವಿಧ ಸಂಘಟನೆಯವರು ಸಹಕರಿಸಬೇಕೆಂದು ಈ ಮೂಲಕ ಮನವಿ ಮಾಡಿದರು. ಬೆಟ್ಟಹಳ್ಳಿ ಶಿವರಾಂ, ಮೇಗಲಕೊಪ್ಪಲಿನ ರಂಗಸ್ವಾಮಿ, ಅಶೋಕ್, ಯಾಚೇನಹಳ್ಳಿ ಚಿನ್ನಸ್ವಾಮಿ, ಸಂಜೀವ್, ಚಾಮೇಗೌಡ, ರಿಯಾಜ್, ಕಲ್‌ಬಂಡಿ ಬಾಬು ಸೇರಿದಂತೆ ಪ್ರಮುಖರು ಇದ್ದರು.

ಚೌಹಳ್ಳಿ ಡೇರಿಗೆ 56 ಲಕ್ಷ ರೂ. ನಿವ್ವಳ ಲಾಭ



ತಿ.ನರಸೀಪುರ.ಸೆ.28– ರೈತರು ಸಂಘಕ್ಕೆ ಉತ್ತಮ ಗುಣಮಟ್ಟದ ಹಾಲನ್ನು ಸರಬರಾಜು ಮಾಡುವ ಮೂಲಕ ಸಂಘದ ಬೆಳವಣಿಗೆಗೆ ಸಹಕಾರ ನೀಡಬೇಕು ಹಾಗೂ ತಾವು ಸಹ ಆರ್ಥಿಕವಾಗಿ ಮುನ್ನಡೆ ಸಾಧಿಸಬೇಕು ಎಂದು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಸಿದ್ದರಾಜು ಹೇಳಿದರು

ತಾಲೂಕಿನ ಚೌಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘವು ಪ್ರಸಕ್ತ ಸಾಲಿನಲ್ಲಿ 56.460. 43 ರೂ.ಗಳ ನಿವ್ವಳ ಲಾಭ ಗಳಿಸಿ ಯಶಸ್ವಿಯಾಗಿ ಮುನ್ನಡೆಯುತ್ತಿದೆ ಎಂದರು.

ಸಂಘದ 2022–23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಹಾಲು ಉತ್ಪಾದಕರನ್ನು ಉದ್ದೇಶಿಸಿ ಮಾತನಾಡಿ, ಸಹಕಾರ ಸಂಘವು ಹಳೆಯ ಸಂಘವಾಗಿದ್ದು ಆರಂಭದಿಂದಲೂ ಲಾಭದಾಯಕವಾಗಿ ಮುನ್ನಡೆಯತ್ತಾ ಬಂದಿದೆ ಎಂದರು.

ಇನ್ನೂ ಹೆಚ್ಚಿನ ಹಾಲು ಉತ್ಪಾದನೆಗೆ ರೈತರು ಒತ್ತು ನೀಡಬೇಕಿದೆ ಎಂದರು. ಇತ್ತೀಚೆಗೆ ಹೈನುಗಾರಿಕೆ ಲಾಭದಾಯಕ ಉದ್ದಿಮೆಯಾಗಿ ಬೆಳೆಯುತ್ತಿದೆ.ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಹಸು ಸಾಕುವವರ ಸಂಖ್ಯೆ ಇಳಿಮುಖವಾಗುತ್ತಿರುವುದು ಬೇಸರದ ಸಂಗತಿಯಾಗಿದೆ. ಮನೆಗೊಂದು, ಎರಡು ಹಸು ಇದ್ದರೆ ಹೆಚ್ಚಿನ ಹಾಲು ಉತ್ಪಾದನೆ ಸಾಧ್ಯವಾಗುತ್ತದೆ ಎಂದರು.

ಉಪಾಧ್ಯಕ್ಷ ಮರಿಸ್ವಾಮಿ, ನಿರ್ದೇಶಕರಾದ ನಾಗೇಂದ್ರ ಕುಮಾರ್, ಸೋಮಣ್ಣ, ಶಿವಣ್ಣ .ಎಸ್, ಗುರುಮಲ್ಲೇಗೌಡಎಮ್, ಗಿರಿಮಲ್ಲಯ್ಯ ಎಂ, ರಾಚಪ್ಪ ಸಣ್ಣಮರಿ. ಲಕ್ಷ್ಮಮ್ಮ ತಾಯಮ್ಮ. ಕೆ.ಎನ್.ಶೃತಿ, ಡೈರಿ ಕಾರ್ಯದರ್ಶಿ, ಕೆಂಪರಾಜು, ಮಹಾದೇವಸ್ವಾಮಿ ಹಾಜರಿದ್ದರು.

ಅದ್ದೂರಿ ಮೆರವಣಿಗೆ ಮೂಲಕ ಕಂಪಲಾಪುರದಲ್ಲಿ ಗಣೇಶ ವಿಸರ್ಜನೆ



ಕಂಪಲಾಪುರ, ಸೆ.28– ಇಲ್ಲಿನ ಶ್ರೀ ವಿನಾಯಕ ಗೆಳೆಯರ ಬಳಗ (ಒಕ್ಕಲಿಗ ಬಾಯ್ಸ್) ದಿಂದ ಪ್ರತಿಷ್ಠಾಪಿಸಲಾಗಿದ್ದ ಬೃಹತ್ ಗಣೇಶ ಮೂರ್ತಿಯನ್ನು 9 ದಿನಗಳ ಕಾಲ ಪೂಜಿಸಿ ಮಂಗಳವಾರ ಅದ್ದೂರಿಯಾಗಿ ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ಹೆಗ್ಗೆರೆಯಲ್ಲಿ ವಿಸರ್ಜಿಸಲಾಯಿತು.

9 ದಿನಗಳ ಪೂಜಾ ಮಹೋತ್ಸವದಲ್ಲಿ ಪ್ರತಿದಿನ ಅನ್ನದಾನ, ರಸಮಂಜರಿ ಕಾರ್ಯಕ್ರಮ ಆಯೋಜಿಸಲಾಗಿತ್ತು ಒಕ್ಕಲಿಗ ಬಾಯ್ಸ್ ಗ್ರೂಪ್‌ನ 60 ಯುವಕರು ಇದೇ ಪ್ರಥಮ ಬಾರಿಗೆ ಇಂತಹ ಪೂಜಾ ಕಾರ್ಯದಲ್ಲಿ ತೊಡಗಿಸಿಕೊಂಡು ಒಗ್ಗಟ್ಟು ಪ್ರದರ್ಶನ ಮಾಡಿ ಗ್ರಾಮಸ್ಥರ ಹೆಗ್ಗಳಿಕೆಗೆ ಪಾತ್ರರಾದರು.

ಮಂಗಳವಾರ ಬೆಳಗ್ಗೆ ಅರ್ಚಕ ಗಣಪತಿಭಟ್ ಅವರು ಪೂಜೆ ಸಲ್ಲಿಸಿದ ನಂತರ ಟ್ರಾಕ್ಟರ್‌ನಲ್ಲಿ ಭವ್ಯವಾದ ಹೂವಿನ ಅಲಂಕೃತ ಮಂಟಪದಲ್ಲಿ ಗಣೇಶಮೂರ್ತಿಯನ್ನು ಇಟ್ಟು ಮಂಗಳವಾದ್ಯ, ಡಿಜೆ ಸೌಂಡ್ಸ್, ರಾಮನಗರದ ಡೊಳ್ ಚಂದ್ರು ಕಲಾತಂಡದಿಂದ 12 ವಿವಿಧ ಭಂಗಿಯ ಕಲಾಕೃತಿ ಮೆರವಣಿಗೆಯೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ಸಾವಿರಾರು ಜನರ ಸಮ್ಮುಖದಲ್ಲಿ ರಾತ್ರಿ 7 ಗಂಟೆಗೆ ಹೆಗ್ಗೆರೆಯಲ್ಲಿ ವಿಸರ್ಜಿಸಲಾಯಿತು.

ಡಿಜೆ ಸೌಂಡ್ಸ್‌ನ ಹಾಡುಗಳಿಗೆ ಎಲ್ಲರೂ ಕುಣಿದು ಕುಪ್ಪಳಿಸಿದರು. ವಿಸರ್ಜನೆ ನಂತರ ಪ್ರಸಾದ ವಿನಿಯೋಗ ನೆರವೇರಿತು. ಪಿರಿಯಾಪಟ್ಟಣ ಪೊಲೀಸರು ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು.

ಸದಸ್ಯರ ಸಹಕಾರದಿಂದ ಸಂಘಗಳು ಅಭಿವೃದ್ಧಿ




ಪಿರಿಯಾಪಟ್ಟಣ, ಸೆ.28– ಯಾವುದೇ ಸಹಕಾರಿ ಸಂಸ್ಥೆಯ ಯಶಸ್ಸಿನ ಗುಟ್ಟು ಆಯಾ ಸಂಸ್ಥೆಯ ಸದಸ್ಯರ ಸಹಕಾರ ಹಾಗೂ ಹೊಂದಾವಣಿಕೆಯ ನೀತಿ ಮುಖ್ಯವಾಗಿರುತ್ತದೆ ಎಂದು ಕಲ್ಪವೃಕ್ಷ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಅಧ್ಯಕ್ಷ ಪಿ.ಪ್ರಶಾಂತ್ ಗೌಡ ಅಭಿಪ್ರಾಯಪಟ್ಟಿದ್ದಾರೆ.

ಪಟ್ಟಣದ ಎನ್‌ಎ ಫಂಕ್ಷನ್ ಹಾಲ್‌ನಲ್ಲಿ ನಡೆದ ಸಂಸ್ಥೆಯ 12ನೇ ವರ್ಷದ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಈ 12 ವರ್ಷದಲ್ಲಿ ಸಂಸ್ಥೆಯ ಸದಸ್ಯರ ಸಹಕಾರದಿಂದ ಸಂಸ್ಥೆಯ ವತಿಯಿಂದ ಅನೇಕ ಸಮಾಜಮುಖಿ ಕಾರ್ಯಗಳನ್ನು ಹಮ್ಮಿಕೊಂಡಿದ್ದು ಅದರ ಫಲವಾಗಿಯೇ ನಮ್ಮ ಸಂಸ್ಥೆ ಆರ್ಥಿಕ ನೆಲೆಗಟ್ಟಿಗೆ ಬಂದು ಮುನ್ನುಡಿಯಲ್ಲಿ ಸಾಗುತ್ತಿದೆ. ಯಾವುದೇ ಒಂದು ಸಹಕಾರಿ ಸಂಸ್ಥೆ ಆಯಾಯ ಸಂಸ್ಥೆ ಸದಸ್ಯರುಗಳು ಹಾಗೂ ಸಂಸ್ಥೆಯ ಪಾಲುದಾರರ ಸಹಕಾರದಿಂದ ಮಾತ್ರ ಅಭಿವೃದ್ಧಿ ಹೊಂದಲು ಸಾಧ್ಯ ಎಂದರು.

ನಮ್ಮ ಸಂಸ್ಥೆ ಈ 12 ವರ್ಷ ಅತ್ಯಂತ ಯಶಸ್ವಿಯಾಗಿ ನಡೆಯಲು ಸಂಸ್ಥೆಯ ಎಲ್ಲಾ ಗೌರವಾನ್ವಿತ ಸದಸ್ಯರುಗಳ ಸಹಕಾರ ಅತ್ಯಂತ ಸ್ಮರಣೀಯ ಎಂದರು. ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸಂಸ್ಥೆಯ ಸದಸ್ಯರ ಮಕ್ಕಳಿಗೆ ಗೌರವಿಸಿದರು

ಸಂಘದ ಉಪಾಧ್ಯಕ್ಷ ಕೆ.ಎಸ್.ಕೃಷ್ಣೇಗೌಡ ನಿರ್ದೇಶಕರುಗಳಾದ ಬಿ.ಎ.ಪ್ರಕಾಶ್ ಸಿ.ಆರ್. ದೇವರಾಜ್, ಎಸ್‌ಆರ್ ದಿನೇಶ್, ಕೆ.ಎಲ್. ಸುರೇಶ್, ಡಿ.ಆರ್. ಶಾಬಾದ್, ಎ.ಪಿ.ದಿನೇಶ್ ಕುಮಾರ್, ಕೆ.ಎನ್.ನಟೇಶ್, ಶೃತಿ ಮಂಜುನಾಥ್, ಬಿ.ಪಿ.ರಾಜೇಶ್. ಕೆ.ಆರ್.ಕೆಂಪಣ್ಣ, ಕೆ.ಎಚ್.ವಿಜಯಕುಮಾರ್ ಇತರರಿದ್ದರು.

ಹಾರಂಗಿ ನೀರಿನ ಮಟ್ಟ ಕುಸಿತ; ಸಂಕಷ್ಟದಲ್ಲಿ ರೈತರು



ಬೆಟ್ಟದಪುರ, ಸೆ.28– ಪಿರಿಯಾಪಟ್ಟಣ, ಕೆ.ಆರ್.ನಗರ, ಹುಣಸೂರು ತಾಲೂಕು ರೈತರ ಜೀವನಾಡಿಯಾಗಿರುವ ಹಾರಂಗಿ ಜಲಾಶಯ ನೀರಿನ ಮಟ್ಟ ದಿನೇ ದಿನೇ ಕುಸಿಯುತ್ತಿರುವುದರಿಂದ ಹಾರಂಗಿ ಅಚ್ಚುಕಟ್ಟು ವ್ಯಾಪ್ತಿಯ ರೈತರು ಸಂಕಷ್ಟಕ್ಕೆ ಸಿಲುಕುಲಿದ್ದಾರೆ.

ಈಗಾಗಲೇ 15 ದಿನ ಕ್ಕೊಮ್ಮೆ ಕೆರೆಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆಯಿಂದ ರೈತರು ಯಾವುದೇ ಬೆಳೆಯನ್ನು ಬೆಳೆಯಲು ಹಿಂಜರಿಯುತ್ತಿದ್ದಾರೆ. ಅಲ್ಲದೆ ಹಾರಂಗಿ ಜಲಾಶಯ ನೀರಿನ ಮಟ್ಟ ದಿನೇ ದಿನೇ ಕುಸಿಯುತ್ತಿದ್ದು, ಒಳ ಹರಿವಿನ ಪ್ರಮಾಣವು ಸಹ ತೀರ ಕಡಿಮೆಯಾಗಿದೆ. ಭಾಗಮಂಡಲ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ ಇಲ್ಲದೆ ನದಿ ತೀರದ ಜನರು ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ಸಹ ಹಾಹಾಕಾರ ತೋರಲಿದೆ.

ಈ ಬಾರಿ ಯಾವುದೇ ಮಳೆಯು ಸಹ ತಿಂಗಳಗಟ್ಟಲೆ ಮಳೆ ಸುರಿಯದೆ ಅಲ್ಪ ಸ್ವಲ್ಪ ಮಳೆಯಲ್ಲಿ ಒಮ್ಮೆ ತುಂಬಿದ ಜಲಾಶಯ ಕ್ರಮೇಣವಾಗಿ ಮಳೆ ಇಲ್ಲದೆ ನೀರಿನ ಮಟ್ಟ ಕುಸಿಯುತ್ತಿರುವುದರಿಂದ ರೈತರು ಮತ್ತು ಸಾರ್ವಜನಿಕರು ಸಂಕಷ್ಟಕ್ಕೆ ಈಡಾಗಿದ್ದಾರೆ.

ದಸರಾ ಕ್ರೀಡಾಕೂಟದಲ್ಲಿ ಮುಳ್ಳೂರು ಮಕ್ಕಳು ಜಿಲ್ಲಾ ಮಟ್ಟಕ್ಕೆ ಆಯ್ಕೆ



ಸರಗೂರು: ದಸರಾ ಕ್ರೀಡಾಕೂಟದಲ್ಲಿ ಮುಳ್ಳೂರು ಗ್ರಾಮದ ಮಕ್ಕಳು ಉತ್ತಮ ಸಾಧನೆ ಮಾಡಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಪಟ್ಟಣದ ಜಯಚಾಮರಾಜೇಂದ್ರ ಕ್ರೀಡಾಂಗಣ ಮತ್ತು ಲಯನ್ಸ್ ಸ್ಕೂಲ್ ಆವರಣದಲ್ಲಿ 2023–24ನೇ ಸಾಲಿನ ಸರಗೂರು ತಾಲೂಕು ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಮುಳ್ಳೂರು ಗ್ರಾಮದ ಮಕ್ಕಳು ಭಾಗವಹಿಸಿ, 100 ಮೀ ಪ್ರಥಮ ಅಜಯ್, 200 ಮೀ, ಪ್ರಥಮ ಸಂಜಯ್, 400 ಮೀ ದ್ವಿತಿಯ ಸಂತೋಶ್, 800 ಮೀ ದ್ವಿತಿಯ ಸೂರ್ಯವಂಶಿ, 1500 ಮೀ ಪ್ರಥಮ ರಂಗಸ್ವಾಮಿ, 5000 ಮೀ ಪ್ರಥಮ ಸುನೀತ್, ಟ್ರಿಪಲ್ ಜಂಪ್, ದ್ವಿತೀಯ ಹಾಗೂ ಖೋ–ಖೋ ಪಂದ್ಯಾವಳಿಯಲ್ಲಿ ವೆಂಕಟೇಶ್, ಸೂರ್ಯವಂಶಿ, ಶ್ರೀನಿವಾಸ್, ಆಕಾಶ್, ವಿಶ್ವ ಅಜಯ್, ವಿಜಯ್, ಭರತ್, ಸುನೀತ್, ಸಂತೋಷ್, ಸಂಜಯ್, ಚಂದ್ರ, ಉತ್ತಮ ಪ್ರದರ್ಶನ ನೀಡಿ ತಾಲೂಕು ಮಟ್ಟದಿಂದ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಪಂದ್ಯಾವಳಿಯಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದ ಮಕ್ಕಳಿಗೆ ಮುಳ್ಳೂರು ಗ್ರಾಮದ ಮುಖಂಡರು ಅಭಿನಂದನೆ ಸಲ್ಲಿಸಿದ್ದಾರೆ.

ಸಿದ್ಧಿ ಸಾಧನೆ ಉಸಿರಾಗಲಿ, ಪರಿಪೂರ್ಣತೆ ಗುರಿಯಾಗಲಿ



ಹೆಚ್.ಡಿ.ಕೋಟೆ, ಸೆ.28– ಸಿದ್ಧಿ ಸಾಧನೆಯು ನಮ್ಮ ಉಸಿರಾಗಲಿ, ಪರಿಪೂರ್ಣತೆಯು ನಮ್ಮ ಗುರಿಯಾಗಲಿ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೇಂದ್ರ ಕಚೇರಿಯ ಮುಖ್ಯ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಎಲ್.ಎಚ್. ಮಂಜುನಾಥ್ ಕರೆ ನೀಡಿದ್ದಾರೆ.

ತಾಲೂಕಿನ ಕಾರಾಪುರ ಗ್ರಾಮದ ಗೋಪಾಲಸ್ವಾಮಿ ದೇವಾಲಯದ ಆವರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ವತಿಯಿಂದ ಹಾಡಿಗಳ 57 ಸ್ವಸಹಾಯ ಸಂಘಗಳು ಹಾಗೂ ಬೀದಿಬದಿ ವ್ಯಾಪಾರಿಗಳ 17 ಸಂಘಗಳ ಉದ್ಘಾಟನಾ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ತಾಲೂಕಿನಲ್ಲಿ ಸಂಘಗಳನ್ನು ಸ್ಥಾಪಿಸಲು ಮುಂದಾಗಿ ಸ್ಥಾಪನೆಯಾದ ನಂತರ ಹಣ ಕಟ್ಟದೇ ಎಷ್ಟೋ ಸಂಘಗಳು ಮುಂದುವರಿಯಲಿಲ್ಲ, ಆದರೆ ಅಂದು ಸಂಘದ ಹಣ ಕಟ್ಟಿದ ಎಷ್ಟೋ ಮಂದಿ ಇಂದು ಉತ್ತಮ ರೀತಿ ಜೀವನ ನಡೆಸುತ್ತಿದ್ದಾರೆ ಎಂದರು.

ಜಾಗೃತಿ ಇಲ್ಲದೇ ವ್ಯಸನಿಗಳಾಗಿ ನಾವು ಬಡವರಾಗಿಯೇ ಉಳಿದಿದ್ದೇವೆ, ವ್ಯಸನಿಗಳು ತಮ್ಮ ದುಶ್ಚಟವನ್ನು ಬಿಟ್ಟಾಗ ಮಾತ್ರ ಬಡತನ ನಿರ್ಮೂಲನೆಯಾಗಲಿದೆ. ಮತೀಯ ಕೊಳೆ ಕಳೆಯಬೇಕಾದರೆ ಜ್ಞಾನವಾಹಿನಿ ಅವಶ್ಯ, ರೈತನೂ ಕೂಡ ಗುರಿ ಇಟ್ಟುಕೊಂಡಾಗ ಮಾತ್ರ ಅಭಿವೃದ್ಧಿ ಸಾಧಿಸಲು ಸಾಧ್ಯ, ಗುರಿ ಇಲ್ಲದೇ ವ್ಯವಸಾಯ ಮಾಡಿದರೆ ವ್ಯವಸಾಯವೂ ಸಹ ಕೈಗೂಡುವುದಿಲ್ಲ ಎಂದ ಅವರು, ತಾಲೂಕಿನಲ್ಲಿ 600 ಕೋಟಿ ರೂ.ಗಳಷ್ಟು ಹಣ ಬಳಕೆಯಾಗಿದೆ ಎಂದರು.

ತಾಲೂಕು ದಂಡಾಧಿಕಾರಿ ಎಲ್.ಸಣ್ಣರಾಮಪ್ಪ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಸಂಘ ಸಂಸ್ಥೆಗಳು ಸ್ಥಾಪಿಸಿದ್ದು, ಇದರಿಂದ ಮಹಿಳೆಯರಿಗೆ ಅಭಿವ್ಯಕ್ತಿ ಸ್ವಾತಂತ್ರ ದೊರೆತಿದೆ. ಇಂದು ಸಂಘವು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಹ ತಲುಪುವ ಹಿತ ದೃಷ್ಟಿಯಿಂದ ಹಾಡಿಗಳಲ್ಲಿ ಸ್ವಸಹಾಯ ಸಂಘಗಳನ್ನು ಸ್ಥಾಪಿಸುತ್ತಿರುವುದು ಸ್ವಾಗತಾರ್ಹ ಎಂದರು.

ಇದಕ್ಕೂ ಮುನ್ನ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೇಂದ್ರ ಕಚೇರಿಯ ಮುಖ್ಯ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಎಲ್.ಎಚ್. ಮಂಜುನಾಥ್ ಅವರನ್ನು ಆದಿ ವಾಸಿ ಮಕ್ಕಳು ನೃತ್ಯದ ಮೂಲಕ ಕಾರ್ಯಕ್ರಮಕ್ಕೆ ಬರಮಾಡಿಕೊಂಡರು.

ಕಾರ್ಯಕ್ರಮದಲ್ಲಿ ಯೋಜನೆಯ ಪ್ರಾದೇಶಿಕ ನಿರ್ದೇಶಕ ಬಿ. ಜಯರಾಮ್ ನೆಲ್ಲಿತ್ತಾಯ, ಗ್ರಾಪಂ ಅಧ್ಯಕ್ಷೆ ರತ್ನಮ್ಮ ಮರಿಲಿಂಗಯ್ಯ, ಯೋಜನೆಯ ಜಿಲ್ಲಾ ನಿರ್ದೇಶಕ ಎಂ.ಲಕ್ಷ್ಮಣ್, ಯೋಜನಾಧಿಕಾರಿ ವಿ.ಭಾಸ್ಕರ್, ಗ್ರಾಪಂ ಅಭಿವೃದ್ಧಿ ಅಧಿಕಾರಿ ಡಿ. ಸ್ವಾಮಿ, ಊರಿನ ಮುಖಂಡರಾದ ಕೃಷ್ಣೇಗೌಡ, ಕೆಂಪಯ್ಯ, ಟಿ.ಮಂಜು, ಮರಿಗೌಡ, ತನಿರಾಜ್, ಜನ ಜಾಗೃತಿ ವೇದಿಕೆಯ ಸದಸ್ಯರಾದ ನಾಗಣ್ಣ, ಕನ್ನಡ ಪ್ರಮೋದ್, ವಿನಯ್ ಭಜರಂಗಿ, ಜೆ.ಪಿ. ಶಿವರಾಜು, ಒಕ್ಕೂಟದ ಅಧ್ಯಕ್ಷ ಮರಿಲಿಂಗಯ್ಯ, ನಾಗಯ್ಯ, ಶಿವಪ್ರಕಾಶ್, ಕೃಷಿ ಅಧಿಕಾರಿ ರಾಜು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಚಂದ್ರಮುಖಿ–2 (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಾನದಾರಿಯಲ್ಲಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಜವಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಚಂದ್ರಮುಖಿ–2 (ತ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತಸಾಗರದಾಚೆ ಎಲ್ಲೋ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಸ್ಕಂದ (ತೆ)	4 ಪ್ರದರ್ಶನಗಳು
ಸಂಗಂ	
ಚಂದ್ರಮುಖಿ–2 (ತ)	4 ಪ್ರದರ್ಶನಗಳು
ಲಿಡೋ	
ಒಲವೇ ಮಂದಾರ–2 (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಇರೈವನ್(ತ)	4 ಪ್ರದರ್ಶನಗಳು
ಪ್ರಭಾ	
ಸ್ಕಂದ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ದಿಗ್ವಿಜಯ (ಕ):** ಬೆ.10.40ಕ್ಕೆ, **ಸಪ್ತಸಾಗರದಾಚೆ ಎಲ್ಲೋ (ಕ):** ಮ.1.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಜವಾನ್ (ಹಿಂ):** ಸಂ.4ಕ್ಕೆ.
ಸ್ಕ್ರೀನ್ 2	**ತತ್ಸಮ ತದ್ಭವ (ಕ):** ಬೆ.11.30ಕ್ಕೆ, **ಒಲವೇ ಮಂದಾರ 2 (ಕ):** ಮ.2ಕ್ಕೆ, **ಡೆಮಾನ್ (ತ):** ಸಂ.4.30ಕ್ಕೆ, **ಸುಖೀ (ಹಿಂ):** ರಾ.7ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	**ಎಕ್ಸ್ಪೆಂಡಬಲ್ಸ್ (ಇಂ):** ಬೆ.11.30ಕ್ಕೆ, ರಾ.9.40ಕ್ಕೆ, **ದಿ ನನ್ 2 (ಇಂ):** ಮ.1.45ಕ್ಕೆ, **ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ):** ಸಂ.4.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	**ಜವಾನ್ (ಹಿಂ):** ಬೆ.9.50ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ (ಕ):** ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ಜವಾನ್ (ಹಿಂ):** ಬೆ.10.40ಕ್ಕೆ, ಸಂ.4.35ಕ್ಕೆ, ರಾ.10.30ಕ್ಕೆ, **ದಿ ಎಕ್ಸ್ಪೆಂಡಬಲ್ಸ್ (ಇಂ):** ಮ.2.10ಕ್ಕೆ, ರಾ.8.05ಕ್ಕೆ.
ಸ್ಕ್ರೀನ್ 2	**ಸಪ್ತ ಸಾಗರದಾಚೆ ಎಲ್ಲೋ (ಕ):** ಬೆ.10.50ಕ್ಕೆ, **ಜವಾನ್ (ಹಿಂ):** ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	**ಜವಾನ್ (ಹಿಂ):** ಬೆ.9.10ಕ್ಕೆ, ಮ.12.45ಕ್ಕೆ, **ದಿ ಎಕ್ಸ್ಪೆಂಡಬಲ್ಸ್ (ಇಂ):** ಸಂ.4.20ಕ್ಕೆ, ರಾ.9.50ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ (ಕ):** ಸಂ.6.50ಕ್ಕೆ.
ಸ್ಕ್ರೀನ್ 4	**ಜವಾನ್ (ಹಿಂ):** ಬೆ.10ಕ್ಕೆ, **ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ):** ಮ.1.50ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, **ಮಾರ್ಕ್ ಆಂಟೋನಿ (ತ):** ಸಂ.4.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ಪರಿಶುದ್ಧಂ (ಕ):** ಬೆ.10.30ಕ್ಕೆ, **ಹನಿಮೂನ್ ಇನ್ ಬ್ಯಾಂಕಾಕ್(ಕ):** ಮ.1.30ಕ್ಕೆ, **ಧ್ವಂಧ್ವ (ಕ):** ಸಂ.4.20ಕ್ಕೆ, **ಬನ್ ಟೀ (ಕ):** ಸಂ.6.45ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ (ಕ):** ರಾ.9.15ಕ್ಕೆ.
ಸ್ಕ್ರೀನ್ 2	**ಜವಾನ್ (ಹಿಂ):** ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	**ದಿ ನನ್ 2 (ಇಂ):** ಸಂ.4.45ಕ್ಕೆ, **ಜವಾನ್ (ಹಿಂ):** ರಾ.7ಕ್ಕೆ.
ಸ್ಕ್ರೀನ್ 4	**ಜವಾನ್ (ಹಿಂ):** ಬೆ.10.30ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ (ಕ):** ಮ.1.45ಕ್ಕೆ, ಸಂ.4.45ಕ್ಕೆ, **ದಿ ನನ್ 2 (ಇಂ):** ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್ (ಕ):** ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2 (ಹಿಂ):** ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2 (ಹಿಂ):** ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ):** ರಾ.9.45ಕ್ಕೆ, **ಆಚಾರ್ & ಕೋ (ಕ):** ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ (ಕ):** ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ (ಕ):** ಬೆ.11.55ಕ್ಕೆ, **ರಾಖಿ ಔರ್ ರಾಣಿ (ಹಿಂ):** ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್ (ಇಂ):** ಸಂ.6.35ಕ್ಕೆ, **ಭೋಳಾ ಶಂಕರ್ (ತೆ):** ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2 (ಇಂ):** ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸಕಾಲದಲ್ಲಿ ಸಾಲ ಪಾವತಿಸಿ ಸವಲತ್ತು ಪಡೆಯಿರಿ



ತಿ.ನರಸೀಪುರ.ಸೆ.28– ಸಂಘದ ಸದಸ್ಯರು ಪಡೆದ ಸಾಲವನ್ನು ನಿಗದಿತ ಅವಧಿಯಲ್ಲಿ ಮರು ಪಾವತಿ ಮಾಡುವುದರ ಮೂಲಕ ಸಹಕಾರ ಸಂಘದ ಸವಲತ್ತುಗಳನ್ನು ಬಳಸಿಕೊಳ್ಳಿ ಎಂದು ಅರುಂಧತಿ ಸಹಕಾರ ಸಂಘದ ಅಧ್ಯಕ್ಷ ಕೆಂಚಪ್ಪ ಹೇಳಿದರು.

ಪಟ್ಟಣದ ಮೆಗಾ ಡ್ಯಾನ್ಸ್ ಕ್ಲಾಸ್ ಆಡಿಟೋರಿಯಂ ನಡೆದ ಅರುಂಧುತಿ ಸಹಕಾರ ಸಂಘದ 2022–23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿ, ಸಂಘದಿಂದ ವಿವಿಧೋದ್ದೇಶಗಳಿಗೆ ಸಾಲ ಪಡೆದ ಸಂಘದ ಸದಸ್ಯರು ಸಕಾಲಕ್ಕೆ ಸಾಲ ಮರು ಪಾವತಿ ಮಾಡಿದಲ್ಲಿ ಸಂಘದ ಬೆಳವಣಿಗೆ ಸಾಧ್ಯವಾಗಲಿದ್ದು, ಆರ್ಥಿಕವಾಗಿ ಮುಂದುವರೆಯಲು ಸಹಕಾರಿಯಾಗುತ್ತದೆ ಎಂದರು.

ಸಂಘದ ನಿರ್ದೇಶಕ ಹಾಗೂ ಪುರಸಭಾ ಸದಸ್ಯ ಎಲ್.ಮಂಜುನಾಥ್ ಮಾತನಾಡಿ, ಸಾಲ ಪಡೆದ ಮೇಲೆ ಸುಸ್ತಿದಾರರಾಗದೇ ಸಕಾಲಕ್ಕೆ ಸಾಲ ಮರುಪಾವತಿಸಿ ಮತ್ತೆ ಹೆಚ್ಚುವರಿ ಸಾಲ ಪಡೆದು ಸ್ವಾವಲಂಬಿ ಜೀವನ ನಡೆಸುವಂತೆ ಮನವಿ ಮಾಡಿದರು.

ಸಂಘವು ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕಾದರೆ ಸರ್ವ ಸದಸ್ಯರ ಸಹಕಾರ ಮುಖ್ಯವಾಗುತ್ತದೆ. ನಿರ್ದೇಶಕರ ಬೆಂಬಲ ಅಗತ್ಯ. ಮುಂದಿನ ದಿನಗಳಲ್ಲಿ ಸಂಘವನ್ನು ಮಾದರಿ ಸಂಘ ಮಾಡಬೇಕೆಂಬ ನನ್ನ ಆಶಯಕ್ಕೆ ಎಲ್ಲರೂ ಸಹಕಾರ ನೀಡಬೇಕೆಂದು ಮನವಿ ಮಾಡಿದರು. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಿ. ಸ್ವಾಮಿ ವಾರ್ಷಿಕ ವರದಿ ಮಂಡಿಸಿದರು. ಇದೇ ಸಂದರ್ಭದಲ್ಲಿ ಸಾವಯವ ಕೃಷಿಕ ರಾಷ್ಟ್ರ ಪ್ರಶಸ್ತಿ ವಿಜೇತ ಶ್ರೀನಿವಾಸ್ ಮೂರ್ತಿ.ಎಸ್.ಆರ್. ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ಉಪಾಧ್ಯಕ್ಷರಾದ ಲಕ್ಷ್ಮೀ ಸಿ.ಎಲ್. ನಿರ್ದೇಶಕರಾದ ಸಿದ್ದಮ್ಮ, ಶಿವಣ್ಣ, ಎಂ.ಎಸ್. ಪ್ರಸಾದ್ (ವ್ಯಾಸರಾಜಪುರ), ಸುನಿಲ್ ಕುಮಾರ್ ಬಿಎಸ್, ಟಿ.ನಾಗಣ್ಣ, ನವೀನ್, ರಾಜು, ಮಹದೇವಸ್ವಾಮಿ (ಮೂಗೂರು), ನಾಗರಾಜು, ಮಂಜು .ಎನ್ (ಕೇತಹಳ್ಳಿ) ಪ್ರಭು (ಬನ್ನೂರು) ಮಂಜುನಾಥ್ ಬಿ ರಜಿನೇಶ್ ಸಭೆಯಲ್ಲಿ ಭಾಗವಹಿಸಿದ್ದರು

ರಾಜ್ಯ ಮಟ್ಟಕ್ಕೆ ಆಯ್ಕೆ



ಹುಣಸೂರು.ಸೆ.28– ಟ್ಯಾಲೆಂಟ್ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿ ಭರತ್ ವಾಲಿಬಾಲ್ ಪಂದ್ಯಾವಳಿಯಲ್ಲಿ ಜಿಲ್ಲಾ ಮಟ್ಟದಿಂದ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ ಎಂದು ಟ್ಯಾಲೆಂಟ್ ಸಂಸ್ಥೆಯ ಪ್ರಾಂಶುಪಾಲ ಮಂಜುನಾಥ್ ತಿಳಿಸಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿ ಬದಲಾವಣೆಯನ್ನು ವಿದ್ಯಾವಂತರು, ಬುದ್ಧಿವಂತರು ಪ್ರಶ್ನಿಸಬೇಕು

ಶಿಕ್ಷಣ ತಜ್ಞರ ಸಭೆಯಲ್ಲಿ ಶಾಸಕ ಕೋಟಾ ಶ್ರೀನಿವಾಸ ಪೂಜಾರಿ ಸಲಹೆ

ಮೈಸೂರು, ಸೆ.28(ಬಿಎಲ್‌ಯು)– ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಬದಲಾವಣೆ ಮಾಡುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ನಿರ್ಧಾರವನ್ನು ರಾಜ್ಯದ ವಿದ್ಯಾವಂತ ಹಾಗೂ ಬುದ್ಧಿವಂತರು ಪ್ರಶ್ನಿಸಬೇಕು ಎಂದು ಮಾಜಿ ಸಚಿವರೂ ಆದ ಹಾಲಿ ವಿಧಾನಪರಿಷತ್ ಸದಸ್ಯ ಕೋಟಾ ಶ್ರೀನಿವಾಸ ಪೂಜಾರಿ ಸಲಹೆ ನೀಡಿದ್ದಾರೆ.



ಮೈಸೂರಿನ ನಜರ್‌ಬಾದ್‌ನ ವಿ.ಕೆ. ಫಂಕ್ಷನ್ ಹಾಲ್‌ನಲ್ಲಿ ಪೀಪಲ್ಸ್ ಫೋರಮ್ ಫಾರ್ ಕರ್ನಾಟಕ ಎಜುಕೇಷನ್ ಆಯೋಜಿಸಿದ್ದ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತ ಶಿಕ್ಷಣ ತಜ್ಞರ ವಿಶೇಷ ಸಭೆಯಲ್ಲಿ ಮಾತನಾಡಿದ ಅವರು, ಯಾವುದೇ ಕಾರಣ ನೀಡದೆ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಬದಲಾವಣೆ ಮಾಡುವ ರಾಜ್ಯ ಕಾಂಗ್ರೆಸ್ ಸರ್ಕಾರದ ಏಕ ನಿಲುವು ಪೂರ್ವಾಗ್ರಹ ಪೀಡಿತ ಎಂದು ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಅವರು ತೀವ್ರ ತರಾಟೆಗೆ ತೆಗೆದುಕೊಂಡರು. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಯಾವುದು ತಪ್ಪು ಎಂದು ವಿಶ್ಲೇಷಿಸದೆ ಸುಖಾಸುಮ್ಮನೆ ಬದಲಾವಣೆ ಮಾಡುತ್ತೇವೆ ಎಂದರೆ ಏನು ಅರ್ಥ ಎಂದು ಪ್ರಶ್ನಿಸಿದರು.

ಪರಿಪೂರ್ಣವಾಗಿ ಅಧ್ಯಯನ ಮಾಡಿ ಮಾದರಿ ಶಿಕ್ಷಣ ನೀತಿ ಜಾರಿಗೊಳಿಸಲಾಗಿದೆ. ಆದರೆ ಇದನ್ನು ಅರಿಯದ ಕಾಂಗ್ರೆಸ್ ಸರ್ಕಾರ ಇದನ್ನು ಕಿತ್ತು ಬಿಸಾಕುತ್ತೇವೆ ಎಂದು ಉದ್ಧಟತನದಿಂದ ವರ್ತಿಸುತ್ತಿದೆ ಎಂದು ಶ್ರೀನಿವಾಸ ಪೂಜಾರಿ ಕಿಡಿಕಾರಿದರು. ವಿದ್ಯಾವಂತರು ಹಾಗೂ ಬುದ್ಧಿವಂತರು ಮೌನವಹಿಸಿದರೆ ಪ್ರಜಾತಂತ್ರ ವ್ಯವಸ್ಥೆ ಅಪಾಯಕ್ಕೆ ಸಿಲುಕುತ್ತದೆ. ಈ ಹಿನ್ನೆಲೆ ರಾಷ್ಟ್ರೀಯ ಶಿಕ್ಷಣ ನೀತಿ ಬದಲಾವಣೆ ಮಾಡುತ್ತಿರುವ ಬಗ್ಗೆ ಜನರು ಮುಕ್ತವಾಗಿ ಮಾತನಾಡಬೇಕು, ಚರ್ಚೆ ಮಾಡಬೇಕು, ಪ್ರಶ್ನಿಸಬೇಕು. ಈ ಎಲ್ಲಾ ವಿಚಾರ ರಾಜಕಾರಣಿಗಳಿಗೆ ಮಾತ್ರ ಸೀಮಿತ ಎಂಬ ಮನೋಭಾವನೆ ಇಟ್ಟುಕೊಳ್ಳಬಾರದು ಎಂದು ಹೇಳಿದರು. ಕರ್ನಾಟಕದ 6.50 ಕೋಟಿ ಜನಸಂಖ್ಯೆಯಲ್ಲಿ ಶೇಕಡ 1 ರಷ್ಟು ಜನರಿಗೆ ಸರ್ಕಾರಿ ಉದ್ಯೋಗ ನೀಡಲು ಸಾಧ್ಯವಿಲ್ಲ. ಇದರಿಂದ ಉಳಿದ ಜನರು ಸ್ವಯಂ ಉದ್ಯೋಗ ಕಂಡುಕೊಳ್ಳಬೇಕು. ಬಿಜೆಪಿ ಸರ್ಕಾರ ರೂಪಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿ ಸ್ವಯಂ ಉದ್ಯೋಗ ಪರಿಕಲ್ಪನೆ ಹೊಂದಿದೆ ಎಂದು ಶ್ರೀನಿವಾಸ ಪೂಜಾರಿ ಅರ್ಥೈಸಿದರು. ಕರ್ನಾಟಕದಲ್ಲಿ 48 ಸಾವಿರ ಶಾಲೆಗಳಿದ್ದು, ಎರಡು ಲಕ್ಷ ಶಿಕ್ಷಕರಿದ್ದಾರೆ. ಒಟ್ಟಾರೆ ಬಜೆಟ್‌ನಲ್ಲಿ ಶೇ.11 ರಷ್ಟು ಅಂದರೆ 32.582 ಕೋಟಿ ರೂ. ಶಿಕ್ಷಣ ಕ್ಷೇತ್ರಕ್ಕೆ ನೀಡಲಾಗುತ್ತಿದೆ. ಶಿಕ್ಷಣ ಕ್ಷೇತ್ರದ ಬೆಳವಣಿಗೆಗೆ ಪೂರಕವಾದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ. ಆದರೆ ರಾಜ್ಯ ಕಾಂಗ್ರೆಸ್ ಸರ್ಕಾರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಬದಲಾವಣೆ ಮಾಡಿದರೆ ಇನ್ನು 5 ವರ್ಷದಲ್ಲಿ ಸುಮಾರು 10 ಸಾವಿರ ಶಾಲೆಗಳನ್ನು ಮುಚ್ಚಬೇಕಾದ ಪರಿಸ್ಥಿತಿ ಬರುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ನನಗೆ ಜಾತಿ, ಧರ್ಮಕ್ಕಿಂತ ಈ ದೇಶವೇ ಮುಖ್ಯವೆಂದರೆ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಸರಿಸಬೇಕು. ಈ ಮೂಲಕ ಶಿಕ್ಷಣ ಹಾಗೂ ದೇಶದ ಅಭಿವೃದ್ಧಿಗೆ ಕೈ ಜೋಡಿಸಬೇಕು ಎಂದು ಶ್ರೀನಿವಾಸ ಪೂಜಾರಿ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಸಲಹೆ ನೀಡಿದರು. ವಿಧಾನಸಭೆ, ವಿಧಾನ ಪರಿಷತ್ ಸೇರಿದಂತೆ ಇತರೆ ಜನಪ್ರತಿನಿಧಿಗಳ ಸಭೆಗಳಲ್ಲಿ ಕಾನೂನು ಮತ್ತು ಕಾಯ್ದೆಗಳನ್ನು ರೂಪಿಸುವಾಗ ಚರ್ಚೆ ನಡೆಯದೆ ಅವು ಅನುಮೋದನಗೊಳ್ಳುತ್ತಿದೆ. ಆದರೆ ಕಾನೂನು, ಕಾಯ್ದೆ ಜಾರಿಗೊಳ್ಳುವ ವೇಳೆ ಅದರ ಬಗ್ಗೆ ಚರ್ಚೆ ನಡೆಯುತ್ತಿರುವುದು ದುರದೃಷ್ಟಕರ ಸಂಗತಿ ಎಂದು ಶ್ರೀನಿವಾಸ ಪೂಜಾರಿ ಹೇಳಿದರು.

ಪ್ರಾಸ್ತಾವಿಕ ನುಡಿಗಳಾಡಿದ ಸಿಂಡಿಕೇಟ್ ಮಾಜಿ ಸದಸ್ಯರಾದ ಡಾ.ಈ.ಸಿ.ನಿಂಗರಾಜ್ ಗೌಡ, ರಾಷ್ಟ್ರೀಯ ಶಿಕ್ಷಣ ನೀತಿ ಬದಲಾವಣೆ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರದ ಕ್ರಮ ರಾಜಕೀಯ ಪ್ರೇರಿತ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡ, ಬೆಂಗಳೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ವೇಣುಗೋಪಾಲ್, ಹಿರಿಯ ಪತ್ರಕರ್ತ ರವೀಂದ್ರ ರೇಷ್ಮೆ, ಪ್ರೊ.ಜಿ.ಸಿ. ರಾಜಣ್ಣ ಹಾಗೂ ವಸಂತಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಮಕ್ಕಳ ಬೌದ್ಧಿಕ ಮಟ್ಟ ಸುಧಾರಣೆ

ವಿಶ್ರಾಂತ ಕುಲಪತಿ ಡಾ.ಚಿದಾನಂದಗೌಡ ಅಭಿಮತ

ಮೈಸೂರು, ಸೆ.28(ಬಿಎಲ್‌ಯು)– ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಮಕ್ಕಳ ಬೌದ್ಧಿಕ ಮಟ್ಟ ಹೆಚ್ಚಳವಾಗಲಿದೆ ಎಂಬುದು ಸಮೀಕ್ಷೆಯಿಂದ ದೃಢಪಟ್ಟಿದೆ ಎಂದು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ. ಚಿದಾನಂದಗೌಡರು ತಿಳಿಸಿದರು.



ಈ ಹಿಂದಿನ ರಾಷ್ಟ್ರೀಯ ಶಿಕ್ಷಣ ನೀತಿ ವಿಶ್ವವಿದ್ಯಾನಿಲಯ ಹಾಗೂ ಪ್ರಾಧ್ಯಾಪಕರ ಕೇಂದ್ರೀಕೃತವಾಗಿತ್ತು. ಆದರೆ ಈಗ ಜಾರಿಗೆ ತರಲು ಉದ್ದೇಶಿಸಿರುವ ಶಿಕ್ಷಣ ನೀತಿ ವಿದ್ಯಾರ್ಥಿ ಕೇಂದ್ರೀಕೃತವಾಗಿದೆ ಎಂದು ಅಭಿಪ್ರಾಯಪಟ್ಟರು. ಒಂದನೇ ತರಗತಿಯಲ್ಲಿ ಶೇ.100ರಷ್ಟು ಇದ್ದ ಮಕ್ಕಳ ಸೃಜನಶೀಲತೆ 10ನೇ ವಯಸ್ಸಿಗೆ ಬಂದಾಗ ಶೇಕಡ 10ಕ್ಕೆ ಕುಸಿದಿದೆ. ಆದರೆ ಶಿಕ್ಷಣದ ಬೆಳವಣಿಗೆಗೆ ಪೂರಕವಾದ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಶಿಕ್ಷಣ ಮಟ್ಟ ಮತ್ತಷ್ಟು ಸುಧಾರಿಸಲು ಸಹಕಾರಿಯಾಗಲಿದೆ ಎಂದು ಹೇಳಿದರು. ಈ ಹಿಂದೆ 1948ರಲ್ಲಿ, 1968ರಲ್ಲಿ ಹಾಗೂ 1986ರಲ್ಲಿ ಮೂರು ಶಿಕ್ಷಣ ನೀತಿ ಕಾಣಬೇಕಾದರೆ 34 ವರ್ಷಗಳ ಕಾಲ ಬೇಕಾಯಿತು. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮಾತೃ ಭಾಷೆ ಹಾಗೂ ವೃತ್ತಿಪರ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ. ಇದರಿಂದ ಶಿಕ್ಷಣದ ಬೆಳವಣಿಗೆ ಇಮ್ಮಡಿಗೊಳ್ಳಲಿದೆ ಎಂದು ಡಾ.ಚಿದಾನಂದಗೌಡ ಹೇಳಿದರು.

ರಾಷ್ಟ್ರೀಯ ಶಿಕ್ಷಣ ನೀತಿ ಬದಲಾದರೆ ಬಡ, ಮಧ್ಯಮ ವರ್ಗದ ಮಕ್ಕಳ ಮೇಲೆ ಪರಿಣಾಮ: ಹಿರಿಯ ಪತ್ರಕರ್ತ ರವೀಂದ್ರ ರೇಷ್ಮೆ ಆತಂಕ

ಕಾಂಗ್ರೆಸ್ ವಿರುದ್ಧ ಹೋರಾಟ ಮಾಡಿದ್ದ ಸಿದ್ದರಾಮಯ್ಯರಿಗೆ ಈಗ ಗಾಂಧಿ ಕುಟುಂಬ ಬಿಟ್ಟು ಬೇರೇನೂ ಕಾಣಿಸುತ್ತಿಲ್ಲ

ಮೈಸೂರು, ಸೆ.28(ಬಿಎಲ್‌ಯು)– ಬಹಳ ಕಾಲದಿಂದ ಕಾಂಗ್ರೆಸ್ ವಿರುದ್ಧ ಹೋರಾಟ ಮಾಡಿಕೊಂಡೇ ಬಂದಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಣ್ಣಿಗೆ ಈಗ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ಮತ್ತು ಅವರ ಮಕ್ಕಳನ್ನು ಬಿಟ್ಟರೆ ಬೇರೆಯವರು, ಅವರು ರೂಪಿಸಿದ್ದಂತಹ ಒಳ್ಳೆಯ ವಿಚಾರ, ನೀತಿಗಳು ಕಾಣಿಸುತ್ತಲೇ ಇಲ್ಲ. ರಾಷ್ಟ್ರೀಯ ಶೈಕ್ಷಣಿಕ ನೀತಿ ಬದಲಾದರೆ ಬಡ ಮತ್ತು ಮಧ್ಯಮ ವರ್ಗದ ಮಕ್ಕಳ ಮೇಲೆ ಪರಿಣಾಮ ಉಂಟಾಗಲಿದೆ ಎಂದು ಹಿರಿಯ ಪತ್ರಕರ್ತರೂ ಆದ ವಿಮರ್ಶಕ ರವೀಂದ್ರ ರೇಷ್ಮೆ ಟೀಕಿಸಿದರು.



ಮೈಸೂರಿನ ನಜರ್‌ಬಾದ್‌ನ ವಿ.ಕೆ. ಫಂಕ್ಷನ್ ಹಾಲ್‌ನಲ್ಲಿ ಪೀಪಲ್ಸ್ ಫೋರಮ್ ಫಾರ್ ಕರ್ನಾಟಕ ಎಜುಕೇಷನ್ ಆಯೋಜಿಸಿದ್ದ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತ ಶಿಕ್ಷಣ ತಜ್ಞರ ವಿಶೇಷ ಸಭೆಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಈ ಹಿಂದೆ ಹಲವರ ಜೊತೆ ಸೇರಿ ಕಾಂಗ್ರೆಸ್ ವಿರುದ್ಧ ಹೋರಾಟ ಮಾಡಿಕೊಂಡು ರಾಜಕೀಯ ದಿನಗಳನ್ನು ಕಳೆದಿದ್ದರು. ಆದರೆ ಈಗ ಅದೇ ಕಾಂಗ್ರೆಸ್‌ನ ಗಾಂಧಿ ಕುಟುಂಬ ಬಿಟ್ಟು ಅವರಿಗೆ ಬೇರೆ ಯಾರೂ ಕಾಣಿಸುತ್ತಿಲ್ಲ ಎಂದು ಲೇವಡಿ ಮಾಡಿದರು. ಪ್ರಧಾನಮಂತ್ರಿಗಳಾಗಿದ್ದ ಜವಾಹರಲಾಲ್ ನೆಹರು, ಇಂದಿರಾ ಗಾಂಧಿ ಹಾಗೂ ರಾಜೀವ್ ಗಾಂಧಿ ಅವರ ಕಾಲದಲ್ಲಿ ಕೂಡ ಶಿಕ್ಷಣ ಕ್ಷೇತ್ರದಲ್ಲಿ ಹಲವು ನೀತಿಗಳನ್ನು ರೂಪಿಸಲಾಗಿತ್ತು. ನಂತರವೂ ಬೇರೆಯವರು ಶೈಕ್ಷಣಿಕ ನೀತಿ ರೂಪಿಸಿರುವುದು ಇವರಿಗೆ ಕಾಣಿಸುತ್ತಿಲ್ಲ. ಈಗ ಅವರಿಗೆ ಕಾಣಿಸುತ್ತಿರುವುದು ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಪ್ರಿಯಾಂಕ ಗಾಂಧಿ ಮತ್ತು ಅವರ ಮಕ್ಕಳು ಮಾತ್ರ ಎಂದು ರವೀಂದ್ರ ರೇಷ್ಮೆ ಗೇಲಿ ಮಾಡಿದರು. ರಾಷ್ಟ್ರೀಯ ಪಾಠ ಕಲಿಸಿದ ಕಾಂಗ್ರೆಸ್ ಇವತ್ತು ರಾಷ್ಟ್ರ ಮಾದರಿಯ ಶಿಕ್ಷಣ ನೀತಿಯನ್ನು ಯಾವ ಕಾರಣಕ್ಕೆ ತಿರಸ್ಕರಿಸುತ್ತಿದೆ ಎಂಬುದು ಅರ್ಥವಾಗುತ್ತಿಲ್ಲ. ರಾಷ್ಟ್ರೀಯ ಶಿಕ್ಷಣ ನೀತಿ ಸರಿಯಿಲ್ಲ, ಮಕ್ಕಳು ಶಾಲೆಯಿಂದ ಹೊರಗುಳಿಯುತ್ತಾರೆ ಎಂಬ ಅವರ ಅಭಿಪ್ರಾಯ ಸುಳ್ಳು ಎಂದು ಹೇಳಿದರು.

ರಾಷ್ಟ್ರೀಯ ಶಿಕ್ಷಣ ನೀತಿಯ ನೈಜ ಸಂಗತಿ ತಿಳಿಯುವ ಸಲುವಾಗಿ ಕರ್ನಾಟಕದ ಸಾಕ್ಷಿ ಪ್ರಜ್ಞೆಯನ್ನು ಬಡಿದೆಬ್ಬಿಸಬೇಕಿದ್ದರೆ ರಾಷ್ಟ್ರೀಯ ಶಿಕ್ಷಣ ನೀತಿ ತಜ್ಞರ ಸಭೆ ಕರೆಯಬೇಕಿದೆ ಎಂದು ರವೀಂದ್ರ ರೇಷ್ಮೆ ಅಭಿಪ್ರಾಯಪಟ್ಟರು. ಬಜೆಟ್ ಮಂಡಿಸುವ ವೇಳೆ ರಾಷ್ಟ್ರೀಯ ಶಿಕ್ಷಣ ನೀತಿ ರದ್ದು ಮಾಡುವುದಾಗಿ ಸಿದ್ದರಾಮಯ್ಯ ಏಕಾಏಕಿ ಹೇಳಿದರು. ರಾಷ್ಟ್ರೀಯ ಶಿಕ್ಷಣ ನೀತಿ ಸಮಿತಿಯ ಅಧ್ಯಕ್ಷ ಡಾ.ಕಸ್ತೂರಿ ರಂಗನ್ ಅವರು ಈ ವಿಚಾರ ಕೇಳಿ ತೀವ್ರವಾಗಿ ಮನನೊಂದಿದ್ದರು ಎಂದು ರವೀಂದ್ರ ರೇಷ್ಮೆ ತಾವು ನೋವಿನಿಂದಲೇ ನುಡಿದರು.

ರಾಜೀವ್ ಗಾಂಧಿ ಪ್ರಧಾನಿ ಆಗಿದ್ದಾಗ ಡಾ. ರಾಧಾಕೃಷ್ಣನ್ ವರದಿ ಶಿಫಾರಸ್ಸಿನಂತೆ ಯುಜಿಸಿ ಜಾರಿಗೊಳಿಸಲಾಯಿತು. ಐಪಿಎಸ್ ಹಾಗೂ ಐಎಎಸ್ ಅಧಿಕಾರಿಗಳಿಗೆ ಸಮಾನಾಂತರವಾಗಿ ಶಿಕ್ಷಕರಿಗೆ ವೇತನ ನೀಡಲಾಯಿತು. ಆದರೆ ಶಿಕ್ಷಕರು ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದರೆ ಶಿಕ್ಷಣ ವ್ಯವಸ್ಥೆ ಈ ಮಟ್ಟಕ್ಕೆ ಬರುತ್ತಿರಲಿಲ್ಲ ಎಂದು ರವೀಂದ್ರ ರೇಷ್ಮೆ ಅಭಿಪ್ರಾಯಪಟ್ಟರು.

ರಾಷ್ಟ್ರೀಯ ಶಿಕ್ಷಣ ನೀತಿ ಕುರಿತಂತೆ ಸೇವಾನಿರತ ಕುಲಪತಿಗಳು, ಪ್ರಾಧ್ಯಾಪಕರು ಹಾಗೂ ಶಿಕ್ಷಣ ತಜ್ಞರು ಮಾತನಾಡಬೇಕು. ಒಂದು ವೇಳೆ ಇವರೆಲ್ಲಾ ಮೌನವಾದರೆ ದೊಡ್ಡ ಅಪಾಯವಿದೆ ಎಂದು ಎಚ್ಚರಿಸಿದ ರವೀಂದ್ರ ರೇಷ್ಮೆ ರಾಷ್ಟ್ರೀಯ ಶಿಕ್ಷಣ ನೀತಿ ಬದಲಾದರೆ ಬಡ ಮತ್ತು ಮಧ್ಯಮ ವರ್ಗಗಳ ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ ಎಂದು ಹೇಳಿದರು.

ಗಾಯದಿಂದ ಚೇತರಿಸಿಕೊಳ್ಳದೆ 2023ರ ವಿಶ್ವಕಪ್‌ನಿಂದ ಹೊರಬಿದ್ದ ಅಕ್ಷರ್ ಪಟೇಲ್; ತಂಡಕ್ಕೆ ಆರ್.ಅಶ್ವಿನ್ ಎಂಟ್ರಿ!

ನವದೆಹಲಿ, ಸೆ.28– ಭಾರತ ತಂಡದ ಆಲ್‌ರೌಂಡರ್ ಅಕ್ಷರ್ ಪಟೇಲ್ 2023ರ ಐಸಿಸಿ ಕ್ರಿಕೆಟ್ ವಿಶ್ವಕಪ್‌ನಿಂದ ಹೊರಗುಳಿದಿದ್ದಾರೆ. ಏಷ್ಯಾಕಪ್ 2023ರ ಸಂದರ್ಭದಲ್ಲಿ ಅಕ್ಷರ್ ಪಟೇಲ್ ಗಾಯಗೊಂಡಿದ್ದರು. ಆದರೆ ಅವರು ಇನ್ನೂ ಚೇತರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ(ಬಿಸಿಸಿಐ) ಅವರ ಬದಲಿ ಆಟಗಾರನನ್ನು ಘೋಷಿಸಬೇಕಾಯಿತು.



2023ರ ವಿಶ್ವಕಪ್‌ನಲ್ಲಿ ಅಕ್ಷರ್ ಪಟೇಲ್ ಆಡುವುದಿಲ್ಲ ಎಂದು ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ(ಐಸಿಸಿ) ದೃಢಪಡಿಸಿದೆ. ಅವರ ಬದಲಿಗೆ ಆಲ್‌ರೌಂಡರ್ ರವಿಚಂದ್ರನ್ ಅಶ್ವಿನ್ ತಂಡದ ಭಾಗವಾಗಲಿದ್ದಾರೆ.

ಐಸಿಸಿ ಪುರುಷರ ಕ್ರಿಕೆಟ್ ವಿಶ್ವಕಪ್‌ಗಾಗಿ ಭಾರತ ತನ್ನ 15 ಸದಸ್ಯರ ತಂಡದಲ್ಲಿ ಕೊನೆಯದಾಗಿ ಬದಲಾವಣೆಗಳನ್ನು ಮಾಡಲು ಒತ್ತಾಯಿಸಲಾಗಿದೆ ಎಂದು ಐಸಿಸಿ ತನ್ನ ವೆಬ್‌ಸೈಟ್‌ನಲ್ಲಿ ತಿಳಿಸಿದೆ. ಏಷ್ಯಾ ಕಪ್ ಸೂಪರ್ 4 ಪಂದ್ಯದ ವೇಳೆ ಬಾಂಗ್ಲಾದೇಶದ ವಿರುದ್ಧ ಭಾರತದ ಸ್ಪಿನ್ನರ್ ಅಕ್ಷರ್ ಪಟೇಲ್ ಗಾಯಗೊಂಡಿದ್ದರು. ವಿಶ್ವಕಪ್ ಸಮಯದಲ್ಲಿ ಚೇತರಿಸಿಕೊಳ್ಳಲು ವಿಫಲರಾದ ಪರಿಣಾಮವಾಗಿ ಸ್ಪಿನ್ ಬೌಲಿಂಗ್ ಆಲ್‌ರೌಂಡರ್ ಅವರನ್ನು ವಿಶ್ವಕಪ್‌ನಿಂದ ಹೊರಗಿಡಲಾಗಿದೆ.

ಟೀಂ ಇಂಡಿಯಾದ ಅಭ್ಯಾಸ ಪಂದ್ಯಕ್ಕಾಗಿ ಗುವಾಹಟಿ ತಲುಪಿರುವ ಅನುಭವಿ ಆಫ್‌ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ತಂಡವನ್ನು ಸೇರಿಕೊಂಡಿದ್ದಾರೆ. ಆಸ್ಟ್ರೇಲಿಯಾ ವಿರುದ್ಧ ಇತ್ತೀಚೆಗೆ ಮುಕ್ತಾಯಗೊಂಡ ಮೂರು ಪಂದ್ಯಗಳ ODI ಸರಣಿಯಲ್ಲಿ ಅಶ್ವಿನ್ ಏಕದಿನದಲ್ಲಿ ಅದ್ಭುತ ಪ್ರದರ್ಶನ ನೀಡಿದ್ದರು. ಅವರು ಎರಡು ಪಂದ್ಯಗಳಲ್ಲಿ ನಾಲ್ಕು ವಿಕೆಟ್ ಪಡೆದಿದ್ದರು.

ಭಾರತದ ವಿಶ್ವಕಪ್ ತಂಡ: ರೋಹಿತ್ ಶರ್ಮಾ (ನಾಯಕ), ಹಾರ್ದಿಕ್ ಪಾಂಡ್ಯ(ಉಪನಾಯಕ), ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆಎಲ್ ರಾಹುಲ್, ರವೀಂದ್ರ ಜಡೇಜಾ, ಶಾರ್ದೂಲ್ ಠಾಕೂರ್, ಜಸ್ಪ್ರೀತ್ ಬುಮ್ರಾ, ಮೊಹಮ್ಮದ್ ಸಿರಾಜ್, ಕುಲದೀಪ್ ಯಾದವ್, ಮೊಹಮ್ಮದ್ ಶಮಿ, ರವಿಚಂದ್ರನ್ ಅಶ್ವಿನ್, ಇಶಾನ್ ಕಿಶನ್ ಮತ್ತು ಸೂರ್ಯಕುಮಾರ್ ಯಾದವ್.

7 ವರ್ಷಗಳ ನಂತರ ಭಾರತವನ್ನು ತಲುಪಿದ ಪಾಕ್ ತಂಡ: ಕೇಸರಿ ಶಾಲು ಹಾಕಿ ಸ್ವಾಗತ





ಹೈದರಾಬಾದ್, ಸೆ.28– ಮುಂಬರುವ ಏಕದಿನ ವಿಶ್ವಕಪ್‌ನಲ್ಲಿ ಭಾಗವಹಿಸಲು ಪಾಕಿಸ್ತಾನ ಕ್ರಿಕೆಟ್ ತಂಡ ನಿನ್ನೆ ಭಾರತವನ್ನು ತಲುಪಿದೆ. ಸುಮಾರು 7 ವರ್ಷಗಳ ಬಳಿಕ ಪಾಕಿಸ್ತಾನ ಕ್ರಿಕೆಟ್ ತಂಡ ಭಾರತಕ್ಕೆ ಆಗಮಿಸಿದ್ದು, ಕೇಸರಿ ಶಾಲು ಹಾಕಿ ಆಟಗಾರರನ್ನು ಸ್ವಾಗತಿಸಲಾಯಿತು. ಈ ಹಿಂದೆ 2016ರಲ್ಲಿ ಟಿ20 ವಿಶ್ವಕಪ್ ವೇಳೆ ಪಾಕಿಸ್ತಾನ ತಂಡ ಭಾರತಕ್ಕೆ ಬಂದಿತ್ತು.

ವೀಸಾ ಸಮಸ್ಯೆಯಿಂದಾಗಿ ಪಾಕಿಸ್ತಾನ ಕ್ರಿಕೆಟ್ ತಂಡದ ಭಾರತ ಪ್ರವಾಸ ವಿಳಂಬವಾಗಿದೆ. ಸಮಯಕ್ಕೆ ಸರಿಯಾಗಿ ವೀಸಾ ಸಿಗದ ಕಾರಣ, ತಂಡವು ತನ್ನ ಯೋಜನೆಯಲ್ಲಿ ಹಲವು ಬದಲಾವಣೆಗಳನ್ನು ಮಾಡಬೇಕಾಯಿತು. ಅಭ್ಯಾಸ ಪಂದ್ಯಕ್ಕಾಗಿ ಸೆಪ್ಟೆಂಬರ್ 27ರಂದು ಹೈದರಾಬಾದ್ ತಲುಪುವ ಮೊದಲು ಪಾಕಿಸ್ತಾನವು ದುಬೈನಲ್ಲಿ ಎರಡು ದಿನಗಳ ಟೀಮ್ ಬಾಂಡಿಂಗ್ ಅಧಿವೇಶನಕ್ಕೆ ಒಳಗಾಗಬೇಕಿತ್ತು. ಆದರೆ ಭಾರತೀಯ ವೀಸಾಗಳ ಅನಿಶ್ಚಿತತೆಯಿಂದಾಗಿ ದುಬೈ ಕಾರ್ಯಕ್ರಮವನ್ನು ರದ್ದುಗೊಳಿಸಲಾಯಿತು.

ಪಾಕಿಸ್ತಾನ ಕ್ರಿಕೆಟ್ ತಂಡ 18 ಆಟಗಾರರು ಮತ್ತು 13 ಸಹಾಯಕ ಸಿಬ್ಬಂದಿಯೊಂದಿಗೆ ಭಾರತಕ್ಕೆ ಬಂದಿದೆ. ಪಾಕಿಸ್ತಾನ ತಂಡ ಸೆಪ್ಟೆಂಬರ್ 27ರಂದು ರಾತ್ರಿ 8.15ರ ಸುಮಾರಿಗೆ ಭಾರತವನ್ನು ತಲುಪಿದೆ. ತಂಡದ ಮೊದಲ ಅಭ್ಯಾಸ ಪಂದ್ಯವು ಸೆಪ್ಟೆಂಬರ್ 29ರಂದು ನ್ಯೂಜಿಲೆಂಡ್ ವಿರುದ್ಧ ನಡೆಯಲಿದೆ. ಎರಡನೇ ಅಭ್ಯಾಸ ಪಂದ್ಯ ಅಕ್ಟೋಬರ್ 4ರಂದು ಆಸ್ಟ್ರೇಲಿಯಾ ವಿರುದ್ಧ ನಡೆಯಲಿದೆ. ಪಾಕಿಸ್ತಾನ ತಂಡ ವಿಶ್ವಕಪ್‌ನಲ್ಲಿ ತನ್ನ ಮೊದಲ ಪಂದ್ಯವನ್ನು ಅಕ್ಟೋಬರ್ 6ರಂದು ನೆದರ್ಲೆಂಡ್ಸ್ ವಿರುದ್ಧ ಆಡಲಿದೆ.

ಪಾಕಿಸ್ತಾನ ತಂಡ ಕೊನೆಯದಾಗಿ 2016ರಲ್ಲಿ ಭಾರತದಲ್ಲಿ ನಡೆದ ಟಿ20 ವಿಶ್ವಕಪ್‌ನಲ್ಲಿ ಭಾಗವಹಿಸಿತ್ತು. ಉಭಯ ದೇಶಗಳ ನಡುವಿನ ರಾಜತಾಂತ್ರಿಕ ಉದ್ವಿಗ್ನತೆಯಿಂದಾಗಿ, ಏಷ್ಯಾ ಕಪ್ ಮತ್ತು ಐಸಿಸಿ ಪಂದ್ಯಾವಳಿಗಳಲ್ಲಿ ಮಾತ್ರ ಕ್ರಿಕೆಟ್ ತಂಡಗಳು ಪರಸ್ಪರರ ವಿರುದ್ಧ ಆಡುತ್ತವೆ.

ಪಾಕಿಸ್ತಾನ ತಂಡ: ಬಾಬರ್ ಅಜಮ್(ನಾಯಕ), ಶಾದಾಬ್ ಖಾನ್, ಫಖರ್ ಜಮಾನ್, ಇಮಾಮ್ ಉಲ್ ಹಕ್, ಅಬ್ದುಲ್ಲಾ ಶಫೀಕ್, ಮೊಹಮ್ಮದ್ ರಿಜ್ವಾನ್, ಸೌದ್ ಶಕೀಲ್, ಇಫ್ತಿಕರ್ ಅಹ್ಮದ್, ಸಲ್ಮಾನ್ ಅಲಿ ಆಗಾ, ಮೊಹಮ್ಮದ್ ನವಾಜ್, ಉಸಾಮಾ ಮಿರ್, ಹ್ಯಾರಿಸ್ ರೌಫ್, ಹಸನ್ ಅಲಿ, ಶಾಹೀನ್ ಅಫ್ರಿದಿ ಮತ್ತು ಮೊಹಮ್ಮದ್ ವಾಸಿಂ.

PUBLIC NOTICE.

My clients, A P VIVEK SON OF LATE A.R. SAMPATH KUMAR, Smt.A.V. Mahima Daughter of Shri.A.P. Vivek, Smt.A.V. Sai Varshini Daugher of Shri.A.P. Vivek all the Grandchildren of Late A.R. Sampath Kumar are the joint holders of Schedule Property PUBLIC HEREBY INFORMED THAT in any manner whatsoever with any such individual or firm in spite of this Public Notice Transfers or deal with the so called property, they shall be doing the same at their own risk, as to the cost and consequences arising thereof and the said transactions shall not be binding and shall be illegal and null.

If any person has got any claim of right, title interest over the schedule mentioned property or dispute over the same, they are hereby requested/ called upon to lodge their whatsoever claim with documentary proof to the undersigned Advocate within 5 (Five) days, otherwise, my client will proceed to finalize the sale transaction and any claim made thereafter, will not affect the right of my client in any manner.

SCHEDULE OF THE PROPERTY

All the piece and parcel of the property Bifurcated Site bearing No.2932 L-4, Ashok Road, 32 East Cross, Mysuru-570 001.

Sd/- K.V. HARISH Advocate,
No.34/13, NPD Complex,
South Cross No.5, Vinobha Road,
Sriramapet, Devaraja Mohalla,
MYSORE- 570001.
Mob: 98453-80376

Date:28.09.2023
Place:Mysore.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು